ಪುಸ್ತಕ ಪ್ರಪಂಚ

ಜುಲೈ-೧೯೯೭



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೪೭ ಸಂಚಿಕೆ-೧೦

ಜುಲೈ-೧೯೯೭

ಮುಖ ಚಿತ್ರ:

ಜನಸಂಖ್ಯಾ ಹೆಜ್ಜೆಗಳು

ಕೃಪೆ: ರಾಜ್ಯ ಸಂಪನ್ಮೂಲ ಕೇಂದ್ರ

ಪರಿವಿಡಿ

PUSTAKA PRAPANCHA: Monthly

Published and printed by Karnataka State Adult Education Council, Mysore-6. Price : Rupees Six

ಬಿಡಿಪ್ರತಿ : ರೂ. ೬

ವಾರ್ಷಿಕ ಚಂದಾ : ರೂ. ೬೦

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೪೦೦

ಸಂಸ್ಥೆಗೆ : ರೂ. ೬೦೦

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು–೫೭೦ ೦೦೬

ಜನಸಂಖ್ಯಾ ಸ್ಫೋಟ; ಗಾತ್ರ: ಗುಣ

ಸಿ. ನಾಗಣ್ಣ
ಇಂಗ್ಲಿಷ್ ಪ್ರಾಧ್ಯಾಪಕರು
ಮಹಾರಾಜ ಕಾಲೇಜು, ಮೈಸೂರು

"ಜುಲೈ ೧೧ ವಿಶ್ವ ಜನಸಂಖ್ಯಾ ದಿನ. ಸಂವತ್ಸರದ ೩೬೫ ದಿನಗಳೂ ಏನಾದರೊಂದು ನೆನಪಿನ ದಿನಗಳಾಗಿರುವುದರಿಂದ ಒಂದು ದಿನಕ್ಕಿಂತ ಇನ್ನೊಂದು ದಿನ ಭಿನ್ನವಾಗಿ ತೋರದ ದುರಂತಕ್ಕೆ ನಾವು ಈಡಾಗಿದ್ದೇವೆ. ವಾಸ್ತವವಾಗಿ ಜನಸಂಖ್ಯಾ ದಿನ ಅತ್ಯಂತ ದಿಗಿಲುಂಟುಮಾಡುವ ದಿನವಾಗಬೇಕಾಗಿತ್ತು; ಹಾಗಾಗದೆ, ಎಲ್ಲವೂ ಮಾಮೂಲಿನಂತೆ ನಡೆದು ಹೋಗುತ್ತಿರುವುದು ಸೊಂಟಕ್ಕೆ ಟೈಂಬಾಂಬು ಕಟ್ಟಿಕೊಂಡು ನಿದ್ರೆಹೋಗಿರುವವರ ಸ್ಥಿತಿಯ ಪ್ರತೀಕವಾಗಿದೆ. ಜನಸಂಖ್ಯಾಸ್ಫೋಟವೆಂಬ ಪರಿಕಲ್ಪನೆ ತೀರಾ ಹೊಸದೇನಲ್ಲ. ಅದರೂ ಇದರಿಂದೇನೂ ಬಾಧಕವಲ್ಲ ಎಂಬಂತೆ ನಟಿಸುತ್ತಿರುವುದು ಮಾತ್ರ ಅಪಾಯಕಾರಿ. ಹಿಂದುಳಿದ ದೇಶ ಮುಂದುವರಿದ ದೇಶ ಎಂಬ ಭಿನ್ನಭೇದವಿಲ್ಲದೆ ಎಲ್ಲರನ್ನೂ ಮುಟ್ಟುವ, ಮುಕ್ಕುವ ಈ ಭೀಕರ ಸಮಸ್ಯೆಯ ಬಗ್ಗೆ ಚಿಂತಕರು, ಆಳುವವರು ಹಾಗೂ ಜನಸಾಮಾನ್ಯರು ಗಂಭೀರವಾಗಿ ಯೋಚಿಸಬೇಕಾಗಿದೆ; ಹಾಗಲ್ಲದೆ ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿದಂತೆ ಮಾಡಿದರೆ ದುಬಾರಿಯಾದ ದಂಡ ತೆರಬೇಕಾಗುತ್ತದೆ."

ಸಂ

ಜಗತ್ತಿನಲ್ಲಿ ಈಗ ಅಗತ್ಯಕ್ಕಿಂತ ಹೆಚ್ಚು ಜನರಿದ್ದಾರೆ ಎಂಬ ದಿಗಿಲನ್ನು ಬೇರೆ ಬೇರೆ ವೃತ್ತಿಗಳಿಗೆ ಸೇರಿದವರು ವ್ಯಕ್ತಪಡಿಸುತ್ತಿದ್ದಾರೆ. ಜೀವಸಂಕುಲಗಳಲ್ಲಿ ಗೆದ್ದು ನಿಂತ ಮನುಷ್ಯಜಾತಿ ಇಷ್ಟು ಯಶಸ್ಸು ಗಳಿಸಿದುದು ಒಂದರ್ಥದಲ್ಲಿ ಮಾರಕವಾಗಿ ಪರಿಣಮಿಸಿರುವುದೇ? ಇತ್ತೀಚೆಗೆ ಈ ಪ್ರಮಾಣದಲ್ಲಿ ಜನಸಂಖ್ಯೆ ಸ್ಫೋಟಗೊಂಡಿರಲು ಕಾರಣಗಳೇನು? ಈ ಸ್ಫೋಟದಿಂದ ಮನುಕುಲದ ಮೇಲೆ ವರ್ತಮಾನದಲ್ಲಿ ಹಾಗೂ ಭವಿಷ್ಯತ್ತಿನಲ್ಲಿ ಯಾವ ಬಗೆಯ ಪರಿಣಾಮಗಳಾಗಬಹುದು? ಮನುಷ್ಯ ಜೀವನವನ್ನು ನಾವು ಗೌರವಿಸುವ ಪಕ್ಷದಲ್ಲಿ ಗಾತ್ರ ಮತ್ತು ಮನುಷ್ಯ ಜೀವನದ ಗುಣದಲ್ಲಿ ಈಗ ಕಂಡು ಬರುತ್ತಿರುವ ವ್ಯತ್ಯಾಸವನ್ನು ಶೀಘ್ರವಾಗಿ ಗಮನಿಸುವುದು ಅತ್ಯಗತ್ಯವಾಗಿದೆ.

ಜನಸಂಖ್ಯೆ ಎಂಬುದು ವಿವಾದಾತ್ಮಕವಾದ ವಿಷಯವಾಗಿದೆ; ಒಂದು ಗುಂಪಿನ ಜನರು ಇದು ಸಮಸ್ಯೆಯೇ ಅಲ್ಲ ಎಂದು

ಆಧಾರ: ಶರ್ಲಿ ಫಾಸ್ಟರ್ ಹಾರ್ಟ್ಲೆ ಅವರ 'ಪಾಪ್ಯುಲೇಶನ್—ಕ್ವಾಂಟಿಟಿ ವರ್ಸಸ್ ಕ್ವಾಲಿಟಿ' ಎಂಬ ಗ್ರಂಥ.

ಮಾಡಿಸಿದರೆ, ಮತ್ತೊಂದು ಗುಂಪಿನವರು ನಾವು ಅಗ್ನಿಪರ್ವತದ ಬಾಯಿಯಲ್ಲಿದ್ದೇವೆ ಎಂದು ಬೊಬ್ಬೆ ಹೊಡೆಯುತ್ತಿದ್ದಾರೆ. ಈ ಕ್ಷೇತ್ರದಲ್ಲಿನ ಪರಿಣತರು ಒಮ್ಮತಾಭಿಪ್ರಾಯವನ್ನು ಹೊಂದಿಲ್ಲವಾದರೂ ಒಂದು ಅಂಶವನ್ನಂತೂ ಎಲ್ಲರೂ ಒಪ್ಪುತ್ತಾರೆ; ಅದೆಂದರೆ: ಅನಂತ ಸಂಖ್ಯೆಯ ಜನರನ್ನು ಈ ಪೃಥ್ವಿ ಸಲಹಲಾರಳು. ಹಾಗಾದರೆ ಈ ಭೂಮಿ ಹೊರುವ ಗರಿಷ್ಠ ಪ್ರಮಾಣ ವೇನು? ಎಂಬುದಕ್ಕೆ ನಿಖರವಾದ ಉತ್ತರ ಹೇಳುವ ಪ್ರಮೇಯವಿಲ್ಲ. ಜನಸಂಖ್ಯಾ ಹೆಚ್ಚಳದ ರೀತಿಯನ್ನು ನಾವು ಸ್ಥೂಲವಾಗಿಯಾದರೂ ಮತ್ತೊಮ್ಮೆ ಮೆಲುಕು ಹಾಕುವುದು ಒಳಿತು: ಮನುಷ್ಯನ ಇತಿಹಾಸದುದ್ದಕ್ಕೂ ಜನಸಂಖ್ಯೆಯು ನಿಧಾನವಾಗಿ ಬೆಳೆಯಿತು—ಅಂದರೆ ಜನನ ಪ್ರಮಾಣವಿದ್ದಷ್ಟೇ ಮರಣ ಪ್ರಮಾಣವೂ ಇದ್ದಿತು. ನಿಖರವಾದ ಜನಗಣತಿಯ ಕೊರತೆಯಿದ್ದಾಗ್ಯೂ ಸಹ, ಜನಸಂಖ್ಯಾ ಪರಿಣತರು ನಂಬುವಂತೆ, ೧೭೫೦ನೇ ಇಸವಿಯವರೆಗೂ ಜನಸಂಖ್ಯಾ ಹೆಚ್ಚಳವು ಒಂದು ವರ್ಷಕ್ಕೆ ಸುಮಾರು ಶೇ|| ೦.೧ ಕ್ಕಿಂತ ಕಡಿಮೆ ಇದ್ದಿತು. ೧೭೫೦ ರಿಂದ ೧೯೦೦ರ ಅವಧಿಯಲ್ಲಿ ಸುಮಾರು ಶೇ|| ೦.೫ ರಷ್ಟು ಹೆಚ್ಚಿತು. ೧೯೦೦ ರಿಂದ ೧೯೫೦ರ ತನಕ ಜನಸಂಖ್ಯೆ ಶೇ|| ೧.೦ ರ ಪ್ರಮಾಣದಲ್ಲಿ ಹೆಚ್ಚಿತು; ೧೯೫೦ ರಿಂದ ೧೯೬೦ರವರೆಗೆ ಸುಮಾರು ಶೇ|| ೧.೭ ರಷ್ಟಾದರೆ ಇತ್ತೀಚಿನ ದಶಕದಲ್ಲಿ ಬೆಳವಣಿಗೆ ದರವು ಪ್ರತಿ ವರ್ಷಕ್ಕೆ ಶೇ|| ೨ ರಷ್ಟಾಗಿದೆ. ಪ್ರತಿ ವರ್ಷಕ್ಕೆ ಶೇ|| ೨ ರಂತೆ ಪ್ರತಿ ೩೫ ವರ್ಷಗಳಿಗೊಮ್ಮೆ ವಿಶ್ವದ ಜನಸಂಖ್ಯೆ ದ್ವಿಗುಣವಾಗುತ್ತದೆ; ಈ ಲೆಕ್ಕಾಚಾರದ ಪ್ರಕಾರ, ಪ್ರಸಕ್ತ ಬೆಳವಣಿಗೆ ದರ ಮುಂದುವರಿದರೆ ಜಗತ್ತಿನ ಜನಸಂಖ್ಯೆ ಹತ್ತಿರಹತ್ತಿರ ೭ ಬಿಲಿಯನ್ ಆಗುತ್ತದೆ. ಈ ಬಿಲಿಯನ್ ಎಂದರೆ ಎಷ್ಟು ಎಂದು ವಿವರಿಸುವುದು ಒಳ್ಳೆಯದು. ೧ ಮಿಲಿಯನ್ ಅಂದರೆ ೧ ದಶಲಕ್ಷ. ಒಂದು ಸಾವಿರ ದಶಲಕ್ಷವನ್ನು ಸೇರಿಸಿದರೆ ಒಂದು ಬಿಲಿಯನ್ ಆಗುತ್ತದೆ. ಭಾರತದ ಜನಸಂಖ್ಯೆ ಈ ಗುರಿ ಮುಟ್ಟಲು ನಾಗಾಲೋಟದಲ್ಲಿ ಓಡುತ್ತಿದೆ. ಜಗತ್ತಿನ ಒಟ್ಟು ಜನಸಂಖ್ಯೆ ಈ ಶತಮಾನದ ಕೊನೆಯ ವೇಳೆಗೇ ಏಳು ಬಿಲಿಯನ್ ಆದರೆ ಅವಾಗ ಪ್ರಪಂಚದ ಪ್ರಜೆಗಳಲ್ಲಿ ಪ್ರತಿ ಏಳು ಮಂದಿಗೆ ಒಬ್ಬ ಭಾರತೀಯನೇ ಇರುತ್ತಾನೆ. 'ಮೇರಾ ಭಾರತ್ ಮಹಾನ್' ಅರ್ಥಾತ್ 'ನನ್ನ ಭಾರತ ದೊಡ್ಡದು' ಎಂಬ ಘೋಷಣೆಯನ್ನು ಪ್ರಾಯಶಃ ತಿಳಿದವರು ಈ ಮುನ್ನರಿವಿನಿಂದಲೇ ಸೃಷ್ಟಿಸಿರಬೇಕು! ಅದೇನೇ ಇರಲಿ, ಈ ಪ್ರತಿಶತ ೨ ಬೆಳವಣಿಗೆಯ ದರ ಎಂಬುದು ನಿಜವಾಗಿಯೂ ದೊಡ್ಡ ಪ್ರಮಾಣವೇ. ಅದರ ಕಲ್ಪನೆಯಾಗಬೇಕಾದರೆ ಒಂದು ಸನ್ನಿವೇಶವನ್ನು ಊಹೆ ಮಾಡಿಕೊಳ್ಳೋಣ: ಕ್ರಿಸ್ತನ ಕಾಲದಲ್ಲಿ ಒಂದು ಜೋಡಿ ಸಂತಾನೋತ್ಪತ್ತಿಯನ್ನು ಪ್ರಾರಂಭಿಸಿತೆಂದು ತಿಳಿದರೆ—ಶೇ|| ೨ ಜನಸಂಖ್ಯಾ ಬೆಳವಣಿಗೆ ದರದಲ್ಲಿ—ಪ್ರತಿಯೊಬ್ಬ ಬದುಕಿರುವವನಿಗೆ ಈಗ ೨೦ ದಶಲಕ್ಷ ಜನರಿರುತ್ತಿದ್ದರು; ಆದರೆ ಭೂಮಿಯ ಮೇಲಿನ ಪ್ರತಿಯೊಂದು ಚದರಡಿಗೂ ೧೦೦ ಮಂದಿಯನ್ನು ಅಡಕ ಮಾಡಬೇಕಾಗುತ್ತಿತ್ತು (ಜನಸಂಖ್ಯಾ ಮಂಡಲಿ —೧೯೬೫). ಈ ಸಂಖ್ಯೆಗಳೆಲ್ಲಾ ಕೇವಲ

ಗಣಿತೀಯ ಲೆಕ್ಕಾಚಾರವಾಗಿದ್ದು, ಅಸಂಗತವಾದುವೆನ್ನಿ. ಆದಾಗ್ಯೂ ಶೇ|| ೨ ಪ್ರಮಾಣದ ಬೆಳವಣಿಗೆ ದರವನ್ನು ಈ ಭೂಮಿ ಬಹಳ ಕಾಲ ತಾಳಿಕೊಳ್ಳಲಾಗದು. ದೀರ್ಘಕಾಲದಲ್ಲಿ ಸಂತಾನ ದರ ಇಳಿಮುಖವಾಗಬೇಕು, ಇಲ್ಲದಿದ್ದರೆ, ಮರಣದರ ಏರ ತೊಡಗುತ್ತದೆ. ಬೇರೆ ಮಾರ್ಗಗಳೇ ಇರುವುದಿಲ್ಲ. ಅಂತರಗ್ರಹ ವಸಾಹತೀಕರಣ ಅಥವಾ ಭೂ ಉಪಗ್ರಹಗಳು ಅಥವಾ ಸಮುದ್ರ ನಗರಗಳನ್ನು ಪರ್ಯಾಯವಾಗಿ ನಿರ್ಮಿಸಿ ಸಮಸ್ಯೆಯನ್ನು ಪರಿಹರಿಸುತ್ತೇವೆ ಎನ್ನುವವರ ಧೈರ್ಯದ ಮಾತುಗಳಿಗೆ ಕಿವಿಗೊಟ್ಟು ಕೂರುವುದುಂಟೆ?

ಇಂದು ಭೂಮಿಯ ಮೇಲೆ ಬದುಕಿರುವವರ, ನಾಳೆ ಹುಟ್ಟಲಿರುವವರ ಆರೋಗ್ಯ. ಪೌಷ್ಟಿಕತೆ, ಶಿಕ್ಷಣ, ಇತ್ಯಾದಿ ಅಂಶಗಳನ್ನೂ ಅಧ್ಯಯನ ಮಾಡಲು ಹಾಗೂ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲು ಜನಸಂಖ್ಯಾನಿಯಂತ್ರಣ ಅತ್ಯಗತ್ಯವಾಗಿದೆ. ಮನುಷ್ಯನ ಸಂಖ್ಯೆ ಹೆಚ್ಚುತ್ತಿರುವುದಕ್ಕೆ ಕಾರಣವೇನೆಂದು ಪ್ರಶ್ನಿಸಿಕೊಳ್ಳಲಿ ಬಿಡಲಿ ಎರಡನೇ ಮಹಾಯುದ್ಧದಿಂದ ಈಚೆಗೆ ಶೀಘ್ರವಾಗಿ ಹೆಚ್ಚುತ್ತಿರುವ ಜನಸಂಖ್ಯೆಯು ಪ್ರತಿಯೊಬ್ಬನ ಮೇಲೂ ಪ್ರಭಾವ ಬೀರುತ್ತಲಿದೆ. ವಿಶ್ವ ಆರೋಗ್ಯ ಸಂಸ್ಥೆಯ ಅಂದಾಜಿನ ಪ್ರಕಾರ ಪ್ರತಿ ಸೆಕೆಂಡಿಗೆ ೩.೭ ಮಾನವ ಜೀವಿಗಳ ಅವತಾರವಾಗುತ್ತಿದೆ. ಅಂದರೆ, ಪ್ರತಿ ನಿಮಿಷಕ್ಕೆ ೨೨೧ ಜನ ಹುಟ್ಟುತ್ತಾರೆ; ಪ್ರತಿ ದಿನಕ್ಕೆ ಈ ಲೆಕ್ಕಾಚಾರ ೩,೧೮,೫೭೫ ರಷ್ಟಾಯಿತು ಅಥವಾ ಒಂದು ವಾರಕ್ಕೆ ೨.೨ ದಶಲಕ್ಷಕ್ಕೂ ಅಧಿಕವಾಯಿತು. ಹಾಗಾಗಿ, ಎಲ್ಲಾ ಕೂಡಿ ಕಳೆದು ಗುಣಿಸಿ ಭಾಗಿಸಿದರೂ ೨೦೦೦ದ ಇಸವಿಯ ಹೊತ್ತಿಗೆ ಜಗತ್ತಿನ ಜನಸಂಖ್ಯೆ ಏಳು ಬಿಲಿಯನ್ ಆಗುತ್ತದೆ.

ಭೂಮಿಯ ಮೇಲೆ ಮಾನವನ ಬದುಕನ್ನು ಹಸನು ಮಾಡಲು ಹಾಗೂ ಅವನ ಭವಿಷ್ಯಕ್ಕಾಗಿ ನಾವು ಯೋಜನೆ ಹಾಕಿಕೊಂಡಷ್ಟೂ ಜನಸಂಖ್ಯಾ ಸಮಸ್ಯೆಯನ್ನು ತೀವ್ರತರವಾಗಿ ಪರಿಗಣಿಸಬೇಕಾಗುತ್ತದೆ. ಈ ಪ್ರಪಂಚದಲ್ಲಿ ಸಂಕೀರ್ಣವೆನ್ನಬಹುದಾದ ಅನೇಕ ಸಮಸ್ಯೆಗಳಿವೆ. ಅನೇಕ ವ್ಯಕ್ತಿಗಳಿಗೆ ಹಾಗೂ ಜನನಾಯಕರಿಗೆ ಅಂತಾರಾಷ್ಟ್ರೀಯ ಶಾಂತಿಯನ್ನು ಸ್ಥಾಪಿಸಿ ಅದನ್ನು ರಕ್ಷಿಸುವುದು ತುಂಬಾ ಮಹತ್ವದ ಪ್ರಶ್ನೆಯಾಗಿ ಗೋಚರಿಸಬಹುದು. ಮತ್ತೊಂದೆಡೆ ಹೆಚ್ಚಿನ ಸಂಖ್ಯೆಯ ಜನರು ತಮ್ಮ ದೃಷ್ಟಿಯಲ್ಲಿ ಅತ್ಯಂತ ಜರೂರು ಎಂದು ತೋರುವ ತಮ್ಮ ಜೀವನ ಮಟ್ಟದ ಉತ್ತಮಿಕೆಗಾಗಿ ತಹತಹಿಸುತ್ತಿರಬಹುದು: ಆಹಾರ, ಔಷಧಿ (ಆರೋಗ್ಯ), ವಸತಿ— ಇವುಗಳ ಕಡೆ ಅವರ ಆದ್ಯತೆ ಇರುತ್ತದೆ. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ವಿರೋಧಾಭಾಸವೆನ್ನಬಹುದಾದ ಮತ್ತೊಂದು ಸ್ಥಿತಿ ತಲೆದೋರುತ್ತಿದೆ. ಅದೆಂದರೆ ಅಕ್ಷರಸ್ಥರ ಸಂಖ್ಯೆ ಹೆಚ್ಚುತ್ತಿರುವಂತೆಯೇ ಅಷ್ಟೇ ಕ್ಷಿಪ್ರವಾಗಿ ಅನಕ್ಷರಸ್ಥರ ಪಡೆಯೂ ಹೆಚ್ಚುತ್ತಿದೆ. ಹಾಗಾಗಿ ಜನಸಂಖ್ಯಾಸ್ಫೋಟವು ಉಳಿದೆಲ್ಲ ಸಮಸ್ಯೆಗಳನ್ನು ಉಲ್ಬಣಗೊಳಿಸುತ್ತದೆ. ಜನಸಂಖ್ಯಾ ಸ್ಫೋಟವನ್ನು ನಿಯಂತ್ರಿಸಲು ಯುದ್ಧ ಅನಿವಾರ್ಯ ಎಂಬವಾದವನ್ನು ಕೆಲವು ರಾಷ್ಟ್ರಗಳು ಮಂಡಿಸಿವೆ. ಜನಸಂಖ್ಯೆಯ ಒತ್ತಡ ಹಾಗೂ ನಮ್ಮ ಯುದ್ಧಾಸ್ತ್ರಗಳ ಸಂಹಾರಕ ಶಕ್ತಿ

ಹಿಂದೆಂದಿಗಿಂತಲೂ ಈಗ ಅಧಿಕವಾಗಿದೆ. ಈ ಅಗಾಧ ಪ್ರಮಾಣದ ಜನಸಂಖ್ಯಾಸ್ಫೋಟ ಜನವಜೀವನದ ಗುಣಮಟ್ಟವನ್ನು ಉತ್ತಮಗೊಳಿಸಲು ಎಂದಾದರೂ ಸಾಧ್ಯವೇ ಎಂಬ ಪ್ರಶ್ನೆ ಭೂತಾಕಾರವಾಗಿ ಎದ್ದು ನಿಲ್ಲುತ್ತದೆ.

೧೯೬೯ರ ಜನವರಿಯಲ್ಲಿ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯವರಾಗಿದ್ದ ಜನರಲ್ ಯುಥಾಂಟ್ ಅವರು ಹೇಳಿದ ಮಾತುಗಳು ಮನನೀಯವಾಗಿವೆ:

> ಜನಸಂಖ್ಯಾ ಬೆಳವಣಿಗೆ, ವಿಶೇಷವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಶೀಘ್ರಗತಿಯಲ್ಲಿ ಮುಂದುವರೆಯುತ್ತಿದೆ; ಎಷ್ಟರ ಮಟ್ಟಿಗೆ ಎಂದರೆ ೧೯೬೦ರ ದಶಕಕ್ಕಿಂತ ೧೯೭೦ರ ದಶಕದ ಕೊನೆಯ ವೇಳೆಗೆ ಅಭಿವೃದ್ಧಿಶೀಲ ಜಗತ್ತಿನ ಜನಸಂಖ್ಯೆಯಲ್ಲಿ ಇನ್ನೂ ಮೂರನೇ ಒಂದು ಭಾಗದಷ್ಟು ಹೆಚ್ಚುವರಿ ಸೇರ್ಪಡೆಯಾಗಿರುತ್ತದೆ. ಇದರಿಂದ ಆರ್ಥಿಕ ಹಾಗೂ ಸಾಮಾಜಿಕ ರಚನೆಗಳ ಮೇಲೆ ಬೀಳುವ ಒತ್ತಡವನ್ನು ಮನಗಂಡು ಜಗತ್ತಿನ ಸರ್ಕಾರಗಳು ಈ ಬೆಳವಣಿಗೆಯನ್ನು ತಗ್ಗಿಸುವ ದಿಶೆಯಲ್ಲಿ ಚಿಂತನೆ ನಡೆಸುತ್ತಿವೆ—ಇದು ಕೇವಲ ಆರ್ಥಿಕ ಅಭಿವೃದ್ಧಿಯನ್ನು ಗಮನದಲ್ಲಿರಿಸಿಕೊಂಡು ಮಾತ್ರ ಅಲ್ಲ ಬದಲಾಗಿ ಇಡೀ ಮಾನವಕೋಟಿಯ ಉಳಿವಿನ ದೃಷ್ಟಿಯಿಂದ: ಮನುಷ್ಯ ಬದುಕಿನ ಸಮೃದ್ಧತೆ, ಜನರ ಸುಖಸಂತೋಷ, ಹಾಗೂ ಅವರು ಹೊಂದಬಹುದಾದ ಮಕ್ಕಳ ಸಂಖ್ಯೆ ಮತ್ತು ಸಂತಾನದ ಅಂತರವನ್ನು ಅವರು ತೀರ್ಮಾನಿಸುವ ಹಕ್ಕು—ಇದೆಲ್ಲ ಸೇರ್ಪಡೆಯಾಗುತ್ತದೆ. ಬಹಳ ಕ್ಷಿಪ್ರವಾಗಿ ಜನಸಂಖ್ಯೆ ಬೆಳವಣಿಗೆಯಾಗುವುದರಿಂದ ಶಿಕ್ಷಣ ಹಾಗೂ ಯುವಕರ ಯೋಗಕ್ಷೇಮದ ಹಾದಿಯಲ್ಲಿ ಕೂಡ ಅಡ್ಡಿ ತಲೆದೋರಿರುವುದೆಂಬ ಅರಿವು ಮೂಡುತ್ತಿದೆ; ಸಮರ್ಪಕವಾದ ಆರೋಗ್ಯ ಮಟ್ಟ, ಗೌರವಯುತವಾದ ಜೀವನೋಪಾಯವನ್ನು ಹೊಂದುವ ಅವಕಾಶ, ಇವುಗಳಲ್ಲಿ ಕೈತಪ್ಪಿ ಹೋಗುವ ಅಪಾಯವಿದೆ; ಅನೇಕರು ಎರಡು ಹೊತ್ತು ಊಟಕ್ಕೂ ಪರದಾಡಬೇಕಾದ ಸ್ಥಿತಿ ತಲೆದೋರಿರುವುದು. ಈ ಕ್ಷಣದಲ್ಲಿ ಜನಸಂಖ್ಯಾ ಹೆಚ್ಚಳವನ್ನು ತಗ್ಗಿಸಲು ನಾವು ಕ್ರಮ ತೆಗೆದುಕೊಳ್ಳದಿದ್ದರೆ, ಯಾವ ರೀತಿ ಜನಸಂಖ್ಯೆಯು ಬೆಳೆಯುತ್ತದೆಂಬ ಮುನ್ಸೂಚನೆಗಳನ್ನು ಗಮನಿಸಿ ಹೇಳುವುದಾದರೆ, ಈ ಜಗತ್ತಿನಲ್ಲಿ ಇನ್ನೂ ಹುಟ್ಟದಿರುವ ಕಂದಮ್ಮಗಳಿಗೆ ಅವಕಾಶಗಳನ್ನು ನೀಡಿ ಅವರ ಪ್ರತಿಭೆ ಮತ್ತು ಸಾಮರ್ಥ್ಯವನ್ನು ಪೋಷಿಸುವ ಮಾತು, ಅನೇಕ ರಾಷ್ಟ್ರಗಳ ವಿಷಯದಲ್ಲಿ, ಅಸಾಧ್ಯವೆಂದೇ ತಿಳಿಯಬೇಕಾಗುತ್ತದೆ.

ಇತಿಹಾಸದುದ್ದಕ್ಕೂ ಹೆಚ್ಚು ಮಕ್ಕಳನ್ನು ಹೊಂದುವುದರ ಅನುಕೂಲತೆಗಳೇನು ಎಂಬುದರ ಬಗ್ಗೆಯೇ ಮನುಷ್ಯನ ಗಮನ ಹರಿದಂತೆ ಕಾಣುತ್ತದೆ. ಮರಣಪ್ರಮಾಣ ತಗ್ಗಿರುವುದರಿಂದ ಕೆಲವು ರಾಷ್ಟ್ರಗಳಲ್ಲಿ ಇತ್ತೀಚಿಗೆ ಹೆಚ್ಚು ಮಕ್ಕಳನ್ನು ಪಡೆಯುವ ಆಸೆ ಜನರಲ್ಲಿ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿರ

ಬಹುದು. ಸಾರ್ವತ್ರಿಕವಾಗಿ ಜನರು ಮರಣ ಪ್ರಮಾಣದಲ್ಲಿ ನಿಯಂತ್ರಣವಾಗಲೆಂದು ಆಸೆ ಪಡುತ್ತಾರಾದರೂ ಏಕೋ ಏನೋ ಜನನ ಪ್ರಮಾಣದಲ್ಲಿ ನಿಯಂತ್ರಣವಾಗಲಿ ಎಂದು ಆಸೆ ಪಡರು. ಆದಾಗ್ಯೂ ಹೆಚ್ಚುಹೆಚ್ಚು ಮಕ್ಕಳು ಬದುಕುಳಿಯುತ್ತಿರುವುದರಿಂದ ಉಳಿದ ಎಲ್ಲ ಬಾಯಿಗಳಿಗೆ ಆಹಾರ ಒದಗಿಸುವ ಕೆಲಸ ದುಸ್ತರವಾದುದೆಂಬ ಅರಿವು ಮೂಡುತ್ತಿದೆ.

ಸಂತಾನ ನಿಯಂತ್ರಣ ಸಾಧನ ನಮಗೆ ಲಭ್ಯವಾಗಿ ದಶಕಗಳೇ ಕಳೆದಿವೆ. ಈ ಸಂತಾನ ನಿಯಂತ್ರಣ ಸಲಕರಣೆಗಳ ಬಗೆಗಿನ ಜ್ಞಾನ ಒಂದು ಸಮುದಾಯಕ್ಕಿಂತ ಇನ್ನೊಂದು ಸಮುದಾಯಕ್ಕೆ ಭಿನ್ನವಾಗಿರುತ್ತದೆ. ಆದರೆ ಈ ಸಾಧನೆಗಳ ಬಗ್ಗೆ ವ್ಯಾಪಕವಾಗಿ ಜನರಿಗೆ ತಿಳಿಯಿಸಬೇಕಾದ ಜರೂರು ಈಗ ಇದೆ. ಗರ್ಭಧಾರಣೆ ಹಾಗೂ ಮಕ್ಕಳ ಫಲ ಕಣ್ಣಿಗೆ ಕಾಣದ ದೈವದ ಕರುಣೆ ಎಂಬ ಅರಿವು ಕೆಲವು ಆದಿವಾಸಿ ಗುಂಪುಗಳಲ್ಲಿ ಕಂಡುಬರಬಹುದು ; ನಾಗರೀಕ ಜನಸಮುದಾಯದಲ್ಲಿ ಇನ್ನೊಂದು ಬಗೆಯ ಮೂಢನಂಬಿಕೆಯನ್ನು ಬಿತ್ತಿ ರಾಜಕಾರಣಿಗಳು ಜನಸಂಖ್ಯಾ ನಿಯಂತ್ರಣಕ್ಕೆ ಅಡ್ಡಿಯುಂಟು ಮಾಡುತ್ತಿದ್ದಾರೆ. ಅವರ ದೃಷ್ಟಿಯಲ್ಲಿ ದೇಶದ ಜನಸಂಖ್ಯೆ ಹೆಚ್ಚುವುದೆಂದರೆ ರಾಷ್ಟ್ರದ ಶಕ್ತಿ ಅಥವಾ ಸಮರ ಸಾಮರ್ಥ್ಯ ವೃದ್ಧಿಯಾಗುವುದೆಂದು ತಿಳಿಯುವ ಅಪಾಯವಿದೆ. ಇದಕ್ಕಿಂತ ಭಿನ್ನವಾದ ರೀತಿಯಲ್ಲಿ ಆಲೋಚಿಸಿ ಹೆಚ್ಚುತ್ತಿರುವ ಜನಸಂಖ್ಯೆಯ ಅಪಾಯವನ್ನು ನಾಯಕರು ಅರ್ಥಮಾಡಿಕೊಂಡು ಸರ್ಕಾರಿ ಕಾರ್ಯಕ್ರಮಗಳಲ್ಲಿ ಇದರ ನಿಯಂತ್ರಣಕ್ಕೆ ಪ್ರಥಮ ಆದ್ಯತೆ ನೀಡುವ ತನಕ ತೊಂದರೆ ತಪ್ಪಿದ್ದಲ್ಲ. ಇಷ್ಟೆಲ್ಲಾ ಮುನ್ನೆಚ್ಚರಿಕೆಯ ಬಗ್ಗೆ ಯೋಚಿಸಲು ಮುಖ್ಯ ಕಾರಣವೆಂದರೆ ಈ ಭೂಮಿಯ ಮೇಲೆ ಮನುಷ್ಯನೊಬ್ಬನೇ ಸಂಸ್ಕೃತಿ-ನಿರ್ಮಿಸುವ ಪ್ರಾಣಿಯಾಗಿರುವುದು. ಬೇರೆ ಬೇರೆ ಪರಿಸರಕ್ಕೆ ಹೊಂದಿಕೊಳ್ಳುವುದಷ್ಟೇ ಅಲ್ಲ ಪರಿಸರವನ್ನು ನಿರ್ಮಿಸುವ ಸಾಮರ್ಥ್ಯ ಕೂಡ ಅವನಿಗೆ ಇದೆ. ಮಾನವಕೋಟಿಯೇ ಬಹುಮುಖ್ಯವಾದ ಪರಿಸರವೆಂಬಂತೆ ಒಂದು ಆವರಣವನ್ನು ಮನುಷ್ಯ ನಿರ್ಮಿಸಿದ್ದಾನೆ. ಬಹುಸಂಖ್ಯೆಯ, ಗರಿಷ್ಠ ಸಾಂದ್ರತೆಯ, ವೈವಿಧ್ಯತೆಯ ಪರಿಸರವಿದು. ತಾನು ನಿರ್ಮಿಸಿರುವ ಈ ಹೊಸ ಜಗತ್ತಿನಲ್ಲಿ ಬದುಕುವ ಹೊಸ ಹುನ್ನಾರವನ್ನು ಅವನು ಇನ್ನೂ ಹುಡುಕುತ್ತಿದ್ದಾನೆ. ಈ ಸಮಕಾಲೀನ ಜಗತ್ತು ಏಕರೂಪದ್ದಾಗಿರದೆ, ಗೊಂದಲಮಯವಾಗಿದೆ, ಅರಾಜಕತೆಯಿಂದ ಕೂಡಿದೆ, ಅವ್ಯವಸ್ಥೆಯ ಆಗರವೂ ಆಗಿದೆ. ಮನುಷ್ಯ ಇತಿಹಾಸದಲ್ಲಿ ಮೊದಲಬಾರಿಗೆ ಸ್ವವಿನಾಶದ ಸಾಮರ್ಥ್ಯವನ್ನು ಪಡೆದಿರುವ ಸಮಾಜವೂ ಕೂಡ ಇದಾಗಿದೆ. ಒಂದೇ ಹೊಡೆತದಲ್ಲಿ ವಿಶ್ವ ನಾಶವಾಗಬಹುದು, ಇಲ್ಲವೇ ಒಂದೊಂದು ರಾಷ್ಟ್ರವಾಗಿ ಇಲ್ಲವಾಗಬಹುದು—ಅಂಥ ವರ್ತಮಾನದ ವಾರಸುದಾರಿಕೆ ನಮ್ಮದಾಗಿದೆ.

ನಿರಂತರವಾಗಿ ಹೆಚ್ಚುತ್ತಿರುವ ಜನಸಂಖ್ಯೆಯಿಂದ ನೈಸರ್ಗಿಕ ಸಂಪನ್ಮೂಲಗಳ ಮೇಲೆ ಪರಿಣಾಮವುಂಟಾಗುವುದರ ಜೊತೆಗೆ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯವಾಗಿಯೂ ಅನೇಕ ಅಪಾಯಕಾರಿ ಪ್ರಭಾವಗಳಿಗೆ ಕಾರಣವಾಗುವುದು. ಯಾವುದೇ ಒಂದು ನಿರ್ದಿಷ್ಟ ಭೂವಲಯದಲ್ಲಿ ವಾಸ

ಮಾಡುವ ಜನರನ್ನು ಪೋಷಿಸಲು ಅವರಿಗೆ ಅಗತ್ಯವಾದ ವಸ್ತುಗಳನ್ನು ಒದಗಿಸುವುದು ಮುಖ್ಯವಾಗುತ್ತದೆ. ಬಹು ಸಂಖ್ಯೆಯ ಜನರಿಗೆ ಇಷ್ಟಿಷ್ಟೇ ಆಹಾರ ಕೊಟ್ಟು ಬಹಳ ದಿನ ಅವರು ಉಸಿರಾಡುವಂತೆ ಮಾಡಿ ಇಡ ಬಹುದಾಗಿದೆ. ಆದರೆ ಬದುಕಿನ ಅಪೇಕ್ಷಿತ ತುಡಿತ ಇದಾಗಿರುವುದಿಲ್ಲ. ಜೀವನ ಮಟ್ಟ ಉತ್ತಮವಾಗಬೇಕೆಂಬುದು ಎಲ್ಲರ ಅದಮ್ಯ ವಾದ ಬಯಕೆಯಾಗಿದೆ. ಯಾವುದೇ ಒಂದು ಸಂಸ್ಕೃತಿಯ ಮಟ್ಟವು—ಅದರ ತಂತ್ರ ಜ್ಞಾನೀಯ ಸಂಕೀರ್ಣತೆಯನ್ನು ಗಮನಿಸಿ ಹೇಳುವುದಾದರೆ—ಸಂಪನ್ಮೂಲಗಳ ಬೇಡಿಕೆ ಹಾಗೂ ಆ ಬೇಡಿಕೆಯನ್ನು ಪೂರೈಯಿಸುವ ವಿಧಾನವನ್ನು ಪ್ರಭಾವಗೊಳಿಸುತ್ತದೆ. ಹಾಗಾಗಿ ನೀರು, ಭೂಮಿ, ಕಾಡುಗಳು, ಖನಿಜಗಳು ಹಾಗೂ ಶಕ್ತಿ ಅಥವಾ ಇಂಧನ ವನ್ನು ನಾವು ಸಂಪನ್ಮೂಲಗಳೆಂದು ಪರಿಗಣಿಸುವುದಾದರೆ, ಇವೆಲ್ಲಾ ಅಕ್ಷಯ ವಾಗಿರುವಂಥವಲ್ಲ ಎಂಬುದು ನಮಗೆ ತಿಳಿದಿದೆ. ಈ ಕಾರಣದಿಂದಾಗಿಯೇ ಮಿತ ವಾಗಿರುವ ಈ ಸಂಪನ್ಮೂಲಗಳನ್ನು ನಾವು ದೀರ್ಘಕಾಲೀನವಾದ ಅಗತ್ಯವನ್ನು ಗಮನ ದಲ್ಲಿರಿಸಿಕೊಂಡು ಬಳಸಬೇಕಾಗಿದೆ. ಸಂಪನ್ಮೂಲಗಳ ಮಿತ ಬಳಕೆಯೆಂದರೆ ಜನ ಸಂಖ್ಯಾ ನಿಯಂತ್ರಣವೆಂದು ಬೇರೆ ಹೇಳುವ ಅಗತ್ಯವಿಲ್ಲ.

ಅಭಿವೃದ್ಧಿ ಹೊಂದಿದ ಹಾಗೂ 'ಅಭಿವೃದ್ಧಿಶೀಲ' ರಾಷ್ಟ್ರಗಳ ನಡುವಿನ ಆರ್ಥಿಕ ಕಂದರ ಹಿಗ್ಗುತ್ತಲೇ ಇದೆ. ವಾಸ್ತವವಾಗಿ ಮುಂದುವರಿದ ರಾಷ್ಟ್ರಗಳು ಅತ್ಯಂತ ಕ್ಷಿಪ್ರಗತಿಯಲ್ಲಿ ಮುಂದುವರಿಯುತ್ತಿವೆ, ಉಳಿದ ರಾಷ್ಟ್ರಗಳನ್ನು ಹಿಂದೆ ಹಾಕಿ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಸಮ ಸಮವಾಗಿ ಉಳಿದ ರಾಷ್ಟ್ರಗಳು ಹೆಜ್ಜೆ ಹಾಕಬೇಕಾದರೆ, ಯಾಂತ್ರೀಕೃತ ಉಪ ಕರಣಗಳನ್ನು ಬಳಸಬೇಕು. ಕಾರ್ಮಿಕರು ಆಗ ಹೆಚ್ಚು ಉತ್ಪಾದನೆಯಲ್ಲಿ ತೊಡಗು ತ್ತಾರೆ ಎಂದುಕೊಂಡರೂ ಬಹಳಷ್ಟು ಜನರು ನಿರುದ್ಯೋಗಿಗಳಾಗುತ್ತಾರೆ. ಯಂತ್ರ ಹೊರಗೆ ಬಿಟ್ಟ ಜನರನ್ನು ಪುನರ್‌ಸಂಘಟಿಸ ಬೇಕಾದರೆ ಬಹಳ ಹಣ ತೊಡಗಿಸಬೇಕಾಗು ತ್ತದೆ. ಇದನ್ನೆಲ್ಲಾ ಗಮನಿಸುವಾಗ ಜನ ಸಂಖ್ಯೆ ಹೆಚ್ಚುವುದಕ್ಕಿಂತ ಕಡಿಮೆಯಾದರೆ ಕ್ಷೇಮವೆಂದು ಅನ್ನಿಸುತ್ತದೆ. ಜೀವನಮಟ್ಟ ವನ್ನು ಉತ್ತಮಪಡಿಸಬೇಕಾದರೆ ಆರ್ಥಿಕವಾದ ಅಂಗವನ್ನು ಮಾತ್ರ ಗಮನಿಸಿ ದರೆ ಸಾಲದು. ಉತ್ತಮವಾದ ಆರೋಗ್ಯ, ಶಿಕ್ಷಣ, ವಸತಿ, ಪೌಷ್ಟಿಕತೆ, ಶುದ್ಧ ನೀರು ಹಾಗೂ ಶುದ್ಧ ಗಾಳಿ ಇವೆಲ್ಲದರ ಅಗತ್ಯ ವಿದೆ. ಇವುಗಳನ್ನು ದಕ್ಕಿಸಬೇಕಾದರೆ ಎರಡು ಹೊತ್ತು ಊಟವನ್ನು ದಕ್ಕಿಸಲು ಪರದಾ ಡುವ ಪರಿಸ್ಥಿತಿಯನ್ನು ಮೊದಲು ಕೊನೆ ಗಾಣಿಸಬೇಕು. ಜೀವನಮಟ್ಟವನ್ನು ಉತ್ತಮಪಡಿಸಲು, ತಜ್ಞರು ಅಭಿಪ್ರಾಯ ಪಡುವಂತೆ, ಕನಿಷ್ಠ ಪ್ರಮಾಣದ ಬಂಡವಾಳ ತೊಡಗಿಸುವಿಕೆಗಾದರೂ ಸರ್ಕಾರಗಳು ಮನಸ್ಸು ಮಾಡಬೇಕು. ಶೇಕಡಾ ಒಂದಷ್ಟಾ ದರೂ ಹಣವನ್ನು ಸಂತಾನ ನಿಯಂತ್ರಣಕ್ಕೆ ತೊಡಗಿಸಿದರೆ ಅದರಿಂದಾಗುವ ಆರ್ಥಿಕ ಲಾಭದಿಂದ ಜನಜೀವನದ ಮಟ್ಟ ತಂತಾನೆ ಉತ್ತಮಗೊಳ್ಳುವುದು.

ಸಾಮಾಜಿಕವಾಗಿ ಜನಸಂಖ್ಯೆಯ ಹೆಚ್ಚಳ ಇನ್ನೊಂದು ರೀತಿಯ ದುಷ್ಪರಿಣಾಮಕ್ಕೆ ಕಾರಣವಾಗಿದೆ. ಅಪ್ಪಟವಾದ ಆತ್ಮೀಯತೆ,

ಆಪ್ತತೆಗೆ ಮನುಷ್ಯ ಆಸೆ ಪಡುವುದು ಸಹಜ. ಆದರೆ ಅಸಂಖ್ಯಾತ ಮಂದಿಯಿಂದ ಅತೃಪ್ತನಾದ ವ್ಯಕ್ತಿ ಸಂಪೂರ್ಣವಾಗಿ ತನ್ನ ಪರಿಸರದಿಂದ ದೂರವಾವಂತೆ ಅನಾಥಪ್ರಜ್ಞೆಯಿಂದ ಬಳಲತೊಡಗುತ್ತಾನೆ. 'ಎಲ್ಲ ಕಡೆ ಜನರಿರುವರಾದರೂ ತನ್ನವರೆಂಬುವವರು ಯಾರೂ ಇಲ್ಲ' ಎನ್ನುವ ಸ್ಥಿತಿ ನಿರ್ಮಾಣವಾಗುತ್ತದೆ. ಈ ಅನಾಥಪ್ರಜ್ಞೆ ಕ್ರಮೇಣ ಸಮಾಜವಿರೋಧಿ ಚಟುವಟಿಕೆಗೆ ಅಥವಾ ವರ್ತನೆಗೂ ಎಡೆಮಾಡಿಕೊಡಬಹುದು.

ಜನಸಂಖ್ಯೆಯ ಸ್ಫೋಟದಿಂದ ಸಾಂಸ್ಕೃತಿಕವಾಗಿ ಆಗುವ ಪರಿಣಾಮಗಳೇನು ಎಂಬ ಪ್ರಶ್ನೆಗೆ ಉತ್ತರ ಸ್ಪಷ್ಟವಿದೆ: ವಿರಳತೆಯಿದ್ದ ಪಕ್ಷದಲ್ಲಿ ನಿರುಮ್ಮಳವಾಗಿ ಕೈಬೀಸಿ ನಡೆಯಬಹುದಾದ ಅವಕಾಶವಿತ್ತು; ಆದರೆ 'ಕಾಲಿಡಲು ತೆರವಿಲ್ಲ' ಎನ್ನುವಂತೆ ಜನ ಹೆಚ್ಚಿರುವಾಗ ಒಬ್ಬನ ಕಾಲನ್ನು ತುಳಿದುಕೊಂಡೇ ಇನ್ನೊಬ್ಬ ನಿಲ್ಲುವ ಪರಿಸ್ಥಿತಿ ಇರುವುದರಿಂದ ಮೈತಗುಲಿದರೇ 'ಕ್ಷಮಿಸಿ ಎಂದು ಕೇಳುವ ಕಾಲ ದೂರವಾಗಿದೆ. ಹೊರಗಿನ ಸಮಾಜದ ವ್ಯವಹಾರದಲ್ಲಿ ಕಂಡು' ಬರುವ ಮೌಲ್ಯಗಳು ಒಂದು ಪ್ರಮಾಣವಾದರೆ, ವ್ಯಕ್ತಿ ತನ್ನ ಶುದ್ಧತೆಯನ್ನು ಕಾಪಾಡಿಕೊಳ್ಳಲು ನಿರ್ಮಿಸಿಕೊಳ್ಳುವ ಅಘೋಷಿತ ಮೌಲ್ಯಗಳು ಇನ್ನೊಂದು ಪ್ರಮಾಣವಾಗಿರುತ್ತವೆ. ಎಲ್ಲವನ್ನು ಗಾಳಿಗೆ ತೂರಿದ ಪರಿಸರದಲ್ಲಿ ಕೆಲವರು ಮಾತ್ರ ಮೌಲ್ಯಕ್ಕೆ ಬದ್ಧರಾಗಿ ಬದುಕುವುದು ಪ್ರವಾಹದ ಎದುರಿನ ಈಜಾಗುತ್ತದೆ. ಮೌಲ್ಯಗಳ ಪತನಕ್ಕೆ ಜನಸಂಖ್ಯಾ ಸ್ಫೋಟದ ಕೊಡುಗೆ ಇರುವುದನ್ನು ಸಾಂಸ್ಕೃತಿಕವಾಗಿ ಸೂಕ್ಷ್ಮಪ್ರಜ್ಞರಾದವರು ಮನಗಂಡಿದ್ದಾರೆ. ಜನಸಂಖ್ಯೆಯ ಸಾಂಸ್ಕೃತಿಕವಾದ ಆಘಾತ ಈ ಪರಿಯಾದರೆ ರಾಜಕೀಯವಾಗಿಯೂ ಸಹ ಇದರ ದುಷ್ಪರಿಣಾಮಗಳು ಇಲ್ಲದಿಲ್ಲ. ಜನರ ಸಂಖ್ಯೆ ಹೆಚ್ಚಾದಷ್ಟು ವ್ಯಕ್ತಿಯ ರಾಜಕೀಯ ಪ್ರಭಾವ ಕುಗ್ಗುವ ಸಾಧ್ಯತೆ ಇದೆ. ವೈಜ್ಞಾನಿಕವಾಗಿ ವಿಷಯಗಳನ್ನು ಚರ್ಚಿಸಿ ಸಮಾಜಕ್ಕೆ ಧೀರ್ಘಕಾಲೀನವಾಗಿ ಅನುಕೂಲಕರವಾದ ಕ್ರಮಗಳನ್ನು ಪಕ್ಕಕ್ಕಿಟ್ಟು ಆ ಕ್ಷಣದಲ್ಲಿ ಜನಸ್ತೋಮದ ಗಮನವನ್ನು ಸೆಳೆದು ತತ್‌ಕ್ಷಣದ ಲಾಭ ಗಳಿಸಿಕೊಳ್ಳುವಂಥ ಘೋಷಣೆ ಆಧಾರಿತ ರಾಜಕಾರಣ ಮೇಲುಗೈ ಸಾಧಿಸುತ್ತದೆ. ಅಂತಾರಾಷ್ಟ್ರೀಯ ಸಂಘರ್ಷಕ್ಕಿಂತ ಅಂತಾರಾಷ್ಟ್ರೀಯ ಸಹಕಾರದಿಂದ ಎಲ್ಲರಿಗೆ ಲಾಭ ಎಂಬ ಸತ್ಯ ಯಾರಿಗೆ ಗೊತ್ತಿಲ್ಲ? ಆದರೆ ಅಂತಾರಾಷ್ಟ್ರೀಯ ಶಾಂತಿ ಹಾಗೂ ಸಹಕಾರವನ್ನು ಸಾಧಿಸುವುದು ಇಂದಿನ ಅವಕಾಶವಾದೀ ರಾಜಕಾರಣಕ್ಕೆ ಆದ್ಯ ಕರ್ತವ್ಯವಾಗಿದೆಯೇ?

ಜನಸಂಖ್ಯಾ ಸ್ಫೋಟ ಹಾಗೂ ಪರಮಾಣು ಯುದ್ಧದ ಹಿನ್ನೆಲೆಯಲ್ಲಿ ವಿಶ್ವಸಂಸ್ಥೆಯ ಪ್ರಧಾನಕಾರ್ಯದರ್ಶಿ ಯುಥಾಂಟರು ೧೯೭೦ರಲ್ಲಿ ಆಡಿದ ಮಾತುಗಳು ಇಂದಿಗೂ ಪ್ರಸ್ತುತವಾಗಿವೆ. ವಿಶ್ವಸಂಸ್ಥೆ ಸ್ಥಾಪನೆಗೊಂಡು ಇಪ್ಪತ್ತೈದು ಸಂವತ್ಸರಗಳು ಸಂದಿದ್ದ ಸಂದರ್ಭ ಅದು:

> “ಏನಾದರೂ ಪರ್ಯಾಯವಿದ್ದ ಪಕ್ಷದಲ್ಲಿ ವಿಶ್ವಸಂಸ್ಥೆಯ ಯಶಸ್ಸು ಅಥವಾ ಸೋಲು ಅಷ್ಟು ಮುಖ್ಯವೆನಿಸುತ್ತಿರಲಿಲ್ಲ.... ಆದರೆ, ನನ್ನ ದೃಷ್ಟಿಗೆ ಗೋಚರಿಸುವ

ಪ್ರಕಾರ, ಜಗತ್ತನ್ನು ಮುತ್ತಿರುವ ಸಮಸ್ಯೆಗಳು ಹಲವಾರು, ವಿಶೇಷವಾಗಿ ನಾವು ಬದುಕುಳಿಯುವುದೇ ಅತ್ಯಂತ ಪ್ರಧಾನವಾದ ಸಮಸ್ಯೆಯಾಗಿದೆ....

ಜನಸಂಖ್ಯೆ, ಬಡತನ, ಆಹಾರದ ಕೊರತೆ, ನಗರೀಕರಣ, ನೈಸರ್ಗಿಕ ಸಂಪನ್ಮೂಲಗಳ ದುಂದು ಬಳಕೆ, ಇಡೀ ವಾತಾವರಣದ ಮಾಲಿನ್ಯ—ಈ ಸಮಸ್ಯೆಗಳನ್ನು ನಾವು ಇನ್ನೂ ಸರಿಯಾಗಿ ಎದುರಿಸಿಯೇ ಇಲ್ಲ....

ಯಾವುದಾದರೂ ಸವಾಡದ ಮೂಲಕ ನಮ್ಮ ಎಲ್ಲಾ ಗುರುತರವಾದ ರಾಜಕೀಯ ಸಮಸ್ಯೆಗಳು ಮಾಯವಾದರೂ ಸಹ, ಮಾನವಕೋಟಿ ಹಿಂದೆಂದೂ ಎದುರಿಸದಿದ್ದ ಜಟಿಲವಾದ ಪಂಥಾಹ್ವಾನವನ್ನು ನಾವು ಎದುರಿಸಬೇಕಾಗುವುದು.

ವಿನಾಶದ ಅಂಚಿನಲ್ಲಿ ಜಗತ್ತಿನ ಜನಕೋಟಿ ಅನಿಶ್ಚಿತ ಕಾಲದವರೆಗೆ ಉಳಿಯುವುದು ಅಸಹನೀಯವಲ್ಲವೆ?....ಶಕ್ತಿ ರಾಜಕಾರಣದಿಂದ ನಾವು ಸಮಷ್ಟಿ ಜವಾಬ್ದಾರಿಯತ್ತ ಚಲಿಸಬೇಕು, ಸಂಕುಚಿತವಾದ ರಾಷ್ಟ್ರೀಯ ಅಥವಾ ವಾಣಿಜ್ಯ ಲೆಕ್ಕಾಚಾರದಿಂದ ಪೃಥ್ವಿ ಪ್ರೇಮ ಅಥವಾ ವಿಶ್ವಸಂಘಟನೆಯತ್ತ ಹೆಜ್ಜೆ ಇಡಬೇಕು...."

ಪ್ರಜ್ಞಾವಂತರ ಮನೋರಂಗದಲ್ಲಿ ಸದಾ ನೆಲೆನಿಲ್ಲಬೇಕಾದಂಥ ಎಚ್ಚರಿಕೆಯ ಮಾತುಗಳಿವು. ಒರಿಸ್ಸಾದ ಕೆಲವು ಜಿಲ್ಲೆಗಳಲ್ಲಿ ಭೀಕರವಾದ ಹಸಿವಿನಿಂದ ಜನರು ಸಾಯುತ್ತಿರುವ ಸುದ್ದಿ ಈಗ ಜಾಹೀರಾಗಿದೆ; ರಸ್ತೆ ಅಪಘಾತಗಳಲ್ಲಿ ಮಂದಿ ಹಿಂಡುಹಿಂಡಾಗಿ ಸಾಯುತ್ತಿದ್ದಾರೆ, ಚಂಡಮಾರುತ, ಅತಿಉಷ್ಣತೆ, ಹಿಮಪಾತದ ಹೊಡೆತಕ್ಕೆ ಸಿಕ್ಕು ಮರಣವನ್ನಪ್ಪುತ್ತಾರೆ. ಹೆಚ್ಚಿದ ಜನಸಂಖ್ಯೆಯನ್ನು ನಿಸರ್ಗವೇ ಕಡಿಮೆ ಮಾಡಿಕೊಳ್ಳುತ್ತದೆಯೆಂದು ತೋರುವ ಹಾಗಿಲ್ಲ. ಜಗತ್ತಿನಾದ್ಯಂತ ಆಹಾರ ಉತ್ಪತ್ತಿ, ಆರೋಗ್ಯ ಸೇವೆ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಮಹತ್ವದ ಹೆಜ್ಜೆಯಿಟ್ಟಾಗಲೂ ಹಸಿವು, ರೋಗ ಹಾಗೂ ಅನಕ್ಷರತೆಯಿಂದ ಬಳಲುವವರ ಸಂಖ್ಯೆ ಹಲವು ಪಟ್ಟು ಹೆಚ್ಚಾದದ್ದನ್ನು ಕಂಡಿದ್ದೇವೆ. ಮನುಷ್ಯರ ಸಂಖ್ಯೆ ಹೆಚ್ಚಾದಂತೆಲ್ಲಾ ಮನುಷ್ಯ ಜೀವನಮಟ್ಟ ಕುಸಿಯುತ್ತಾ ನಡೆದಿದೆ. ಇನ್ನೂ ಕುಸಿದರೆ ನರನಿಗೂ ಮೃಗಕ್ಕೂ ಭೇದ ತೋರದ ಪರಿಸ್ಥಿತಿ ಉಂಟಾಗುವುದರಲ್ಲಿ ಸಂದೇಹವಿಲ್ಲ. ಎಲ್ಲರ ಸೊಂಟಕ್ಕೆ ಕಟ್ಟಿರುವ ಟೈಂಬಾಂಬಿನ 'ಟಿಕ್ ಟಿಕ್' ಶಬ್ದ ನಮ್ಮನ್ನಾಳುವವರಿಗೆ ಕೇಳಿಸುತ್ತಿದೆಯೇ? ಇಂದಿನ ಅವರ ಜಾಣ ಗುವುದು ಮುಂದೆ ಅವರನ್ನು ಬಲಿತೆಗೆದುಕೊಳ್ಳದೆ ಬಿಡುತ್ತದೆಯೇ?

"ಮಾನವನ ಇತಿಹಾಸದಲ್ಲೇ ನಾವು ಅತ್ಯಂತ ಜಟಿಲವಾದ ಗಂಡಾಂತರವನ್ನು ಈಗ ಎದುರಿಸುತ್ತಿದ್ದೇವೆ. ಯಾವ ಕಡೆ ನೋಡಿದರೂ ಈಗ ಜನ ಜನ ಜನ."

—ಮಾರ್ಗರೇಟ್ ಮೀಡ್ (೧೯೬೯)

ಜ್ಞಾನ

ಅದ್ಯನಡ್ಕ ಕೃಷ್ಣಭಟ್ಟ
೨೩೮೬, ಎಂಟನೆಯ ಮುಖ್ಯರಸ್ತೆ
ವಿಜಯನಗರ ಎರಡನೆಯ ಹಂತ
ಮೈಸೂರು-೫೭೦೦೧೭

ಮಾಹಿತಿ, ತಿಳಿವು, ಅರಿವು, ಬಾಳು ಇವು ಸಾರ್ಥಕ ಜೀವನದ ನಾಲ್ಕು ಆರೋಹಣ ಹಂತಗಳು: ವಸ್ತು ವಿಷಯಗಳ ಬಗ್ಗೆ ಮಾಹಿತಿ ಸಂಗ್ರಹಿಸಿದಾಗ ತಿಳಿವು ಮೊಳೆಯುತ್ತದೆ; ತಿಳಿವಿನ ಸಾರವೇ ಅರಿವು—ಅರಿವೇ ಬೆಳಕು. ಇದು ಬಾಳು ನಡೆಸಲು ಹಣತೆ. ಇಂಥ ಬಾಳ್ವೆಯೇ ಋಜು ಜೀವನ. ಋಜು ಜೀವನ ನಡೆಸುವಾತನಿಗೆ ಸ್ಫುರಿಸುವ ಸಮಗ್ರದರ್ಶನ ಜ್ಞಾನ, ಬಾಹ್ಯ ಜಗತ್ತಿನ ಪ್ರತಿಬಿಂಬವಾದ ಅಂತರಿಕ ಜ್ಯೋತಿ.

ಜ್ಞಾನ ಅಂದರೆ ತಿಳುವಳಿಕೆ ಅಥವಾ ಅರಿವು. ಹಾಲನ್ನು ಹಲವು ಕಡೆ ಹಲವು ಬಾರಿ ನೋಡುತ್ತೇವೆ. ಹಾಲು ಬಿಳಿ ಎಂದು ತಿಳಿಯುತ್ತೇವೆ. ಬೆಂಕಿಯೂ ಬಿಸಿ, ಬಿಸಿಲೂ ಬಿಸಿ. ಆದ್ದರಿಂದ ಬೆಂಕಿಗೂ ಬಿಸಿಲಿಗೂ ಸಾಮಾನ್ಯವಾದದ್ದೇನೋ ಇದೆ ಎಂದುಕೊಳ್ಳುತ್ತೇವೆ. ಮನುಷ್ಯರ ಸಿಟ್ಟು, ಪ್ರೀತಿ, ನಗು, ಮಾತುಗಳನ್ನು ತಿಳಿಯುತ್ತೇವೆ; ಒಬ್ಬೊಬ್ಬರದೂ ಒಂದೊಂದು ಬಗೆಯೆಂದು ಅರಿಯುತ್ತೇವೆ.

ತಿಳಿಯಬೇಕಾದ್ದು ಮತ್ತು ತಿಳಿಯುವ ವ್ಯಕ್ತಿ—ಇವರೊಳಗಿನ ಅಂತರವರ್ತನೆಯಿಂದ ತಿಳುವಳಿಕೆ ಅರ್ಥಾತ್ ಜ್ಞಾನ ಉಂಟಾಗುತ್ತದೆ. ಹುಟ್ಟಿನಿಂದಲೂ ನಾವು ಅನೇಕ ಜನರ ಸಂಪರ್ಕಕ್ಕೆ ಬರುತ್ತೇವೆ, ಅನೇಕ ಸನ್ನಿವೇಶಗಳನ್ನು ಎದುರಿಸುತ್ತೇವೆ. ಎಷ್ಟೆಷ್ಟೋ ವಿದ್ಯಮಾನಗಳನ್ನು ನೋಡುತ್ತೇವೆ. ಬಲ್ಲವರ ಮಾತುಗಳಿಂದ ಕಲಿಯುತ್ತೇವೆ, ಪುಸ್ತಕಗಳನ್ನು ಓದುತ್ತೇವೆ ಈಗಲಂತೂ ಪತ್ರಿಕೆ, ರೇಡಿಯೊ, ದೂರದರ್ಶನದಂಥ ಸಮೂಹ ಮಾಧ್ಯಮಗಳಿಂದ ತಪ್ಪಿಸಿಕೊಳ್ಳುವಂತೆಯೇ ಇಲ್ಲ. ಇವೆಲ್ಲವುಗಳಿಂದ ಪಡೆದುದನ್ನು ಮೆಲುಕು ಹಾಕಿ ಬದುಕಿನ ಬಗೆಗೆ, ಸಮಾಜದ ಬಗೆಗೆ, ದೇಶ-ಜಗತ್ತುಗಳ ಬಗ್ಗೆ ನಮ್ಮದೇ ಅಭಿಪ್ರಾಯಗಳನ್ನು ತಳೆಯುತ್ತೇವೆ. ನಮ್ಮದೇ ಮೌಲ್ಯಗಳನ್ನು ರೂಪಿಸುತ್ತೇವೆ. ಹೀಗೆ ನಾವು ಪಡೆದ ಜ್ಞಾನವೂ ಅಂಥಾ ಜ್ಞಾನದಿಂದ ರೂಢಿಸಿಕೊಂಡ ಮನೋಧರ್ಮವೂ ನಮ್ಮ ವ್ಯಕ್ತಿತ್ವವನ್ನು ರೂಪಿಸುತ್ತವೆ.

ಹಿಂದೆ ಪಂಚೇಂದ್ರಿಯಗಳು ಒದಗಿಸುತ್ತಿದ್ದ ಸಂವೇದನೆಗಳೇ ಮುಖ್ಯವಾದ ಜ್ಞಾನವಾಹಕಗಳಾಗಿದ್ದುವು. ಆದರೆ ವಿಜ್ಞಾನ, ತಂತ್ರವಿದ್ಯೆ ಮುಂದುವರಿದಿರುವ ಇಂದಿನ ದಿನಗಳಲ್ಲಿ ಅಸಂಖ್ಯ ಮನುಷ್ಯ ನಿರ್ಮಿತ

ಸಾಧನಗಳಿವೆ. ನಮ್ಮ ಇಂದ್ರಿಯಗಳನ್ನೇ ವಿಸ್ತರಿಸಿದರೆ ಆಗಬಹುದಾದ ಪರಿಣಾಮಗಳನ್ನು ಅವು ನೀಡಿವೆ. ಸಮುದ್ರತಲ, ಚಂದ್ರನೆಲ, ವಿಶ್ವದ ಅಂಚು, ಜೀವಕೋಶದ ಅಂತರ್ಯ, ಪರಮಾಣುರಚನೆ, ಅನುವಂಶತಾವಾಹಕ ಜೀನ್—ಇವೆಲ್ಲವುಗಳ ಮಾಹಿತಿ ಹಾಗೂ ತತ್ಪರಿಣಾಮದ ಜ್ಞಾನ ಇಂದು ಲಭ್ಯವಾಗಿರುವುದು ಕೇವಲ ಇಂದ್ರಿಯ ಸಂವೇದನೆಗಳಿಂದಲ್ಲ. ಈ ಸಂವೇದನೆಗಳ ಸೂಕ್ಷ್ಮತೆಯನ್ನೂ ವ್ಯಾಪ್ತಿಯನ್ನೂ ಹೆಚ್ಚಿಸಿರುವ ಅನೇಕಾನೇಕ ಸಾಧನಗಳಿಂದ. ದೂರದರ್ಶಕ, ಸೂಕ್ಷ್ಮದರ್ಶಕ, ರೊಬೊಟ್, ಕಂಪ್ಯೂಟರ್, ರೇಡಿಯೊ ಸಂಪರ್ಕ, ದೂರ ಸಂವೇದನೆ ಜ್ಞಾನದಿಗಂತವನ್ನು ವಿಸ್ತರಿಸುತ್ತಿವೆ. ಅದಕ್ಕೆ ತೆರೆದುಕೊಳ್ಳುವ ಜನರೂ ಹೆಚ್ಚುತ್ತಿದ್ದಾರೆ. ಆದರೆ ಜನಸಮುದಾಯದ ಒಟ್ಟು ಕಲ್ಯಾಣ ದೃಷ್ಟಿಯಿಂದ ಬೆಳೆಯುತ್ತಿರುವ ಜ್ಞಾನರಾಶಿಯ ಸೂಚಿತಾರ್ಥಗಳನ್ನು ಜನಸಮುದಾಯ ಹೇಗೆ ಮನನ ಮಾಡುತ್ತಿದೆ ಎಂಬುದು ಮುಖ್ಯ.

ಒಂದು ಸಣ್ಣ ಘಟನೆಯನ್ನು ನೆನಪಿಸಿಕೊಳ್ಳುತ್ತೇನೆ. ಇಬ್ಬರು ಸ್ನೇಹಿತರು, ಅವರಲ್ಲಿ ಒಬ್ಬರಿಗೆ ರಾತ್ರಿ ಆಕಾಶ ವೀಕ್ಷಣೆಯ ಹವ್ಯಾಸ. ನಕ್ಷತ್ರ, ನಕ್ಷತ್ರಪುಂಜ, ನಕ್ಷತ್ರಗಳ ವರ್ಣ–ಉಜ್ವಲತೆ–ದೂರ ಇವೆಲ್ಲವನ್ನು ತಿಳಿಯುತ್ತ ನೋಡುವುದರಲ್ಲಿ ಅವರಿಗೆ ಆಸಕ್ತಿ. ಅವರೊಂದಿಗೆ ಆಕಾಶದ ಗ್ರಹ ನಕ್ಷತ್ರಗಳನ್ನು ಒಂದು ರಾತ್ರಿ ನೋಡಿದ ಸ್ನೇಹಿತ ಮತ್ತೊಂದು ದಿನ ನಗುತ್ತಾ, ಪ್ರಾಸಂಗಿಕವಾಗಿ ಕೇಳಿದರು—'ನೀವು ನನಗೆ ಆಕಾಶದಲ್ಲಿ ಗ್ರಹನಕ್ಷತ್ರಗಳನ್ನು ಗುರುತಿಸಿ ತಿಳಿಸಿದಿರಿ. ಅವೇನೂ ಬದಲಾಗುವುದಿಲ್ಲವಲ್ಲ? ನೀವು ಮತ್ತೆ ಮತ್ತೆ ನೋಡಲು ಹೋಗುವುದರ ಉದ್ದೇಶವೇನು?', ಇಂಥ ಪ್ರಶ್ನೆಯನ್ನು ಮೊದಲನೆಯ ವ್ಯಕ್ತಿ ನಿರೀಕ್ಷಿಸಿರಲಿಲ್ಲ. ಗಂಭೀರವಾದ ಸಂಶೋಧನೆ ಅವರ ಉದ್ದೇಶವಾಗಿರಲಿಲ್ಲ. ತಾನೊಬ್ಬ ನಕ್ಷತ್ರ ವೀಕ್ಷಕ ಎಂದು ಹೇಳಿಸಿಕೊಳ್ಳುವುದೂ ಅವರಿಗೆ ಬೇಕಾಗಿರಲಿಲ್ಲ. ರಾತ್ರಿ ನಿರಭ್ರ ಆಕಾಶವನ್ನು ನೋಡುವಾಗಲೆಲ್ಲ ನಕ್ಷತ್ರಗಳ ಭೀಮಗಾತ್ರಗಳು, ಅವು ಸೃಷ್ಟಿಸುವ ಲೋಕಗಳು, ಅವನ್ನು ಚುಕ್ಕೆಗಳಂತೆ ತೋರಿಸುವ ಅಪಾರ ಆಕಾಶ, ವರ್ಣ–ಕಾಂತಿಗಳಿಗೆ ಕಾರಣವಾದ ಉಷ್ಣತೆ ಇವನ್ನೆಲ್ಲ ನೆನೆಸುತ್ತ ತನ್ನ ಸೀಮಿತ ಗಾತ್ರ, ರಾಶಿ, ಕಾಲಗಳೆಷ್ಟು ಅಲ್ಪ ಎಂಬ ಭಾವನೆಯ ಓಘದಲ್ಲಿ ಅವರು ಹಗುರವಾಗುತ್ತಿದ್ದರು. ಈ ಎಲ್ಲ ಯೋಚನಾಸರಣಿಗಳನ್ನು ಶಬ್ದಗಳಲ್ಲಿ ವಿವರಿಸುವುದು ಸುಲಭವಾಗಿರಲಿಲ್ಲ. ಆದ್ದರಿಂದ ಒಂದು ಕ್ಷಣ ಸುಮ್ಮನಾಗಿ ಅವರು ಸ್ನೇಹಿತನಿಗೆ ಹೇಳಿದರು— 'ರಾತ್ರಿ ಆಕಾಶ ನೋಡಿದ ಮೇಲೆ ಮನಸ್ಸು ತಂಪಾದಂತಾಗಿ ಒಳ್ಳೆಯ ನಿದ್ದೆ ಬರುತ್ತದೆ.' ತನಗೆ ತಿಳಿದಿರುವ ಮಾಹಿತಿ ಅಥವಾ ಜ್ಞಾನವನ್ನು ಮಾನಸಿಕವಾಗಿ ಅನುಭವಿಸಿ ಉಲ್ಲಾಸವನ್ನು ಗಳಿಸಲು ಸಾಧ್ಯವಾಗುವ ಸಂಗತಿ ಈ ಘಟನೆಯಿಂದ ವಿಶದವಾಗುತ್ತದೆ. ಸಹಜ ಆಸಕ್ತಿಯೂ ಜ್ಞಾನಕ್ಷೇತ್ರವೂ ಸುಸಂಗತವಾಗಿ ಸೇರಿಕೊಂಡಾಗ ಇದು ಸಾಧ್ಯ. ಬೌದ್ಧಿಕ ವಿಕಸನಕ್ಕೆ ಇದು ಸಹಾಯಕವಾಗುತ್ತದೆ ಕೂಡ.

ಜ್ಞಾನಕ್ಕೆ ಸಂಬಂಧಿಸಿದ ಇನ್ನೊಂದು ಪ್ರಶ್ನೆಯಿದೆ. ಪಂಚೇಂದ್ರಿಯಗಳು ಅಥವಾ ಸಾಧನಗಳು ಒದಗಿಸುವ ಸಂವೇದನೆಗಳಿಂದ

ಸಿಗುವುದಷ್ಟೇ ಜ್ಞಾನವೆ? ನಮ್ಮ ಸುತ್ತಲಿನ ವಿಶ್ವ ಮತ್ತು ವಸ್ತುಗಳ ಜ್ಞಾನ ಕೇವಲ ಅನುಭವಜನ್ಯವಾದದ್ದೆ? ನಾವೇ ಬೌದ್ಧಿಕವಾಗಿ ರೂಪಿಸುವ ಪರಿಕಲ್ಪನೆ, ಭಾವನೆ ಹಾಗೂ ಸಿದ್ಧಾಂತಗಳಿಂದ ನಮ್ಮ ಹಾಗೂ ನಮ್ಮ ವಿಶ್ವದ ಬಗ್ಗೆ ಹೆಚ್ಚಿನದನ್ನು ತಿಳಿಯಲಾರೆವೆ? ಮನುಷ್ಯನೇ ಸೃಷ್ಟಿಸಿದ ಸಂಖ್ಯಾವಿಶೇಷಗಳೂ ರೇಖಾಕೃತಿಗಳೂ ಗಣಿತ ಪರಿಮಾಣಗಳೂ ಈ ದಿಶೆಯಲ್ಲಿ ಸಹಾಯಕವಾಗಿರುವುದನ್ನು ನಾವು ಮರೆಯುವಂತಿಲ್ಲ. ಆದ್ದರಿಂದ ಅನುಭವಜನ್ಯ ಮತ್ತು ಬುದ್ಧಿಜನ್ಯ ಘಟಕಗಳೆರಡೂ ಜ್ಞಾನದಲ್ಲಿವೆ. ಹಾಲು ಬಿಳಿ, ಬರ್ಫ ಚಳಿ—ಎಂಬಂಥ ಸಂವೇದನೆಗಳು ಉಂಟಾಗುವುದು ಆಯಾ ವಸ್ತುಗಳು ವೀಕ್ಷಕನ ಮೇಲೆ ಬೀರುವ ಪರಿಣಾಮಗಳಿಂದ. ಅಂದರೆ ವಸ್ತುಗಳೂ ವಿದ್ಯಮಾನಗಳೂ ಬೀರುವ ಪರಿಣಾಮಗಳಿಗೆ ಅನುಗುಣವಾಗಿ ಸಂವೇದನೆಗಳಿಂದ ಸಿಗುವ ಜ್ಞಾನವಿದೆ ಎಂದಂತಾಯಿತು. ಅರ್ಥಾತ್ ಮನುಷ್ಯೇತರ ಜೀವಿಗಳ ಮೇಲೆ ಅಥವಾ ಮನುಷ್ಯರಲ್ಲೇ ಬೇರೆ ಬೇರೆ ಮಟ್ಟಗಳ ಸೂಕ್ಷ್ಮಜ್ಞತೆಗಳಿರುವವರ ಮೇಲೆ ಈ ಪರಿಣಾಮಗಳು ಬೇರೆಯೇ ಇರಬಹುದು. ಆದ್ದರಿಂದಲೇ ಒಬ್ಬ ವ್ಯಕ್ತಿ ಒಂದು ಹಂತದಲ್ಲಿ ಪಡೆದ ಜ್ಞಾನ ವಾಸ್ತವತೆಯನ್ನು ಪೂರ್ತಿಯಾಗಿ ಪ್ರತಿಬಿಂಬಿಸದೆ ಹೋಗಬಹುದು.

ಜ್ಞಾನಕ್ಕೊಂದು ಸಾಮಾಜಿಕ ಮುಖವೂ ಇದೆ. ಊರಿಗೊಂದು ಸಾಮಾನ್ಯವಾದ ಗೋಮಾಳವಿದೆ ಎಂದಿಟ್ಟುಕೊಳ್ಳಿ. ದನಗಾಹಿಗಳು ಊರಿನ ಹಸುಗಳನ್ನೆಲ್ಲ ಅಲ್ಲಿ ಮೇಯಿಸುತ್ತಾರೆ ಎಂದುಕೊಳ್ಳೋಣ. ತನ್ನ ಹಿಂಡನ್ನು ದೊಡ್ಡದು ಮಾಡಿದರೆ ಹುಲ್ಲಿನಲ್ಲಿ ಹೆಚ್ಚಿನ ಪಾಲು ಪಡೆಯಬಹುದು, ಹೆಚ್ಚು ಲಾಭ ಗಳಿಸಬಹುದು ಎಂದುಕೊಂಡ ಒಬ್ಬ ದನಗಾಹಿ. ಇದೇ ಯೋಚನೆ ಉಳಿದವರಿಗೂ ಬಂದಾಗ ಅವರೂ ತಮ್ಮ ಹಿಂಡುಗಳನ್ನು ಹಿಗ್ಗಿಸಿದರು. ಒಂದೇ ಗೋಮಾಳದಲ್ಲಿ ಹಿಂದಿಗಿಂತ ಹೆಚ್ಚು ದನಗಳು ಮುಕ್ತವಾಗಿ ಮೇಯತೊಡಗಿದುವು. ಆದರೆ ಗೋಮಾಳದಲ್ಲಿ ಹುಲ್ಲಿನ ಹಾಸು ಮತ್ತು ದಟ್ಟಣೆ ಹೆಚ್ಚಾಗಿರಲಿಲ್ಲ. ಒಂದೊಂದು ದನಕ್ಕೆ ಸಿಗುವ ಹುಲ್ಲಿನ ಪ್ರಮಾಣ ಕಡಿಮೆಯಾಯಿತು; ಹಾಲಿನ ಇಳುವರಿ ಕಡಿಮೆಯಾಯಿತು. ಎಲ್ಲರಿಗೂ ಹಿತಮಿತವಾದ ದನಗಳ ಸಂಖ್ಯೆ ಸಂಪನ್ಮೂಲವನ್ನು ಅವಲಂಬಿಸಿರುವುದು ತಿಳಿಯಿತು. ಹೀಗೆ ಪಡೆದ ಜ್ಞಾನವನ್ನು ವ್ಯಾವಹಾರಿಕವಾಗಿ ಅನ್ವಯಿಸಿ ಬದುಕನ್ನು ಶ್ರೀಮಂತಗೊಳಿಸದಿದ್ದರೆ ಜ್ಞಾನ ಏತಕ್ಕಾಗಿ? ಇದಕ್ಕಾಗಿ ಜನ ಮಾನಸಿಕವಾಗಿ ಸಿದ್ಧರಾಗಬೇಕಾಗುವುದು ಅವಶ್ಯವಾಗುತ್ತದೆ.

ಜ್ಞಾನವೇ ಮನುಷ್ಯರಿಗೆ ಊಹಿಸಲಾಗದ ಸಾಮರ್ಥ್ಯ ನೀಡುತ್ತದೆ. ಮಾಹಿತಿ ಕ್ರಾಂತಿಯ ಇಂದಿನ ಯುಗದಲ್ಲಿ ಬದುಕಿನ ನಿರ್ವಹಣೆಗೂ ಅದು ಅಗತ್ಯ. ಈ ಜಗತ್ತಿನಲ್ಲಿ ನಮ್ಮ ಇತಿಮಿತಿಗಳನ್ನೂ ಸ್ಥಾನವನ್ನೂ ತಿಳಿಯ ಹೇಳುವ ಜ್ಞಾನಕ್ಕೆ ಸದೃಶವಾದುದು ಯಾವುದೂ ಇಲ್ಲ. ಆದರೂ ಅದನ್ನು ಬೆಳಕಿಗೆ ಹೋಲಿಸುವುದುಂಟು. ಏಕೆಂದರೆ ನೆಲದಲ್ಲಿ ದಾರಿ ಕಾಣಲು ಬೆಳಕು ಬೇಕು; ಬದುಕಿನಲ್ಲಿ ದಾರಿ ಕಾಣಲು ಜ್ಞಾನ ಬೇಕು.

ಗುರಿಕಾರ

ಎಚ್. ಆರ್. ಚಂದ್ರವದನರಾವ್
೨೮೭೭/೧೦, ೩ನೇ ಕ್ರಾಸ್, ಚಾಮುಂಡಿಪುರಂ
ಮೈಸೂರು-೫೭೦ ೦೦೪

ಸರ್ಕಸ್ ಮತ್ತು ಕೆಲವು ಡೊಂಬರಾಟದಲ್ಲಿ ಸಾಧಾರಣವಾಗಿ ಈ ಕಾರ್ಯಕ್ರಮ ಇದ್ದೇ ಇರುತ್ತದೆ. ದೊಡ್ಡ ಹಲಗೆಯ ಮುಂದೆ ಅದನ್ನು ಆತುಕೊಂಡು ಸ್ತ್ರೀಯೊಬ್ಬಳು ಕೈ ಕಾಲುಗಳನ್ನು ಸಡಿಲಿಸಿ ನಿಲ್ಲುತ್ತಾಳೆ. ಸುಮಾರು ೧೫–೨೦ ಅಡಿ ದೂರದಿಂದ ಒಬ್ಬ ಕಣ್ಣಿಗೆ ಕರಿಬಟ್ಟೆ–ಕಟ್ಟಿಕೊಂಡು ಹರಿತವಾದ ಚಾಕುಗಳನ್ನು ಒಂದಾದ ಮೇಲೆ ಒಂದರಂತೆ ಅವಳ ಸುತ್ತ ಎಸೆಯುತ್ತಾನೆ. ಕಠಾರಿಗಳು ಅವಳ ತಲೆ, ಕೊರಳು, ತೋಳುಗಳ ಪಕ್ಕ, ಎರಡು ಬೆರಳುಗಳ ಮಧ್ಯೆ ಹಲಗೆಗೆ ಚುಚ್ಚಿಕೊಳ್ಳುತ್ತವೆ. ಶರೀರಕ್ಕೆ ಅವು ಎಷ್ಟು ಹತ್ತಿರದಲ್ಲಿ ಚುಚ್ಚಿರುತ್ತವೆ ಎಂದರೆ ಅವಳು ಸ್ವಲ್ಪವೂ ಚಲಿಸಲಾಗುವುದಿಲ್ಲ, ಹಾಗೆ ಮಾಡಿದರೆ ಕೊಯ್ದು ರಕ್ತ ಬರುವುದು ಖಂಡಿತ.

ನಮ್ಮ ಊರಿಗೆ ಬಂದ ಒಂದು ಸರ್ಕಸ್‌ನಲ್ಲಿ ಈ ಆಟವಿತ್ತು. ಇದನ್ನು ನೋಡಿದ ಒಬ್ಬೊಬ್ಬರೂ ಒಂದೊಂದು ರೀತಿಯಲ್ಲಿ ಮಾತನಾಡಿಕೊಳ್ಳುತ್ತಿದ್ದರು. 'ಕಠಾರಿ ಚೂಪಾಗಿರುವುದಿಲ್ಲ' ಎಂದು ಒಬ್ಬ ಹೇಳಿದರೆ, ಇನ್ನೊಬ್ಬ 'ಅದರ ಹಿಡಿ ಮತ್ತು ಜಗ್ಗಿರುವ ಅಲಗಿನಿಂದ ಪ್ರೇಕ್ಷಕ ಅಚ್ಚರಿಗೊಳ್ಳುತ್ತಾನೆ, ಅಷ್ಟೆ' ಎಂದು ಇನ್ನೊಬ್ಬ. ಮೂರನೆಯವನು 'ಗುರಿಕಾರ ಕಣ್ಣಿಗೆ ಕಟ್ಟಿಕೊಳ್ಳುವ ಬಟ್ಟೆಯಲ್ಲಿ ಖಂಡಿತ ರಂಧ್ರಗಳಿರುತ್ತವೆ. ಇಲ್ಲದಿದ್ದರೆ ಅಷ್ಟು ನಿಖರವಾಗಿ ಗುರಿ ಇಡಲು ಸಾಧ್ಯವೇ? ಅರ್ಧ ಅಂಗುಲ ವ್ಯತ್ಯಾಸವಾದರೂ ಅವಳ ಕೊರಳಿನ ರಕ್ತ ಧಮನಿ ಕತ್ತರಿಸಿ ರಕ್ತ ಸೋರಿ ಹೋಗಿ ಅವಳು ಸತ್ತು ಹೋಗುತ್ತಾಳೆ. ಎಲ್ಲಾ ಕಣ್ಣುಕಟ್ಟು ವ್ಯಾಪಾರ ಎಂದ.

ಗುರಿಕಾರನ ಎಡಬಿಡದ ಅಭ್ಯಾಸದ ಬಲವೇ ಅವನ ಗುರಿಯ ಸಾಮರ್ಥ್ಯಕ್ಕೆ ಕಾರಣ ಎಂದು ತಿಳಿದಿದ್ದ ನಾನು ಅವನನ್ನು ಕಂಡು ಅವನ ಚಾಕಚಕ್ಯತೆಯ ಬಗ್ಗೆ ಹೊಗಳಿದೆ. ನನ್ನ ಮಾತಿನಿಂದ ಅವನೇನು ಉಬ್ಬಿ ಹೋಗಲಿಲ್ಲ. ತುಂಬಾ ನಿಗರ್ವದಿಂದ ಹೇಳಿದ—ಇದರಲ್ಲಿ ಚಾಕಚಕ್ಯತೆ ಏನು ಬಂತು, ಕಲೆ ಏನು ಬಂತು? ನಿರಂತರ, ಅಭ್ಯಾಸ; ಕೊಂಚ ಹುಟ್ಟಿನಿಂದ ಬಂದ ಸಾಮರ್ಥ್ಯ ಹಾಗೂ ಅದೃಷ್ಟ, ಅಷ್ಟೆ. ನನ್ನ ಕುಹಕವಿಲ್ಲದ ಮಾತನ್ನು ಕೇಳಿ ಅತನಿಗೆ ನನ್ನ ಬಗ್ಗೆ ಸ್ವಲ್ಪ ವಿಶ್ವಾಸ ಮೂಡಿತು. 'ನನ್ನ ಈ ಕಾರ್ಯದಲ್ಲಿ ಜನ ತಿಳಿದುಕೊಂಡಿರುವ ಹಾಗೆ ಒಂದು ರೀತಿಯ ಕೈ

ಮೂಲ: ಬೋಕಸಾನ 'ದಿ ಆರ್ಟಿಸ್ಟ್' ಲೇಖನದ ಅನುವಾದ.

ಚಳಕವೂ ಇದೆ. ನಿಮಗೆ ಹೇಳಿ ಬಿಡ ಬೇಕೂಂತ. ಆದರೆ ಏನು ಪ್ರಯೋಜನ?' ಎಂದು ಹೇಳಿದ. ನಾನು ಸ್ವಲ್ಪ ಹೊತ್ತು ಸುಮ್ಮನಿದ್ದು ಬಲವಂತ ಮಾಡಿದ ಮೇಲೆ, 'ಹೌದು ನಿಮಗೆ ಏಕೆ ಹೇಳಬಾರದು? ನೀವು ನನ್ನನ್ನು ಸರಿಯಾಗಿ ಅರ್ಥಮಾಡಿಕೊಳ್ಳ ಬಲ್ಲಿರಿ', ಎಂದ ಅವನು ಕಣ್ಣಲ್ಲಿ ಕಿಡಿ ಕಾರುತ್ತಾ 'ಅವಳು ನನ್ನನ್ನು ಇನ್ನೂ ಚೆನ್ನಾಗಿ ಅರ್ಥಮಾಡಿಕೊಂಡಿದ್ದಾಳೆ' ಎಂದು ಸೇರಿಸಿದ.

'ಯಾರು?' ಎಂದೆ ನಾನು.

'ನನ್ನ ಹೆಂಡತಿ ಎಂದು ಅನಿಸಿಕೊಂಡಿರುವ ಆ ಸೂಳೆ. ಎಂತಹ ಕೆಟ್ಟ ಹೆಂಗಸು! ಅವಳನ್ನು ನಾನು ತುಂಬಾ ದ್ವೇಷಿಸುತ್ತೇನೆ, ಏಕೆ ಗೊತ್ತೆ? ನನಗೆ ಮೋಸಮಾಡಿದಳು ಎಂದಲ್ಲ. ನನ್ನನ್ನು ಅವಳು ಪೂರ್ಣವಾಗಿ ತಿಳಿದುಕೊಂಡಿದ್ದಾಳೆ. ನನ್ನ ಸಾಮರ್ಥ್ಯ ಅವಳಿಗೆ ಗೊತ್ತಿದೆ, ಅದಕ್ಕೋಸ್ಕರ.'

ಪ್ರತಿರಾತ್ರಿ ಅವಳು ಹಲಗೆಯ ಮುಂದೆ ತನ್ನ ಕೈಗಳನ್ನು ಪಕ್ಕಕ್ಕೆ ಚಾಚಿ ಬೆರಳು ಗಳನ್ನು ಅಗಲಿಸಿ ನಿಲ್ಲುತ್ತಿದ್ದಳು. ಇವನು ಅವಳ ಸುತ್ತಲೂ ಬರುವಂತೆ ಚಾಕುಗಳನ್ನು ಎಸೆದು ಹಲಗೆಗೆ ಅಂಟುವಂತೆ ಮಾಡುತ್ತಿದ್ದ. ನಿಜವಾಗಿಯೂ ಅದೆಲ್ಲಾ ಹರಿತವಾದ ಚಾಕು ಗಳು. ಆಕೆಗೆ ಸುಮಾರು ನಲವತ್ತು ವರ್ಷ. ಈ ಹಿಂದೆ ನೋಡಲು ಅಂದವಾಗಿದ್ದಿರ ಬೇಕು.

ಗುರಿಕಾರ ಅವಳಿಗೆ ಗುರಿಯಿಟ್ಟು ಚೂರಿ ಗಳನ್ನು ಎಸೆಯುತ್ತಿದ್ದಾಗ ಕಡಿಮೆ ಶಬ್ದ ದಲ್ಲಿ ನಗುತ್ತಿದ್ದಳು. ತನಗಾಗುವ ಅಪಾಯ ಹೆಚ್ಚಿಸುವುದಕ್ಕೆ ಇಂತಹ ನಗು ಎಂದು ಕೊಂಡಿದ್ದೆ ನಾನು.

ಗುರಿಕಾರ ಕೇಳಿದ—'ಅವಳು ನಗುವು ದನ್ನು ನೋಡಿದ್ದೀರಿ ಅಲ್ಲವೇ?'

'ನೋಡಿದ್ದೇನೆ.'

'ಆ ಕುಹಕ ನಗೆ ನನ್ನನ್ನು ಹಾಸ್ಯ ಮಾಡುವುದಕ್ಕೆ. ನನ್ನನ್ನು ನಿರ್ಲಕ್ಷಿಸು ತ್ತೇನೆಂದು ಸಂಕೇತಿಸುವ ನಗು ಅದು. ನಾನು ಇಷ್ಟಪಟ್ಟರೂ ಅವಳಿಗೆ ಏನೂ ಮಾಡಲಾಗುವುದಿಲ್ಲ ಎಂದು ಅವಳಿಗೆ ಗೊತ್ತು.'

'ಏನು ಮಾಡಬೇಕೆಂದು ನಿನ್ನ ಇಷ್ಟ?,

'ಏಕೆ? ಗೊತ್ತಾಗಲಿಲ್ಲವೇ? ಅವಳನ್ನು ಕೊಂದು ಹಾಕಬೇಕೆಂದು ನನ್ನ ಇಷ್ಟ.'

'ಏಕೆ? ಮೋಸ ಮಾಡಿದ್ದಾಳೆಂದೆ?"

'ಇಲ್ಲ, ಇಲ್ಲ. ನಾನು ಅವಳ ತಪ್ಪನ್ನು ಬಹಳ ಹಿಂದೆಯೇ ಕ್ಷಮಿಸಿಬಿಟ್ಟಿದ್ದೇನೆ. ನಾನು ಕ್ಷಮಿಸಿದ್ದೇನೆ ಎಂದು ಹೇಳಿದ ದಿನ ದಿಂದಲೂ ಮುಂದೆ ಎಂದಾದರೊಂದು ದಿನ ಅವಳ ಕುತ್ತಿಗೆ ಕೊಯ್ದು ಪ್ರತೀಕಾರ ತೆಗೆದುಕೊಳ್ಳಬಹುದೆಂದು ತಿಳಿಸುತ್ತಾ ಬಂದಿದ್ದೇನೆ. ಅದು ಪ್ರತೀಕಾರದಂತೆ ಕಾಣದೆ ಅಕಸ್ಮಾತ್ತಾಗಿ ನಡೆದ ದುರ್ಘಟನೆ ಅನ್ನಿಸಿಕೊಳ್ಳುವುದು ಎಂದೂ ಹೇಳಿ ದ್ದೇನೆ.'

'ಓ, ನೀನು ಅದನ್ನು ಹೇಳಿದ್ದೀಯ?'

'ಹೌದು. ಕೆಲಸ ಬಹಳ ಸರಳ, ಸುಲಭ. ಅರ್ಧ ಅಂಗುಲದ ತಪ್ಪಿನಲ್ಲಿ ಅವಳ ಕೊರಳಿನ ಜುಗ್ಯುಲರ್ ರಕ್ತನಾಳ ಕತ್ತರಿಸಿ ಹೋಗು ತ್ತದೆ. ನನ್ನ ಚಾಕುಗಳು ಬಹು ಚೂಪಾ ಗಿವೆ. ಜುಗ್ಯುಲರ್ ರಕ್ತಧಮನಿ ಕತ್ತರಿಸಿ ಹೋದರೆ ಉಳಿಯುವುದು ಕಷ್ಟ.'

'ಹೌದು, ನೀನು ಹೇಳುತ್ತಿರುವುದು ನಿಜ.'

'ಇದರಿಂದ ನನಗೆ ಯಾವ ವಿಧವಾದ ಅಪಾಯ ಅಥವಾ ಅಪಕೀರ್ತಿ ತಟ್ಟಲಾರದು. ಜನ ಅನಾಹುತವೆಂದು ತಿಳಿಯುತ್ತಾರೆ. ನಮ್ಮ ಈ ಕೆಲಸದಲ್ಲಿ ತಪ್ಪುಗಳಾಗಿ ಅನಾಹುತಗಳು ಆಗುತ್ತಲೇ ಇರುತ್ತವೆ, ನನ್ನ ಕಡೆ ಬೆರಳು ತೋರಿಸಿ ತಪ್ಪಿತಸ್ಥ ಎನ್ನುವ ಹಾಗಿಲ್ಲ. ಜನ ನನ್ನನ್ನು ಕಂಡು ಕರುಣೆ ತೋರಿಸುತ್ತಾರೆ. ನಾನು ಅಳುತ್ತಾ, 'ಅಯ್ಯೋ, ನನ್ನ ಹೆಂಡತಿ ಸತ್ತುಹೋದಳು. ನನಗೆ ಅವಳು ಬದುಕುವುದು ಅತ್ಯಗತ್ಯವಾಗಿತ್ತು. ಸಂಸಾರದ ಅರ್ಥ ಆದಾಯ ಅವಳಿಂದ ಹುಟ್ಟುತ್ತಿತ್ತು' ಎಂದು ಹೇಳಿದರೆ ಜನ ನಿಜವೆಂದು ನಂಬಿಕೊಳ್ಳುತ್ತಾರೆ.

'ಹೌದು. ಪ್ರತೀಕಾರಕ್ಕೆ ಇದಕ್ಕಿಂತ ಬೇರೆ ಯಾವ ಮಾರ್ಗವು ಉತ್ತಮ ಅನ್ನಿಸುವುದಿಲ್ಲ' ಎಂದೆ ನಾನು.

'ನಾನು ಅವಳಿಗೆ ನನ್ನ ಮನಸ್ಸಿನಲ್ಲಿ ಇರುವುದನ್ನು ಹೇಳಿದೆ. ಅದಕ್ಕೆ ಅವಳ ಪ್ರತಿಕ್ರಿಯೆ ಏನು ಗೊತ್ತೆ? ನೀನು ತುಂಬಾ ಒಳ್ಳೆಯವನು, ನಿನಗೆ ಇಂತಹ ಎಂಟೆದೆ ಇಲ್ಲ. ನೀನು ನನ್ನನ್ನು ಕೊಲ್ಲಲಾರೆ.'

'ನಿಮಗೆ ನಾನು ಹೇಳುತ್ತೇನೆ. ನಾನೇನು ತುಂಬ ಒಳ್ಳೆಯ ವ್ಯಕ್ತಿಯಲ್ಲ. ಅಪರಾಧವೆನ್ನಿಸುವ ಎಂತಹ ದುಷ್ಕಾರ್ಯವನ್ನಾದರೂ ನಾನೂ ಮಾಡಬಲ್ಲೆ.'

'ಅವಳಿಗೆ ನಿನ್ನ ಮಾತಿನಿಂದ ಹೆದರಿಕೆಯಾಗಲಿಲ್ಲವೇ?'

'ಇಲ್ಲ. ನಿನ್ನ ಕೈಯ್ಯಲ್ಲಿ ಆಗದ ಕೆಲಸ' ಎಂದು ಹೇಳಿದಳು.

'ಅವಳೇಕೆ ಹಾಗೆ ತಿಳಿದಿದ್ದಾಳೆ?'

'ನಾನು ಆಗಲೆ ಹೇಳಿದೆನಲ್ಲಾ. ನನ್ನ ನಿರಂತರ ಅಭ್ಯಾಸ ಕಂಡು ಅವಳಿಗೆ ನಾನು ತಪ್ಪುಮಾಡಲು ಸಾಧ್ಯವೇ ಇಲ್ಲವೆಂದು ತಿಳಿದುಕೊಂಡಿದ್ದಾಳೆ. ಹೌದು, ಈಗ ನನ್ನ ಕೈಗಳು ನಾನು ಹೇಳಿದ ಹಾಗೆ ಕೇಳುವುದಿಲ್ಲ. ನಾನು ತಪ್ಪು ಮಾಡಬೇಕೆಂದರೂ ಸಾಧ್ಯವಿಲ್ಲ.'

'ಹೌದಾ?'

'ಖಂಡಿತವಾಗಿಯೂ, ನನ್ನ ಪ್ರತೀಕಾರದ ಕನಸು ನನಸಾಗದೆ ಉಳಿದಿದೆ. ಅವಳನ್ನು ಕೊಲ್ಲಬೇಕೆಂದು ಎಷ್ಟೋ ಸಾರಿ ಕತ್ತಿ ಕುತ್ತಿಗೆಗೆ ಬೀಳಲಿ ಎಂದು ಹೊಡೆದಿದ್ದೇನೆ. ಆದರೆ ಅದು ಸಾಧ್ಯವೇ ಆಗಿಲ್ಲ. ಇದನ್ನು ಕಂಡೇ ಅವಳು ಆ ಕೆಟ್ಟ ನಗೆಯನ್ನು ನಗುವುದು.'

ಅವನು ಕಣ್ಣಲ್ಲಿ ನೀರು ತುಂಬಿಕೊಂಡು ಕೋಪದಿಂದ ಹಲ್ಲುಕಡಿದ. 'ಅವಳಿಗೆ ನನ್ನ ಪರಿಶ್ರಮ, ತಾಳ್ಮೆ, ತಂತ್ರ ಎಲ್ಲವೂ ಗೊತ್ತಾಗಿದೆ. ನಾನೊಬ್ಬ ತಪ್ಪು ಮಾಡದ ಯಂತ್ರವಾಗಿದ್ದೇನೆ ಎಂದು ಅರ್ಥಮಾಡಿಕೊಂಡಿದ್ದಾಳೆ. ಆ ಯಂತ್ರದ ಬಗ್ಗೆ ಅವಳಿಗೆ ತಮಾಷೆ. ಅವಳಿಗೆ ನಾನು ತಪ್ಪುಮಾಡುವ ಸಾಧ್ಯತೆ ಇಲ್ಲ ಎಂಬ ಅರಿವಿದೆ.'

...ಹಗೆತನದ ಬಳುವಳಿ

ಟಿ. ಎಸ್. ಲಲಿತ
೭೦೩, ಮೊದಲನೆ ಮಹಡಿ,
೧೭ನೇ ಮೇನ್, ಸರಸ್ವತಿಪುರ
ಮೈಸೂರು-೫೭೦೦೦೯

[ಆಫ್ರಿಕಾದ ಹುತು-ತುತ್ಸಿ ಬಣಗಳ ನಡುವೆ ಮೊಳೆತು, ಚಿಗಿತ ದ್ವೇಷದ ರ್ವಾಂಡಾ ಹತ್ಯಾಕಾಂಡ, ಮಾನವೀಯತೆಯನ್ನೇ ಪಣಕೊಡ್ಡುವಂಥದು. ದಿನಕ್ಕೆ ಸರಾಸರಿ ೫೦೦೦ ಜನರಂತೆ ಕೇವಲ ೧೦೦ ದಿನಗಳಂತರದಲ್ಲಿ ೫ ಲಕ್ಷ ಜನ ಕೊಚ್ಚಿಹಾಕಲ್ಪಟ್ಟರು, ಇಲ್ಲವೇ, ಕೋವಿ ಹಾಗೂ ಇತರ ಆಯುಧಗಳಿಗೆ ಬಲಿಯಾದರು. ಆ ಕೊಲೆಯ ನಂತರದ ಪರಿಣಾಮವಾಗಿ ಹರಡಿದ ರೋಗ ರುಜಿನಗಳಿಗೆ ಬಲಿಯಾದವರ ಸಂಖ್ಯೆ ಲೆಕ್ಕವಿಲ್ಲದ್ದು. ಈ ಹಿನ್ನೆಲೆಯ ಒಂದು ನೈಜ ಘಟನೆ.]

ಸೂರ್ಯ ಮಂಕಾಗಿದ್ದ. ಮೋಡ ಮುಸುಕಿದ ಸೂರ್ಯ ಮತ್ತೇನಾಗಲು ಸಾಧ್ಯ? ಸೂರ್ಯನೇ ಮಂಕಾದ ಮೇಲೆ ಜಗತ್ತಿಗೆ ಬೆಳಕೆಲ್ಲಿ? ಸೂರ್ಯನನ್ನು ಸುತ್ತುವರಿದ ಈ ಕರಿಯ ದಟ್ಟಮೋಡಗಳು—ಬಾನಿಂದ ಬುವಿಗಿಳಿದು, ಜನ-ಜೀವನವನ್ನು ತಣಿಸಬೇಕಾದವು. ನೆಲ ಸೋಕಿ ಮಣ್ಣೊಡಲಿಂದ ಹಸಿರು ಚಿಮ್ಮಿಸುವಂಥವು. ಕಂಡ ರೈತನ ಕಣ್ಣಲ್ಲಿ ಹೊಳಪು ಮೂಡಿಸಬೇಕಾದವು. ಕಂಡೊಡನೆ ಗರಿಬಿಚ್ಚಿ, ನವಿಲು ನಲಿದು ನರ್ತಿಸಬೇಕಾದ ಮೋಡವಿದು. ಕುಬೇರನ ಶಿಕ್ಷೆಗೊಳಗಾದ ಯಕ್ಷ, ತನ್ನ ಮೂಲಕ ಪ್ರೇಯಸಿಗೆ ಸಂದೇಶ ಕಳುಹಿಸುವಂತೆ ಕೋಮಲ ಭಾವನೆಗಳನ್ನು ಮೂಡಿಸುವ ಮೋಡ, ಆದರೆ ಇಲ್ಲಿ....ಈ ಮೋಡಗಳನ್ನು ಕಂಡಾಗ ಸಂತಸದಿಂದ ನಲಿಯಬೇಕಾದ ಮನ ಮುರುಟುತ್ತದೆ. ಮರುಭೂಮಿಯಲ್ಲಿ ಕಾದ ಮರಳ ಮೇಲೆ, ನಡು ಮಧ್ಯಾಹ್ನ ನಡೆದಂತೆನಿಸುತ್ತದೆ. ಇಲ್ಲಿ ಜೀವನ ಚಿವುಟಿ ಹೋಗುತ್ತದೆ. ಕಾರಣ ಬರಿಯ ನೀರು ತುಂಬಿದ ಕರಿಯ ಮೋಡಗಳಲ್ಲ ಇವು. ಇಡೀ ಆಗಸವನ್ನೇ ಆವರಿಸಿರುವ ಯುದ್ಧದ ಕಾರ್ಮೋಡಗಳಿವು. ನಾಗರೀಕತೆಯ ಮೇಲೆ ಬರೆ ಎಳೆದ ಯುದ್ಧ. ಇಲ್ಲಿ ಸುರಿದ ಮಾನವ ನೆತ್ತರಿನಿಂದ ನೆಲ ಹಸಿಯಾಗಿದೆ. ಇಲ್ಲಿ ಕೇಳುತ್ತಿರುವುದು ಸಿಡಿಲು, ಗುಡುಗುಗಳ ಆರ್ಭಟವಲ್ಲ, ಕರ್ಣಕಠೋರವಾದ ಸಿಡಿಮದ್ದಿನ ಆರ್ಭಟ. ಸಾವು ನೋವಿನಿಂದ ಚೀರಿಡುವ ಜನರ ಆಕ್ರಂದನ. ಇಲ್ಲಿ ಸುರಿಯುವುದು ಗುಂಡಿನ ಮಳೆ. ಥಳಕ್ಕನೆ ಮಿಂಚಿ ಮರೆಯಾಗುವ ಸೆಳೆಮಿಂಚಲ್ಲ. ಮಿಂಚಿನಂತೆ ಬಂದೆರಗುವ ರಾಕೆಟ್‌ಗಳ ಷೆಲ್‌ಗಳ ಧಾಳಿ. ಇದೆಲ್ಲ ಏತಕ್ಕಾಗಿ? ಯಾರಿಗಾಗಿ? ಪ್ರಭುತ್ವದ ಪಟ್ಟ ಕಟ್ಟಿಸಿಕೊಂಡವರಿಗಾಗಿ ತಮ್ಮ ಹಮ್ಮು

ಮೂಲ: ದಿನಾಂಕ ೭-೧-೯೭ರ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯಲ್ಲಿನ ಲೇಖನ.

ಬಿಮ್ಮುಗಳಿಗಾಗಿ ಹೋರಾಡುವ ನಾಯಕರಿಗಾಗಿ; ಲಕ್ಷಾಂತರ ಜನರ ಬಲಿ.

ಊರಾಚೆಯ ನಿರಾಶ್ರಿತರ ಕ್ಯಾಂಪಿನಿಂದ ಕಣ್ಣು ಹಾಯುವವರೆಗೂ ಕಾಣುತ್ತಿರುವುದು ಹೊತ್ತಿ ಉರಿಯುತ್ತಿರುವ ಕೆನ್ನಾಲಿಗೆಯ ಜ್ವಾಲೆ. ಊರಿಗೆ ಊರೇ ರಣರಂಗವಾಗಿತ್ತು. ನಾಗರಿಕರು ಕಂಡಲ್ಲಿ ಗುಂಡಿಡುವ ಶತ್ರುದಳ. ೧೦×೪ ಅಡಿಗಳ ಉದ್ದಗಲದ ಕಡಿಕೆ ಗೋಡೆಗಳ ಮೇಲೆ ಹೊದ್ದ ಪ್ಲಾಸ್ಟಿಕ್ ಶೀಟಿನ ಕವಚದ ಮನೆಗಳು, ಕಾರಾಗೃಹದ ಖೈದಿಗಳ ಸೆಲ್‌ಗಳಿರುವ ೭×೪ ಅಡಿಗಿಂತ ವಿಶಾಲವಲ್ಲವೆ? ತಮ್ಮನ್ನು ಈ ಸ್ಥಿತಿಗೆ ತಂದ ಶತ್ರುಪಕ್ಷದ ಮೇಲೆ ಈ ಜನರ ಹಗೆತನ, ಈ ಕಡಿಕೆಯ ನಡುವೆಯೇ ಮೊಳೆತು ಚಿಗುರುತ್ತಿದೆ. ಮುಯ್ಯಿ ತೀರಿಸಿಕೊಳ್ಳುವ ಅವಕಾಶ ಮತ್ತೊಮ್ಮೆ ಸಿಕ್ಕರೆ....

ಅಲ್ಲಲ್ಲೇ ನಿಂತ ನೀರು ಕೊಳಚೆಯ ವಾಸನೆಯನ್ನು ಸುತ್ತಲೂ ಬೀರುತ್ತಿದೆ. ಎಲ್ಲೆಲ್ಲೂ ಕಸಕಡ್ಡಿ, ತಿಪ್ಪೆಯ ರಾಶಿ, ಝುಯ್ಯ್ ಗುಡುತ್ತಾ ಅದಕ್ಕೆ ಮುತ್ತುತ್ತಿದ್ದ ನೊಣಗಳು. ದೇಹದ ಮೂಳೆಗಳನ್ನೆಣಿಸಬಹುದಾದ ನಾಯಿಯೊಂದು ಮೂಳೆಯೊಂದನ್ನು ಕಡಿಯುವ ಪ್ರಯತ್ನ ಮಾಡಿದೆ. ಮೂಳೆಗೆ ಇನ್ನೂ ಅಂಟಿರುವ ಹಸಿ ರಕ್ತ, ಮಾಂಸ ಹೊಸದಾಗಿ ಸತ್ತಿರುವ ಪರದೇಶಿ ಹೆಣವೊಂದರ ಇರವು ಸೂಚಿಸುತ್ತಿದೆ. ಕಣ್ಣು ಹಾಯಿಸಿದಲ್ಲೆಲ್ಲಾ ನೋವು, ನಿರಾಸೆ, ಹಸಿವು.

ಲಾರಿಯೊಂದು ನಿರಾಶ್ರಿತರ ಕ್ಯಾಂಪಿನ ಸಂದುಗೊಂದುಗಳಲ್ಲಿ ಸುತ್ತು ಹಾಕುತ್ತಿದೆ. ಏನಾದರೂ ಆಹಾರ ಸಿಕ್ಕೀತೇನೋ ಎಂದು, ಗುಳಿಬಿದ್ದ ಕಣ್ಣುಗಳಲ್ಲಿ ಆಸೆ ಹೊತ್ತ ಬಡ ಮಕ್ಕಳು, ಲಾರಿಯ ಹಿಂದೆ, ಹಿಂದೆಯೇ ಓಡಿ ಬರುತ್ತಿವೆ. ಸಿಪಾಯಿಯೊಬ್ಬ ಅವುಗಳನ್ನು ಹೆದರಿಸಿ ಓಡಿಸುವ ಪ್ರಯತ್ನ ಮಾಡುತ್ತಿದ್ದಾನೆ. ಸ್ಪೀಕರ್ ಹಿಡಿದ ಸೇನಾಧಿಕಾರಿಯೊಬ್ಬ ಸೂಚನೆ ನೀಡಿದ. "ಎಲ್ಲರೂ ಕೇಳಿ, ಹದಿನೈದು ವರ್ಷಗಳ ಮೇಲ್ಪಟ್ಟ ಸುದೃಢ ಯುವಕರಿಗೆ ಕೆಲಸವಿದೆ. ಕೆಲಸ ಮಾಡಲಿಚ್ಛಿಸುವ ಯುವಕರೆಲ್ಲ ಮುಂದಿನ ಮೈದಾನದಲ್ಲಿ ಸೇರಿ. ಇನ್ನರ್ಧ ಘಂಟೆಯೊಳಗಾಗಿ ನಿಮ್ಮನ್ನು ಕರೆದೊಯ್ಯಲು ವಾಹನದ ಏರ್ಪಾಡಾಗಿದೆ. ದಿನಕ್ಕೆ ತಲಾ ಹದಿನೈದು ರೂ. ಸಂಬಳ."

ಕ್ಯಾಂಪಿನಾಚೆ ಶೂನ್ಯವನ್ನು ದಿಟ್ಟಿಸುತ್ತ ಕುಳಿತಿದ್ದ ಮುಖೀಜ. ಸೇನಾಧಿಕಾರಿ ಸಾರಿದ್ದು ಅವನ ಕಿವಿಗೂ ಬಿದ್ದಿತ್ತು. ಮನೆಯಲ್ಲಿ ಉಪವಾಸ ಸ್ಥಿತಿಯಿಂದ ಮನ ಕುಗ್ಗಿ ಹೋಗಿತ್ತು. ಕೊಡುವ ಪಡಿತರ ತಮ್ಮ ಹಸಿವು ಹಿಂಗಿಸುವುದಕ್ಕೇ ಸಾಲದು. ಹಿಟ್ಟಿದ್ದರೆ ಎಣ್ಣೆ ಇಲ್ಲ. ಉಪ್ಪಿದ್ದರೆ ಮೆಣಸಿಲ್ಲ. ಒಡಲಲ್ಲಿ ಭುಗಿಲೆದ್ದ ಹಸಿವಿನ ದಳ್ಳು ಶಮನವಾಗುವ ಹಾದಿ ಕಾಣುತ್ತಿಲ್ಲ. ಖಾ ಬಟ್ಟಲನ್ನು ತಿರುತಿರುಗಿಸಿ ನೋಡುವ ಹಸು ಗಳ ಪಾಡು ಮನ ಕರಗಿಸುತ್ತಿದೆ. ನೀರ ಕಾಣದ ಮೈಗಳು ನಾರಿದರೆ, ಎಣ್ಣೆ ಕಾಣ ಕೂದಲು ಅಂಕೆ ತಪ್ಪಿ ಹಾರುತ್ತಿದೆ. ಈ ಎ ಗೋಳಿಗೂ ಕೊನೆ ಎಂದು?

ಮುಖೀಜಾ ಕೂಡ ಕೆಲಸಕ್ಕೆ ಸೇರು ಆತುರ ತೋರಿದ್ದ. ಆದರೆ ತಾನು ಕೆಲಸ ಹೋಗುವುದು ಅಮ್ಮನಿಗೆ ಬೇಕಿಲ್ಲ. ಒಳ ಭಯ ಅವಳಿಗೆ. ಮುಳ್ಳು ತಂತಿಯ ಬೇ ದಾಟಿದರೆ ತೀರಿತು. ಯಾರಿಂದಲೂ ಏನ ಸುದ್ದಿ ಸಮಾಚಾರ ತಿಳಿಯುವಂತಿ ಅವರವರ ನೋವೇ ಅವರವರಿಗೆ. ಮಗ

ವಿಚಾರ ಆಮೇಲೆ ಯಾರಲ್ಲಿ ಕೇಳಬೇಕು? ಬಂಧುಬಳಗವೆಲ್ಲ ಶತ್ರುಧಾಳಿಗೀಡಾಗಿದೆ. ಇರುವ ಈ ಮಗನೊಬ್ಬನೂ ಶತ್ರುಗಳ ಕೈಗೆ ಸಿಕ್ಕಿದನೆಂದರೆ, ಮತ್ತವನ ಮುಖ ನೋಡುವಂತಿಲ್ಲ ತಾನು. ಈ ಜನರ ನಡುವೆ ಶತ್ರುಗಳ್ಯಾರೋ? ಮಿತ್ರರ್ಯಾರೋ?

ಮನದಲ್ಲೆದ್ದ ದ್ವಂದ್ವಗಳ ತಾಕಲಾಟ ಮುಖೀಜನಿಗೆ ಹೋಗಲೇ? ಬೇಡವೇ? ಶತ್ರುಧಾಳಿಗೆ ಸಿಕ್ಕರೆ ಒಮ್ಮೆಲೇ ಸಾವು. ಇಲ್ಲವೇ ಉಪವಾಸದಿಂದ ನರಳಿ ನರಳಿ ನಿಧಾನ ಸಾವು. ಮನ ಉದ್ವೇಗದಿಂದ ಹೊಯ್ದಾಡುತ್ತಿದೆ. ದೂರದಿಂದ ಕೇಳುತ್ತಿದ್ದ ಹಾರನ್ ಬರಬರುತ್ತ ಹತ್ತಿರವಾಗಿ, ಮುಖೀಜನೆದುರು ಬಂದು ನಿಂತ ಲಾರಿಯಿಂದ ಕವಿದ ಧೂಳು, ಕಣ್ಣು ಮೂಗುಗಳಿಗಡರಿತ್ತು. ಮೈದಾನದಲ್ಲಿ ತಾನೊಬ್ಬನೇ ಇಲ್ಲ. ತನ್ನಂಥ ನಿರಾಶ್ರಿತರು ಸಾಕಷ್ಟು ಮಂದಿ.

ನಿಂತ ಲಾರಿಯಿಂದಿಳಿದ ಅಧಿಕಾರಿ, ಎಲ್ಲರ ಮೇಲೂ ಒಮ್ಮೆ ದೃಷ್ಟಿ ಹಾಯಿಸಿ, ಎಲ್ಲರೂ ಲಾರಿ ಹತ್ತುವಂತೆ ಆಜ್ಞಾಪಿಸಿದ. ಮೈದಾನದಲ್ಲಿ ಸೇರಿದ್ದ ಎಲ್ಲರನ್ನೂ ದೊಡ್ಡಿಗೆ ಕೂಡುವ ಕುರಿಗಳಂತೆ ಲಾರಿಗೆ ತುಂಬಲಾಯ್ತು. ಕೈಕಾಲು ಅಲುಗಿಸದಷ್ಟು ಇರುಕಿ ನಿಂತ ದೇಹಗಳು. ಮತ್ತೊಮ್ಮೆ ಧೂಳೆಬ್ಬಿಸುತ್ತ, ಹತ್ತು ಮೈಲಿ ದೂರದ ಮತ್ತೊಂದು ಕ್ಯಾಂಪಿಗೆ ಹೊರಟಿತು ಲಾರಿ. ಸುತ್ತ ಸಾಗುವ ಕಲ್ಲು ಹಾದಿ. ಚಕ್ರ ಉರುಳಿದಂತೆ ಹಳ್ಳದಿಣ್ಣೆಯಲ್ಲಿ, ಏರಿಳಿಯುತ್ತ ಖಡಖಡಲ್ಲನೆ ಎತ್ತಿ ಕುಕ್ಕುವ ಲಾರಿ; ಮೈಯ್ಯ ಮೂಳೆಗಳೆಲ್ಲ ನಜ್ಜುಗುಜ್ಜಾಗುತ್ತಿವೆ. ಕಣ್ಣು ಹಾಯಿಸಿದತ್ತೆಲ್ಲ ಬೋಳುಗುಡ್ಡಗಳು ಬಿಸಿಲ ಝಳವನ್ನು ಎರಚುತ್ತಿವೆ.

ಅರ್ಧ ಘಂಟೆಯ ಪ್ರಯಾಣದ ನಂತರ ನಿಂತ ಲಾರಿಯಿಂದ, ಎಲ್ಲರೂ ಕೆಳಗಿಳಿಯುವಂತೆ ಆಜ್ಞಾಪಿಸಿದ ಅಧಿಕಾರಿ. ಲಾರಿಯಿಂದ ಕೆಳಗಿಳಿದ ಮುಖೀಜಾ ಸುತ್ತೊಮ್ಮೆ ದೃಷ್ಟಿ ಹಾಯಿಸಿದ. ಅಲ್ಲಲ್ಲಿ ನಾಲ್ಕಾರು ಲಾರಿಗಳು ನಿಂತದ್ದು ಕಂಡು ಬಂತು. ದೊಡ್ಡ ಬುಲ್ಡೋಜರ್ ಒಂದು ಮೈದಾನದ ಮಣ್ಣನ್ನು ಸರಿಸುತ್ತಿತ್ತು.

ತಾವಿಲ್ಲಿ ಮಾಡಬೇಕಾದ್ದೇನು? ಇಲ್ಲೇನು ಹೊಲಗದ್ದೆಗಳೇ? ತೋಟಗಳೇ? ಅಥವಾ ಫ್ಯಾಕ್ಟರಿಗಳೇ? ಏನೊಂದೂ ಕಣ್ಣಿಗೆ ಬೀಳುತ್ತಿಲ್ಲ. ಬಿರು ಬಿಸಿಲಿಗೆ ಬಿರುಕು ಬಿಟ್ಟ ನೆಲದ ಕೆಂಪು ಹುಡಿ ಮಣ್ಣನ್ನು ಬಿಟ್ಟು ಮತ್ತೇನೂ ಇಲ್ಲ. ನಿಂತ ಲಾರಿಗಳ ಒಳಗೆ ದೃಷ್ಟಿ ಹಾಯಿಸಿದ ಮುಖೀಜಾ ಬೆಬ್ಬಳಿಸಿ ನಿಂತ. ಮೈಯ್ಯ ರೋಮ ರೋಮವೂ ನಿಮಿರಿ ನಿಂತಿತು. ತಾನೇನು ಕಾಣುತ್ತಿದ್ದೇನೆ? ಕಾಣುತ್ತಿರುವುದು ನಿಜವೇ? ತಾಡಪಾಲಿನ ತೆರೆ ಸರಿದ ಲಾರಿಗಳಲ್ಲಿದ್ದುದು ಇಳಿಸಬೇಕಾದ ಯಾವುದೇ ಸರಕಲ್ಲ. ಮಾನವ ಶರೀರಗಳು. ಅಡ್ಡಾದಿಡ್ಡಿಯಾಗಿ ತುಂಬಿದ ಕೆಲವು ಹೆಣಗಳ ಕೈಗಳು, ಕಾಲುಗಳು ಲಾರಿಯಾಚೆ ಜೋತಾಡುತ್ತಿವೆ. ಕೆಲವಕ್ಕೆ ಮೈಮೇಲೆ ಬಟ್ಟೆಯಿದ್ದರೆ ಮತ್ತೆ ಕೆಲವು ಬೆತ್ತಲೆ. ಕೆಲವನ್ನು ಚಾಪೆಯಲ್ಲಿ ಸುತ್ತಿದ್ದರೆ ಕೆಲವನ್ನು ಚಿಂದಿಯಲ್ಲಿ. ಬಾಯಿಂದ ಹರಿದ ಜೊಲ್ಲು ಕೆನ್ನೆಯ ಮೇಲೆ ಕರೆಗಟ್ಟಿದೆ. ಎತ್ತಲೋ ನೋಡುವಂತಿದ್ದ ಹೆಣದ ಕಣ್ಣುಗಳು, ಊದಿದ ಮುಖಗಳು, ಚಾಚಿದ ನಾಲಿಗೆ, ದಿಗಿಲು ಹುಟ್ಟಿಸುತ್ತಿದೆ. ದಾರಿಯಲ್ಲಿ ಬರುವಾಗಂತೂ ಲಾರಿಯಿಂದ ಜಾರಿ ಬಿದ್ದ ಹೆಣಗಳ ಮೇಲೆ ಹಿಂದೆ ಬರುತ್ತಿದ್ದ

ಲಾರಿಗಳು ಹರಿದು ರಸ್ತೆಯೆಲ್ಲಾ ರಕ್ತದಿಂದ ಜಾರುವಂತಾಗಿದೆ. ಯಾವ ಶರೀರದ ಗುರುತೂ ಸಿಗುತ್ತಿಲ್ಲ. ಓಹ್ ಎಷ್ಟು ರೌದ್ರ, ಎಷ್ಟು ಭೀಭತ್ಸ! ತಾನೇನು ಮಾಡಬೇಕೆಂಬ ಪ್ರಶ್ನೆಗೆ ಉತ್ತರ ಸಿಗದಾಗ, ತಲೆ ತುರಿಸಿದ ಮುಖೀಜಾ, ಅರೆಘಳಿಗೆ ಕಣ್ಣು ಮುಚ್ಚಿದ.

ಹೊಂಡದಲ್ಲಿ ನಿಂತ ನೀರು ಕುಡಿದು, ಪಕ್ಕದ ಕ್ಯಾಂಪಿನಲ್ಲೆಲ್ಲಾ ಕಾಲರಾ ಹರಡಿತ್ತು. ಅದು ಬಿಟ್ಟರೆ, ಬೇರೆಲ್ಲೂ ನೀರಿನಾಸರೆ ಇಲ್ಲ. ಕೆರೆ ಭಾವಿಗಳಿಗೂ ಶತ್ರುಪಕ್ಷದವರು ವಿಷಪ್ರಯೋಗ ಮಾಡಿದ್ದಾರಂತೆ. ನಗರದ ಆಸ್ಪತ್ರೆಗಳೂ ಶತ್ರುಗಳ ಬಾಂಬ್ ಧಾಳಿಗೆ ಗುರಿಯಾಗಿವೆ. ಕ್ಯಾಂಪಿರುವುದು ನಗರದಿಂದ ಎಷ್ಟೋ ದೂರ. ಇಲ್ಲಂತೂ ರೋಗಿಗಳ ಶುಶ್ರೂಷೆಗೆ ಬೇಕಾದ ಔಷಧೋಪಕರಣಗಳಿಲ್ಲ. ಹೆಣಗಳ ಬಣವೆ ಬಿಟ್ಟದಂತೆ ಎಲ್ಲೆಲ್ಲೂ ಸಾವು. ಅವರವರ ವಿಧಿಗವರವರನ್ನು ಬಿಟ್ಟಾಗಿತ್ತು. ಈಗ ಉಸಿರುಳಿದಿರುವವರ ಬಗ್ಗೆ ಯಾರಿಗೂ ಯೋಚನೆ ಇಲ್ಲ. ಉಸಿರಳಿದವರನ್ನು ಒಪ್ಪ ಮಾಡುವ ಕಾರ್ಯ ತುರ್ತಿನದಾಗಿತ್ತು. ಕೊಳೆಯುತ್ತಿರುವ ಹೆಣಗಳು ಬೀರುವ ದುರ್ಗಂಧ ಸಹಿಸಲಸಾಧ್ಯ. ಕೆಲವೆಡೆ ನರಳಿಕೆಯ ನೋವು ಹೃದಯ ತಟ್ಟುತ್ತಿದೆ. ಆದರೆ ಅಸಹಾಯಕತೆ, ಆ ಹೃದಯವನ್ನು ಕಲ್ಲಾಗಿಸುತ್ತಿದೆ.

ಸೇನಾಧಿಕಾರಿಯ ಸ್ವರ ಕೇಳಿ ಇಹಜಗತ್ತಿಗಿಳಿದ ಮುಖೀಜ. ಅಧಿಕಾರಿ ಸೂಚನೆ ನೀಡಿದ. "ಇಲ್ಲಿ ತೋಡಿರುವ ಗುಂಡಿಗಳಿಗೆ ಲಾರಿಗಳಲ್ಲಿರುವ ಹೆಣಗಳನ್ನು ಸಾಗಿಸಬೇಕು. ಆ ಚೀಲದಲ್ಲಿ ಪ್ಲಾಸ್ಟಿಕ್‌ನ ಕೈಗವಸುಗಳಿವೆ. ಎಲ್ಲರೂ ಅದನ್ನು ಹಾಕಿಕೊಳ್ಳಿ. ಹೂಂ, ಬೇಗ, ಬೇಗ ಹೊರಡಿ."

ಸೇನಾಧಿಕಾರಿ ಹದಿನೈದು ರೂ.ಗಳ ಸಂಬಳಕ್ಕೆ ತಮ್ಮನ್ನು ಕರೆತಂದ ಕೆಲಸದ ಅರಿವಾಯ್ತು ಮುಖೀಜನಿಗೆ. ಮಾಡದೆ ವಿಧಿ ಇಲ್ಲ. ಹಸಿದ ತಾಯಿ, ತಂಗಿಯರ ಮುಖ ಕಣ್ಣ ಮುಂದೆ ತೇಲಿ ತೇಲಿ ಬರುತ್ತಿದೆ. ಇದು ಬಿಟ್ಟು ಬೇರೇನೂ ಕೆಲಸ ಸಿಗುವ ಸಾಧ್ಯತೆಯೂ ಇಲ್ಲ. ಮಾಡದಿದ್ದಲ್ಲಿ ಅಧಿಕಾರಿಯ ಕೋಪಕ್ಕೆ ತುತ್ತಾಗಲೂ ಬೇಕು. ಈ ಜನವೂ ಸಾಯುವ ಮೊದಲು ಎಷ್ಟು ಹಸಿವು, ನೋವು ಅನುಭವಿಸಿರಬಹುದು.

ಒಂದೊಂದೇ ಹೆಜ್ಜೆ ಹಾಕುತ್ತ, ಚೀಲದತ್ತ ಸಾಗಿದ. ಕೈಗಳು ಯಾಂತ್ರಿಕವಾಗಿ ಗವಸು ತೊಟ್ಟವು. ೩೦ ಅಡಿ ಉದ್ದ ೬ ಅಡಿ ಅಗಲದ ಹಳ್ಳದ ಬಳಿ, ಮಾನವ ಶರೀರಗಳನ್ನು ಹೊತ್ತು ನಿಂತ ಲಾರಿಯತ್ತ ನಡೆದ. ಡವಗುಡುತ್ತಿದ್ದ ಹೃದಯದೊಂದಿಗೆ ಒಂದೊಂದೇ ಹೆಣವನ್ನು ಇತರರೊಂದಿಗೆ ಸೇರಿ, ಮಣ್ಣಿಗಿಳಿಸಿದ ಮುಖೀಜ. ಇಳಿದ ಹೆಣಗಳಿಗೆ ಲೆಖ್ಖವಿಲ್ಲ. ಇಂಥ ನಾಲ್ಕಾರು ಗುಂಡಿಗಳಿಗೆ ಹೆಣವಿಳಿಸಿದ ಬಳಿಕ ಲೆಫ್ಟಿನೆಂಟನೊಬ್ಬ ಉಳಿದ ಹೆಣಗಳಿಗಾಗಿ ಹೊಸ ಜಾಗ ಹುಡುಕುತ್ತಿದ್ದ. ದೂರ ನಿಂತ ತಂದೆಯೊಬ್ಬ, ಮಣ್ಣು ಮಾಡಲು ತಂದ, ಸತ್ತ ತನ್ನ ಕಂದಮ್ಮನನ್ನು ಎದೆಗವಚಿಕೊಂಡು, ಮತ್ತೊಂದು ಗುಂಡಿ ತಯಾರಾಗುವುದನ್ನು ಕಾತರದಿಂದ ಕಾಯುತ್ತಿದ್ದ. ಅವನ್ನು ಕಂಡ ಮುಖೀಜನಿಗರಿವಿಲ್ಲದೆ, ಕಣ್ಣಿಂದ ಜಾರಿದ ಎರಡು ಹನಿಗಳು ಮಣ್ಣಿನೊಳಸೇರಿದವು. ಅಂಗಿಯ ತುದಿಯಿಂದ ಕಣ್ಣೊರೆಸಿಕೊಂಡು, ಮತ್ತೊಂದು ಗುಂಡಿಯತ್ತ ನಡೆದ. ಮೃತ ಶರೀರಗಳನ್ನು ಹೊತ್ತ ಮತ್ತೆರಡು ಲಾರಿ

ಗಳು ಬಂದವು. ಸಮಾಧಿ ಮಾಡಲು ಬೇಕಾಗುವ ಸಮಯಕ್ಕಿಂತ ಶೀಘ್ರವಾಗಿ ಜನ ಸಾಯುತ್ತಿದ್ದಾರೆ.

ಕೆಲವಾರು ತಿಂಗಳ ಹಿಂದೆ ತಣ್ಣನೆಯ ನೆರಳು ನೀಡುತ್ತಿದ್ದ ಸಾಲುಮರಗಳು, ಬಣ್ಣಬಣ್ಣದ ಹೂವಿಂದ ತುಂಬಿದ ಉದ್ಯಾನಗಳು, ನಳನಳಿಸುತ್ತಿದ್ದ ತೆಂಗು, ಬಾಳೆಗಳ ತೋಟ ಇಂದು ರುದ್ರಭೂಮಿಯಾಗಿದೆ. ಹಸಿರೊಡೆದು ಉಣಿಸಿ, ತಣಿಸಿದ ನೆಲವಿಂದು ತಾನುಣಿಸಿದವರನ್ನೇ ನುಂಗಲು ಬಾಯ್ದೆರೆದು ನಿಂತಿದೆ. ಹಿನ್ನೆಲೆಯ ಬೆಟ್ಟಗುಡ್ಡಗಳ ಮುಂದಿನ ಫಲವತ್ತಾದ ನೆಲ, ನದಿಯ ತಂಪು ನೀರು, ಸೈನಿಕರ ಸುರಿದ ನೆತ್ತರಿಂದ ಕೆಂಪಾಗಿದೆ. ಈ ಯುದ್ಧ ತರುವ ಪರಿಣಾಮ ಎಷ್ಟು ಘೋರ?

೫೦ ಅಡಿ ಅಗಲ, ೭ ಅಡಿ ಉದ್ದದ ಬೃಹದಾಕಾರದ ಗುಂಡಿ ಈಗ ಸಿದ್ಧವಾಗಿದೆ. ಲೆಫ್ಟಿನೆಂಟ್ ಹುಡುಗರನ್ನು ಅವಸರಿಸುತ್ತಾನೆ. "ಹೂಂ ಬೇಗ ಬೇಗ". ಮಗುವನ್ನು ಮಣ್ಣಿಗಿಳಿಸಿದ ತಂದೆಯ ಕಣ್ಣಾಲಿ ತುಂಬಿ ಬಂದಿತ್ತು. ಬೇಸಗೆಯ ಮಧ್ಯಾಹ್ನದ ಬಿಸಿಲ ಝಳ. ಬಾಯಾರಿದರೂ ನೀರಿನಾಸರೆ ಇಲ್ಲ. ಹರಿಯುತ್ತಿದ್ದ ಬೆವರೊರೆಸಿಕೊಂಡ ಮುಖೀಜ. ಮನದಲ್ಲಿ ಕುದಿವ ಲಾವಾರಸದಂಥ ಭಾವನೆಗಳು. ಇನ್ನೆರಡು ಲಾರಿಗಳ ಹೆಣಗಳನ್ನು ನುಂಗಿತ್ತು ಆ ದೊಡ್ಡಗುಂಡಿ. ಈ 'ಹಗೆತನದ ಬಳುವಳಿ'ಯ ಮೇಲೆ ಮಣ್ಣು ಮುಚ್ಚಿತ್ತು ಬುಲ್ಡೋಜರ್.



"ಕತ್ತಲ ಯುಗಗಳ ಅಥವಾ ಸಮಕಾಲೀನ ಪ್ಲೇಗುಗಳಿಗಿಂತ ಸುಲಭವಾಗಿ ಜನಸಂಖ್ಯೆಯ ಹೆಚ್ಚಳವೆಂಬ ಪ್ಲೇಗನ್ನು ನಾವು ಕಂಡು ಹಿಡಿದಿರುವ ಸಾಧನಗಳಿಂದ ಹಾಗೂ ನಮ್ಮ ಬಳಿ ಇರುವ ಸಂಪನ್ಮೂಲಗಳಿಂದ ಪರಿಹರಿಸಬಹುದೆಂದು ನಮಗೆ ತಿಳಿದೇ ಇಲ್ಲ. ವಾಸ್ತವವಾಗಿ ಪರಿಹಾರದ ಬಗ್ಗೆ ನಮಗೆ ಪೂರ್ಣ ಅರಿವಿಲ್ಲ ಎಂಬುದಲ್ಲ ಸಮಸ್ಯೆ, ನಿಜವಾದ ತೊಂದರೆ ಎಂದರೆ ಈ ಸಮಸ್ಯೆಯ ಅಗಾಧತೆಯ ಹಾಗೂ ಈ ರೋಗಕ್ಕೆ ತುತ್ತಾಗಿರುವ ಕೋಟಿಗಟ್ಟಲೆ ಜೀವಿಗಳ ಶಿಕ್ಷಣದ ಬಗ್ಗೆ ನಾವು ಗಮನ ಹರಿಸದಿರುವುದು."

—ಮಾರ್ಟಿನ್ ಲೂಥರ್ ಕಿಂಗ್ (೧೯೬೬)

ಪರಿಸರ ಮತ್ತು ಪ್ರಗತಿ

ಬಿ. ಆರ್. ಪರಿಣೀತ
೫೬೧, ೪ನೇ ಮುಖ್ಯ ರಸ್ತೆ, 'ಎ' ಬ್ಲಾಕ್
೨ನೇ ಹಂತ, ರಾಜಾಜಿನಗರ
ಬೆಂಗಳೂರು-೫೬೦ ೦೧೦

ಅನುಭೋಗಾತಿರೇಕತ್ವ (ಕನ್ಸ್ಯೂಮರಿಸಮ್) ಇಂದಿನ ಭಾರತೀಯರಿಗೆ ಬಡಿದಿರುವ ರೋಗ: ಹಾಸಿಗೆಗಿಂತ ಉದ್ದ ಕಾಲುಚಾಚುವುದು! ಸರಳಜೀವನ, ಗಹನಚಿಂತನ ಎಂಬ ಭವ್ಯ ಆದರ್ಶ ಇವರ ಉಲ್ಲಂಘನೆಯಿಂದ ಕೃತಕ ಜೀವನ ಶೂನ್ಯಚಿಂತನ ಅಥವಾ ಗಣಕಚಿಂತನ (ಕಂಪ್ಯೂಟರ್ ಥಿಂಕಿಂಗ್) ಆಗಿ ವಿರೂಪ ಗೊಂಡಿದೆ. ಇಂಥಲ್ಲಿ ಪರಿಸರ-ಪ್ರಗತಿ ಸಹಜೀವನ ಸಾಧ್ಯವಾಗಬೇಕಾದರೆ ತ್ಯಾಗ ಜೀವನವೇ ಋಜುಜೀವನ, ಭೋಗಜೀವನವಲ್ಲ ಎಂಬುದು ರಾಷ್ಟ್ರೀಯ ನೀತಿ—ಚಿಂತನೆಯಲ್ಲಿಯೂ ಆಚರಣೆಯಲ್ಲಿಯೂ—ಮೈದಳೆಯಬೇಕು.

ವಿಜ್ಞಾನ, ತಂತ್ರವಿದ್ಯೆ, ನಾಗರಿಕ ಜೀವನ ಮತ್ತು ಆಧುನಿಕ ಕೈಗಾರಿಕಾ ಆರ್ಥಿಕ ವ್ಯವಸ್ಥೆಯ ಬೆಳವಣಿಗೆಯಿಂದಾಗಿ ಅನೇಕ ಅನುಕೂಲತೆಗಳು ಆಗಿರುವುದರೊಂದಿಗೆ, ಅಪಾರ ಹಾನಿಯೂ ಉಂಟಾಗಿದೆ. ಮನುಷ್ಯ ತನ್ನ ದುರಾಸೆಯಿಂದಾಗಿ, ವಿವೇಚನೆ ಇಲ್ಲದೆ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸುತ್ತಿರುವನು. ಇಂದು ನಾವು ಅನುಭವಿಸುತ್ತಿರುವ ನಾಗರಿಕ ಜೀವನದ ಸುಖಭೋಗಗಳಿಂದಾಗಿ ಅನೇಕ ಕಷ್ಟಗಳನ್ನೂ ಎದುರಿಸಬೇಕಾಗಿದೆ. ಭೂಮಿಯ ಮೇಲೆ ಜೀವರಾಶಿಗೆ ಉಂಟಾಗಬಹುದಾದ ವಿನಾಶವನ್ನು ಕುರಿತು ಪ್ರಕೃತಿ ಅದರದೇ ಆದ ಮೌನ ರೀತಿಯಲ್ಲಿ ಅಸಮಾಧಾನವನ್ನು ವ್ಯಕ್ತಪಡಿಸಿದೆ.

**ಪ್ರಕೃತಿಯನವರತ ಮನುಜನತಿಷ್ಠುತಿರುವಂತೆ
ವಿಕೃತಿಗೊಳಿಸುವನವನು ಮಾಳಿಯಂಗಗಳ
ಭೌತಿಕ ರಸತಂತ್ರ ಶಿಲ್ಪಿವಾಹನಯಂತ್ರ
ವ್ಯಾಕೃತಿಸರೀನವಳ ! ದುಂಕುತಿಪ್ಪ**

ಪರಿಸರ ಮಾಲಿನ್ಯದ ಸಮಸ್ಯೆಯನ್ನು ಇಡೀ ಪ್ರಪಂಚವೇ ಎದುರಿಸುತ್ತಿದೆ. ಧೂಳುಗುಳುತ್ತಿರುವ ವಾಹನಗಳಿಂದಾಗಿ ಮತ್ತು ಕಾರ್ಖಾನೆಗಳಿಂದಾಗಿ ವಾಯುಮಾಲಿನ್ಯ ಮತ್ತು ಜಲಮಾಲಿನ್ಯ ಉಂಟಾಗಿವೆ. ಮಾನವನಿಂದಾಗಿ ಪರಿಸರದಲ್ಲಿ ತೀವ್ರ ಅಸಮತೋಲನ ಉಂಟಾಗಿದೆ. ವಾತಾವರಣ ಕಲುಷಿತವಾಗಿದೆ ಮತ್ತು ನೀರು ವಿಷಪೂರಿತವಾಗಿದೆ. ಅಲ್ಲದೆ, ಮಾನವ ಬಾಹ್ಯಾಕಾಶದ ಮೇಲೂ ದಾಳಿ ನಡೆಸಲು ಸಿದ್ಧನಾಗುತ್ತಿದ್ದಾನೆ. ಪರಿಸರವನ್ನು ರಕ್ಷಿಸಲು ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳುವುದನ್ನು ತ್ಯಜಿಸಬೇಕೆ? ಎಂಬ ಪ್ರಶ್ನೆ ಉದ್ಭವಿಸುತ್ತದೆ. 'ಆರ್ಥಿಕ ಪ್ರಗತಿ' ಮತ್ತು 'ಪರಿಸರದಲ್ಲಿ ಸಮತೋಲನ'—ಇವೆರಡರ 'ಸಹಬಾಳ್ವೆ' ಸಾಧ್ಯವೇ?

ಪರಿಸರವಾದಿಗಳ ವಾದಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸುವಂತಿಲ್ಲ. ಹಚ್ಚ ಹಸುರಾದ ಭೂಪ್ರದೇಶಗಳೆಲ್ಲಾ ಬರಡಾಗಿವೆ ಎಂಬುದು ಸ್ಪಷ್ಟವಾಗಿದೆ. ಕೈಗಾರಿಕೆಗಳ ಬೇಡಿಕೆಯನ್ನು ಪೂರೈಸಲು, ಆರ್ಥಿಕ ಬೆಳೆಗಳಿಗಾಗಿ ಮತ್ತು ಹಣ್ಣಿನ ತೋಟಗಳಿಗಾಗಿ ಭೂಮಿಯನ್ನು ಬಳಸಲಾಗುತ್ತಿದೆ. ಅದಲ್ಲದೆ ಬೆಳೆಯುತ್ತಿರುವ ಜನಸಂಖ್ಯೆಗೆ ವಸತಿ ಸೌಲಭ್ಯವನ್ನು ಕಲ್ಪಿಸಲು ಅರಣ್ಯಪ್ರದೇಶಗಳನ್ನು ನೆಲಸಮ ಮಾಡಲಾಗುತ್ತಿದೆ. ಮರಗಳನ್ನು ಕಡಿಯುವುದರಿಂದಾಗಿ, ಭೂಮಿಯ ಮೇಲಿನ ಫಲವತ್ತಾದ ಮಣ್ಣು ಸವೆದುಹೋಗುವುದರಿಂದಾಗಿ, ಹವಾಗುಣದಲ್ಲಿ ಅನೇಕ ಬದಲಾವಣೆಗಳುಂಟಾಗಿವೆ. ಮರಗಳಿಲ್ಲದ ಕಾರಣದಿಂದಾಗಿ ವಾಯುಮಂಡಲದಲ್ಲಿ ಇಂಗಾಲದ ಅಂಶ ಹೆಚ್ಚಾಗುವುದು ಮತ್ತು ಮಳೆಯಿಲ್ಲದೆ, ಕೃಷಿ ಉತ್ಪಾದನೆಗೆ ದಕ್ಕೆಯುಂಟಾಗುವ ಸಾಧ್ಯತೆಗಳು ಹೆಚ್ಚಾಗಿವೆ. ಕುಡಿಯುವ ನೀರು ಕಲುಷಿತವಾಗಿದೆ ಮತ್ತು ಕೆರೆಗಳು ಒಣಗಿ ಹೋಗುತ್ತಿವೆ. ಕಾರ್ಖಾನೆಗಳ ಸುತ್ತಮುತ್ತಲಿನ ಪ್ರದೇಶಗಳಲ್ಲೆಲ್ಲಾ ಕೆರೆಗಳ ಮತ್ತು ನದಿಗಳ ನೀರು ರಾಸಾಯನಿಕ ವಸ್ತುಗಳಿಂದ ಅಶುದ್ಧವಾಗಿದೆ. ಇಂಥಹ ಪರಿಸ್ಥಿತಿಯನ್ನು ಹೆಚ್ಚು ಕಾಲ ಮುಂದುವರೆಯಲು ಬಿಡಲು ಸಾಧ್ಯವೇ? ಆದ್ದರಿಂದ ಎತ್ತರವಾದ ಅಣೆಕಟ್ಟುಗಳನ್ನು ನಿರ್ಮಿಸುವುದನ್ನು ಹಾಗೂ ಪರಮಾಣು ಶಕ್ತಿ ಉತ್ಪಾದನೆಯನ್ನು ಅನೇಕ ಜನರು ವಿರೋಧಿಸುತ್ತಿದ್ದಾರೆ.

ಸರ್ಕಾರದಲ್ಲಿ ಯೋಜನೆಗಳನ್ನು ರೂಪಿಸುವವರು 'ಪರಿಸರ ರಕ್ಷಣೆ' ಮತ್ತು 'ಆರ್ಥಿಕ ಅಭಿವೃದ್ಧಿ'ಯ ನಡುವೆ ಸುವರ್ಣ ಮಾಧ್ಯಮವನ್ನು ಪತ್ತೆಹಚ್ಚಬೇಕು. ಇಂದು 'ವಿನಾಶವಿಲ್ಲದೆ ಅಭಿವೃದ್ಧಿ' ಮತ್ತು 'ವಿವೇಚನೆಯಿಂದ ಸಂಪನ್ಮೂಲಗಳ ಬಳಕೆ' ಅವಶ್ಯವಾದುದು. ರಾಜಕೀಯ ಮೌಲ್ಯಗಳ ಕುಸಿತ ಮತ್ತು ಆಳವಾಗಿ ಬೇರೂರಿರುವ ಸ್ವಾರ್ಥ ಹಿತಾಸಕ್ತಿಗಳಿಂದಾಗಿ, ಪರಿಸರ ರಕ್ಷಣೆ ಚಳುವಳಿಗಳನ್ನು 'ಪ್ರಗತಿ ವಿರೋಧಿ ಚಳುವಳಿ'ಗಳೆಂದು ಖಂಡಿಸಲಾಗುತ್ತಿದೆ. ಆದರೆ ಭಾರತದಲ್ಲಿ ರಸ್ತೆಗಳು, ಅಣೆಕಟ್ಟುಗಳು, ವಿದ್ಯುದಾಗಾರಗಳು, ಸಂಪರ್ಕ ಸಾಧನೆಗಳು ಮುಂತಾದ ಅವಶ್ಯವಾದ ಅಗತ್ಯಗಳು ಇಲ್ಲ ಎಂಬುದರತ್ತ ಗಮನ ಹರಿಸಬೇಕು. ಇದರಿಂದಾಗಿಯೇ ಭಾರತ ಹಿಂದುಳಿದ ರಾಷ್ಟ್ರವೆನಿಸಿಕೊಂಡಿದೆ. ಭಾರತದ ಆರ್ಥಿಕ ಸ್ಥಿತಿಯನ್ನು ಪುನಾರಚಿಸಲು ನೈಸರ್ಗಿಕ ಸಂಪತ್ತನ್ನು ಸರಿಯಾಗಿ ಬಳಸುವುದು ಅನಿವಾರ್ಯವಾಗುತ್ತದೆ. ಭಾರತವು ಸಂಪದ್ಭರಿತ ನಾಡಾಗಿದ್ದರೂ, ಅದನ್ನು ಸರಿಯಾಗಿ ಬಳಸಲಾಗುತ್ತಿಲ್ಲ ಎಂಬುದು ಬೆಳಕಿಗೆ ಬಂದಿದೆ. ಪ್ರಪಂಚದ ಮಾಲಿನ್ಯಕ್ಕೆ ಮುಂದುವರೆದ ರಾಷ್ಟ್ರಗಳೇ ಹೆಚ್ಚಾಗಿ ಕಾರಣವಾಗಿವೆ. ಪರಿಸರ ರಕ್ಷಣೆಗೆ ಹೆಚ್ಚಿನ ಆದ್ಯತೆಯನ್ನು ನೀಡಿ, ಭಾರತ ಅದರ ಆರ್ಥಿಕ ಪ್ರಗತಿಯನ್ನು ಬಲಿಕೊಡುವಂತಿಲ್ಲ. ಪಾಶ್ಚಾತ್ಯ ರಾಷ್ಟ್ರಗಳು, ಪ್ರಕೃತಿಯಲ್ಲಿ ಅಸಮತೋಲನ ಉಂಟಾಗಬಹುದೆಂಬ ಭಯದಿಂದ ಪ್ರಗತಿಪರ ಯೋಜನೆಗಳನ್ನು ನಿಲ್ಲಿಸಿಲ್ಲ. ಬದಲಾಗಿ, ನದಿಗಳನ್ನು ಶುದ್ಧೀಕರಿಸಲು, ಮಾಲಿನ್ಯವನ್ನು ತಡೆಹಿಡಿಯಲು ಮತ್ತು ಕೈಗಾರೀಕರಣದಿಂದ ಉಂಟಾಗುವ ಹಾನಿಯನ್ನು ಕಡಿಮೆಮಾಡಲು ಪ್ರಯತ್ನಿ

ಸುತ್ತಿವೆ. ಆದ್ದರಿಂದ ಪ್ರಗತಿಯ ಪಥದಲ್ಲಿ ಸಾಗುತ್ತಿರುವ ಭಾರತ ಆರ್ಥಿಕವಾಗಿ ಹಿಂದುಳಿಯಲು ಸಾಧ್ಯವಿಲ್ಲ. ಹೀಗಾಗಿ ಪರಿಸರ ರಕ್ಷಣೆಗೆ ಪ್ರಪಂಚದ ಸರ್ವ ರಾಷ್ಟ್ರಗಳೂ ಶ್ರಮಿಸಬೇಕು.

ಒಂದು ಕಾಲದಲ್ಲಿ, ಗಾಂಧೀಜಿ ಬ್ರಿಟಿಷರ ಶೋಷಣೆ ವಿರೋಧಿಸಲು ಮತ್ತು ಜನರಲ್ಲಿ ಸ್ವದೇಶಾಭಿಮಾನ ತುಂಬಲು ಕೈಗಾರೀಕರಣವನ್ನು ವಿರೋಧಿಸಿದರು. ಆದರೆ, ನೆಹರೂರವರು ಪ್ರಪಂಚದಲ್ಲಿ ಉಂಟಾಗುತ್ತಿರುವ ಬದಲಾವಣೆಗಳಿಗನುಗುಣವಾಗಿ ಕೈಗಾರೀಕರಣ ಅವಶ್ಯವೆಂದು ಗ್ರಹಿಸಿದರು. ಆದ್ದರಿಂದ ಪರಿಸರವನ್ನು ರಕ್ಷಿಸುವುದು ಮತ್ತು ಆರ್ಥಿಕ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವುದು, ಯೋಜನೆಗಳನ್ನು ರೂಪಿಸುವವರ ಗುರಿಯಾಗಬೇಕು. ಗ್ರಾಮೀಣ ಭಾರತದಲ್ಲಿ ಅವಶ್ಯವಾದ ಸೌಲಭ್ಯಗಳು ಇಲ್ಲ. ಪಾಶ್ಚಾತ್ಯ ರಾಷ್ಟ್ರಗಳು ಹಿಂದುಳಿದಿರುವ ರಾಷ್ಟ್ರಗಳಿಗೆ ಭೂಮಿಯನ್ನು ರಕ್ಷಿಸುವಂತೆ ಬೋಧಿಸಲು ಪ್ರಯತ್ನಿಸುತ್ತಿವೆ, ಆದರೆ ಭೂಮಿಯನ್ನು ಶೋಷಿಸುವುದನ್ನು ನಿಲ್ಲಿಸಿಲ್ಲ, ಭಾರತ ಇಂದಿಗೂ ನೈಸರ್ಗಿಕ ಸಂಪತ್ತನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಲ್ಲ.

ಇಂದು ಪರಿಸರಕ್ಕೆ ಆದಷ್ಟೂ ಕಡಿಮೆ ಹಾನಿಯುಂಟಾಗುವಂತೆ ಅಭಿವೃದ್ಧಿ ಯೋಜನೆಗಳನ್ನು ರೂಪಿಸಬೇಕಾದ ಅಂಶವನ್ನು ಪರಿಗಣಿಸಬೇಕಾಗಿದೆ. ಗ್ರಾಮೀಣ ಜನರ ಜೀವನ ಬಡತನದಿಂದ ಶೋಚನೀಯವಾಗಿದ್ದರೆ, ನಾಗರಿಕ ವರ್ಗದವರ ಹಿತಾಸಕ್ತಿಗಳನ್ನು ಕಾಪಾಡಲು ಪ್ರಯತ್ನ ನಡೆಸಲಾಗುತ್ತಿದೆ. ಸಂಪರ್ಕ ಮಾಧ್ಯಮಗಳು, ನಾಗರಿಕ ಅಲ್ಪಸಂಖ್ಯಾತರು ಮಾತ್ರ ಬಳಸಬಹುದಾದ ಸುಖಭೋಗವಸ್ತುಗಳನ್ನು ಕುರಿತು ಪ್ರಚಾರ ನೀಡುತ್ತಿವೆ. ಇದರ ಬದಲಾಗಿ ದುಂದುವೆಚ್ಚ ಹಾಗೂ ಅಪವ್ಯಯವನ್ನು ಕಡಿಮೆ ಮಾಡಬೇಕೆಂಬುದನ್ನು ಪ್ರಚಾರ ಮಾಡಬೇಕು. ವಿದ್ಯುತ್ ಉತ್ಪಾದನೆಯನ್ನು ಸೂಕ್ತವಾದ ರೀತಿಯಲ್ಲಿ ಬಳಸಬೇಕು. ಜನರ ಹೊರನೋಟದಲ್ಲಿ ವಿರೋಧಾಭಾಸ ಎದ್ದು ಕಾಣುತ್ತಿದೆ. ಒಂದೆಡೆ ಜನರು ಶುದ್ಧವಾದ ವಾತಾವರಣವನ್ನು ಬಯಸುತ್ತಾರೆ, ಆದರೆ ಮತ್ತೊಂದೆಡೆ ಅಗ್ಗವಾದ ಇಂಧನದ ಕಾರುಗಳಲ್ಲಿ ತಿರುಗಾಡಲು ಬಯಸುತ್ತಾರೆ. ಅದೇ ರೀತಿ, ಕೃಷಿ ಕ್ಷೇತ್ರದಲ್ಲಿ ಕೀಟನಾಶಕ ಔಷಧಿಗಳ ಬಳಕೆ ಹಾನಿಕರವಾದುದು ಎಂದು ತಿಳಿದಿದ್ದರೂ, ತಾಜಾ ತರಕಾರಿ ಹಾಗೂ ಹಣ್ಣುಗಳ ಬೇಡಿಕೆಯನ್ನು ಪೂರೈಸಲು ಅವುಗಳ ಬಳಕೆ ಅನಿವಾರ್ಯವಾಗಿದೆ. ಅನಾವಶ್ಯಕವಾಗಿ ಹರಿದು ಹೋಗುತ್ತಿರುವ ನೀರನ್ನು ತಡೆಹಿಡಿಯುವುದು, ದೀಪಗಳನ್ನು ಆರಿಸುವುದು, ಮಿತವಾಗಿ ಟಿ.ವಿ.ಯನ್ನು ಬಳಸುವುದು, ಸುಖಭೋಗದ ವಸ್ತುಗಳಿಗೆ ಕೈಚಾಚದಿರುವುದು ಇತ್ಯಾದಿಗಳನ್ನು ಕುರಿತು ಸರಳವಾದ ರೀತಿಯಲ್ಲಾದರೂ ಶ್ರಮಿಸಬಾರದೆ?

ಶಕ್ತಿಯ ಪರ್ಯಾಯ ಮೂಲಗಳನ್ನು ಪತ್ತೆಹಚ್ಚಬೇಕಾದುದು ಅವಶ್ಯವಾಗಿದೆ. ಸೌರಶಕ್ತಿಯ ಬಳಕೆಯನ್ನು ಕುರಿತು ಸಂಶೋಧನೆ ನಡೆಸಿ, ಅದನ್ನು ಜನಪ್ರಿಯಗೊಳಿಸಬೇಕು. ವಾಹನಗಳಿಂದುಂಟಾಗುವ ಮಾಲಿನ್ಯವನ್ನು ತಡೆಹಿಡಿಯಲು ಪೆಟ್ರೋಲ್ ಅಥವಾ ಸೀಮೆಎಣ್ಣೆ ಮಿಶ್ರಿತ ಪೆಟ್ರೋಲ್‌ನ ಬಳಕೆಯ ಬದಲಾಗಿ

ಪ್ರೊಸೆಸ್‌ನ ಬಳಕೆಯನ್ನು ಹೆಚ್ಚಿಸಬೇಕು. ಅದೇ ರೀತಿ, ಕೃಷಿ ಉತ್ಪಾದನೆಗಳನ್ನೂ ದೇಶದ ಸಂಪತ್ತನ್ನು ಹೆಚ್ಚಿಸಲು ಬಳಸಬೇಕು. ಆದ್ದರಿಂದ ಪ್ರಕೃತಿಯನ್ನು ಕಲುಷಿತಗೊಳಿಸುವುದನ್ನು ತಡೆಹಿಡಿಯಲು ಜನರಲ್ಲಿ ಜಾಗೃತಿ ಮೂಡಿಸಬೇಕು. ಅದಕ್ಕೆ ಅನುಗುಣವಾಗಿ ಸರ್ಕಾರದ ಕಾಯಿದೆಗಳನ್ನು ರೂಪಿಸಬೇಕು. ಗ್ರಾಮೀಣ ಜನರಿಗೆ ಜೀವನದ ಅವಶ್ಯ ಸೌಲಭ್ಯಗಳನ್ನು ಒದಗಿಸುವುದರಿಂದ, ಆರೋಗ್ಯ ಮತ್ತು ಪರಿಸರವನ್ನು ಕುರಿತು ಪ್ರಜ್ಞೆ ಬೆಳೆಯುತ್ತದೆ. ಜನರ ಹೊರನೋಟವನ್ನು ಬದಲಾಯಿಸಲು ಶಿಕ್ಷಣವು ಅಗತ್ಯವಾದುದು. ಪ್ರಪಂಚದಲ್ಲಿ ಮುಂದುವರೆದಿರುವ ರಾಷ್ಟ್ರಗಳಲ್ಲಿ ಪರಿಸರ ರಕ್ಷಣೆಗೆ ಅನೇಕ ವಿಧಾನಗಳನ್ನು ರೂಪಿಸಲಾಗಿದೆ. ನವೀನ ತಂತ್ರವಿದ್ಯೆ ಬೆಳೆಸಲು, ಪ್ರಗತಿಯ ಪಥದಲ್ಲಿರುವ ರಾಷ್ಟ್ರಗಳಿಗೆ ಆರ್ಥಿಕ ನೆರವನ್ನು ನೀಡಲು ವಿಶ್ವಬ್ಯಾಂಕ್ ಮುಂದಾಗಿದೆ. ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ತಯಾರಿಸಲು ಸಣ್ಣ ಕಂಪನಿಗಳೊಂದಿಗೆ ಹೊಸ ಕಂಪನಿಗಳು ಸ್ಪರ್ಧಿಸುತ್ತಿವೆ. ಇದೇ ರೀತಿ ಶಬ್ದ ಮಾಲಿನ್ಯದಿಂದ ಅನೇಕ ವಿಧವಾದ ಮಾನಸಿಕ ಅಸಮತೋಲನಗಳು ಉಂಟಾಗಿರುವುದರಿಂದ ಅದನ್ನು ತಡೆಹಿಡಿಯಲು ಶ್ರಮಿಸಬೇಕಾಗಿದೆ. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಹಾಗೂ ಸ್ಥಳೀಯ ಸಂಘ ಸಂಸ್ಥೆಗಳು ಜನರ ಸಮಸ್ಯೆಗಳನ್ನು ನಿವಾರಿಸಲು ಕಾರ್ಯಕ್ರಮಗಳನ್ನು ಹಾಗೂ ಯೋಜನೆಗಳನ್ನು ರೂಪಿಸಲು ಶ್ರಮಿಸಬೇಕು.

ಪರಿಸರದಲ್ಲಿ ಅಸಮತೋಲನ ಉಂಟಾಗಬಹುದೆಂಬ ಭಯದಿಂದ ಭಾರತ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳದಿರಲು ಸಾಧ್ಯವಿಲ್ಲ. ಭಾರತೀಯರಲ್ಲದಿದ್ದರೆ, ನಮ್ಮ ದೇಶದಲ್ಲಿ ಅಗತ್ಯ ಸೌಲಭ್ಯಗಳನ್ನು ರೂಪಿಸಲು ವಿದೇಶೀಯರ ನೆರವನ್ನು ಪಡೆಯಬೇಕಾಗಬಹುದು. ಇದು ಹೆಚ್ಚು ಮಾರಕವಾಗಿ ಪರಿಣಮಿಸಬಹುದು ಏಕೆಂದರೆ ಇದರಿಂದ ನಮ್ಮ ದೇಶದ ನೈಸರ್ಗಿಕ ಸಂಪತ್ತನ್ನು ಶೋಷಿಸಲು ಪಾಶ್ಚಾತ್ಯ ರಾಷ್ಟ್ರಗಳಿಗೆ ನಾವೇ ಆಹ್ವಾನವಿತ್ತಂತಾಗುತ್ತದೆ. ಹೀಗಾಗಿ, ಇದರಿಂದ ಪರಕೀಯರ ಮತ್ತೊಂದು ರೀತಿಯ ದಾಳಿ ಉಂಟಾಗುವ ಆರ್ಥಿಕ ದಬ್ಬಾಳಿಕೆಯಿಂದಾಗಿ, ಅಂತ್ಯದಲ್ಲಿ ಭಾರತದ ರಾಜಕೀಯ ಸಾರ್ವಭೌಮತ್ವಕ್ಕೆ ಧಕ್ಕೆಯುಂಟಾಗಬಹುದು. ಭಾರತ ಮುಂದುವರೆದ ರಾಷ್ಟ್ರಗಳೊಂದಿಗೆ ಸ್ನೇಹವನ್ನು ಬೆಳೆಸಿಕೊಂಡು, ರಾಷ್ಟ್ರವನ್ನು ನಿರ್ಮಿಸುವ ಕಾರ್ಯದಲ್ಲಿ ತೊಡಗಬಹುದು. ಆದರೆ ಸರ್ಕಾರ 'ಆರ್ಥಿಕ ಪ್ರಗತಿ' ಹಾಗೂ 'ಪರಿಸರ ರಕ್ಷಣೆ' ಎರಡನ್ನೂ ಸಾಧಿಸಲು ಸುವರ್ಣ ಮಾಧ್ಯಮ ಪತ್ತೆಹಚ್ಚಲು ಸಾಧ್ಯವೆ? ಎಂಬುದೇ ಯಕ್ಷ ಪ್ರಶ್ನೆಯಾಗಿದೆ. ಈ ದಿಕ್ಕಿನಲ್ಲಿ ಇಂದಿನಿಂದಲೇ ಚಿಂತನ ಪ್ರಾರಂಭವಾದರೆ, ಯಾವ ಸಮಸ್ಯೆಗಾದರೂ ಉತ್ತರ ದೊರೆಯುವುದು ಕಷ್ಟವೇನಲ್ಲ.

ಬರ

ಲಕ್ಷ್ಮೀನಾರಾಯಣ
ರಾಘವೇಂದ್ರ ದೇವಸ್ಥಾನದ ಹತ್ತಿರ
ರೈಲ್ವೆ ಸ್ಟೇಷನ್ ರಸ್ತೆ
ಕೆ. ಆರ್. ಸಾಗರ–೫೭೧ ೬೦೭

ಆ ಹಳ್ಳಿಯ ಹೆಸರು ಕಾಶಿಪುರ. ಒಂದು ಸಣ್ಣ ಹಳ್ಳಿ. ಆ ಹಳ್ಳಿಯಲ್ಲೊಬ್ಬ ಸಣ್ಣ ಜಮೀನುದಾರ. ಆದರೆ ಅವನ ಒಕ್ಕಲುಗಳು ಯಾರೂ ಅವನ ಮುಂದೆ ತಲೆಯೆತ್ತಿ ನಿಲ್ಲುವಷ್ಟು ಧೈರ್ಯವಿರಲಿಲ್ಲ. ಅವನು ಅಷ್ಟೊಂದು ಕ್ರೂರಿ.

ಆ ದಿನ ಅವನ ಕಿರಿಯ ಮಗನ ಹುಟ್ಟಿದ ಹಬ್ಬ. ಪೂಜಾರಿ ತಾರಕರತ್ನ ಮಟಮಟ ಮಧ್ಯಾಹ್ನ ಜಮೀನುದಾರರ ಮನೆಯಲ್ಲಿ ಪೂಜೆ ಮುತ್ತು ಪ್ರಾರ್ಥನೆಗಳನ್ನು ಮುಗಿಸಿ ವಾಪಸ್ಸು ಮನೆಗೆ ಹಿಂತಿರುಗುತ್ತಿದ್ದರು. ಮೇ ತಿಂಗಳ ಕೊನೆಯ ದಿನಗಳಾದರೂ ಆಕಾಶದಲ್ಲಿ ಮೋಡದ ಒಂದು ತುಣುಕೂ ಸಹಾ ಪತ್ತೆ ಇಲ್ಲ. ಮಳೆ ಇಲ್ಲದೆ ಬೆಂಕಿ ಸುರಿಯುತ್ತಿತ್ತು.

ಆ ಹೊಲದ ತುದಿಯ ರಸ್ತೆಯ ಮಗ್ಗುಲಲ್ಲೇ ನೇಕಾರ ಗಫೂರನ ಗುಡಿಸಲಿತ್ತು. ಮಣ್ಣಿನಿಂದ ಕಟ್ಟಿದ್ದ ಆ ಗೋಡೆಗಳೆಲ್ಲ ಶಿಥಿಲವಾಗಿದ್ದವು, ಮನೆಯ ಅಂಗಳ ರಸ್ತೆಯ ಮಗ್ಗುಲಲ್ಲೇ ಇದ್ದುದರಿಂದ ಒಳಗಿದ್ದುದೆಲ್ಲಾ ಹಾದು ಹೋಗುವವರಿಗೆ ಸ್ಪಷ್ಟವಾಗಿ ಕಾಣುತ್ತಿತ್ತು.

'ಹೇ! ಗಫೂರ್! ಯಾರೂ ಒಳಗೆ?', ರಸ್ತೆ ಬದಿಯ ಮರದ ನೆರಳಲ್ಲಿ ನಿಂತು ತಾರಕರತ್ನ ಕೂಗಿದರು.

'ಏನಾಗಬೇಕಿತ್ತೂ? ಅಪ್ಪ ಜ್ವರ ಬಂದು ಮಲಗಿದ್ದಾನೆ.' ಬಾಗಿಲ ಹತ್ತಿರ ಬಂದು ಉತ್ತರಿಸಿದಳು ಗಫೂರನ ಹತ್ತು ವರ್ಷದ ಮಗಳು.

'ಜ್ವರ! ಕರೆ ಈಚೆಗೆ ಆ ಮುಠ್ಠಾಳನನ್ನು!

ಆ ಕೂಗಿಗೆ ಅಂಜಿದ ಗಫೂರ್ ಹೊರಗೆ ಬಂದು, ಜ್ವರದಿಂದ ನಡಗುತ್ತಾ ನಿಲ್ಲುತ್ತಾನೆ. ಕಳ್ಳಿಯಗಿಡಕ್ಕೆ ಕಟ್ಟಿದ್ದ ಅವನ ಎತ್ತು ಮೋಟು ಗೋಡೆಯ ಕಡೆಗೆ ಕಾಲು ಚಾಚಿತ್ತು. 'ಏನದು?' ಎತ್ತಿನ ಕಡೆ ಕೈ ತೋರಿಸುತ್ತಾ ಗದರಿಸಿದ, 'ಇದೇನು ಹಿಂದುಗಳ ಹಳ್ಳಿ, ಜಮೀನುದಾರ ಬ್ರಾಹ್ಮಣ ಎಂದು ತಿಳಿದಿದ್ದೀಯೋ ಇಲ್ಲವೋ?' ಅವರ ಮುಖ ಕೋಪ ಮತ್ತು ಬಿಸಿಲಿಗೆ ಕೆಂಪಗೆ ತಿರುಗಿತ್ತು. ಅವರ ಮಾತುಗಳು ಒರಟು ಮತ್ತು ಬಿಸಿಯಾಗಿದ್ದರೂ ಸಹಾ ಗಫೂರ್ ಆ ಮಾತಿನಲ್ಲಿದ್ದ ತೀಕ್ಷ್ಣತೆಯನ್ನು ಗ್ರಹಿಸುವಷ್ಟು ಶಕ್ತನಾಗಿರಲಿಲ್ಲ.

ಮೂಲ : ಶರತ್‌ಚಂದ್ರ ಚಟರ್ಜಿರವರ ಬಂಗಾಳಿ ಕಥೆ.

'ನೋಡು' ತಾರಕರತ್ನ ಹೇಳಿದರು 'ಬೆಳಗಿನಿಂದಲೂ ಈ ಉರಿಬಿಸಿಲಿನಲ್ಲಿ ಅದನ್ನು ಅಲ್ಲಿಯೇ ಕಟ್ಟಿ ಹಾಕಿದ್ದೀ, ಒಂದು ವೇಳೆ ಆ ಎತ್ತು ಸತ್ತರೆ ನಿನ್ನ ಧಣಿ ನಿನ್ನನ್ನು ಸಿಗಿದು ಹಾಕುತ್ತಾನೆ! ಅವನು ಸಾಮಾನ್ಯ ಬ್ರಾಹ್ಮಣನಲ್ಲ!'

'ನಾನೇನು ಮಾಡಲಿ ತಂದೆ! ನಾನು ನಿಸ್ಸಹಾಯಕ. ಕಳೆದ ಕೆಲವು ದಿನಗಳಿಂದ ನನಗೆ ನಿಲ್ಲದ ಜ್ವರ. ಅದನ್ನು ಹೊರಗೆ ಮೇಯಿಸಲು ನನ್ನಿಂದ ಆಗುತ್ತಿಲ್ಲ.'

'ಅದರ ಪಾಡಿಗೆ ಅದು ಮೇಯಲು ಬಿಡು?'

'ಎಲ್ಲಿಗೆ ಅಂತ ಬಿಡಲಿ ತಂದೆ? ಜನ, ಇನ್ನೂ ಭತ್ತ ಬಡಿದಿಲ್ಲ. ಕಣದಲ್ಲಿನ್ನೂ ಹಾಗೇ ಬಿದ್ದಿದೆ. ಹುಲ್ಲನ್ನೂ ಸಹಾ ಗುಡ್ಡೆ ಹಾಕಿಲ್ಲ. ಹೊರಗೆ ಹುಲ್ಲಿನ ಒಂದು ಗರಿಯೂ ಸಹಾ ಇಲ್ಲ. ಎಲ್ಲ ಬಿಸಿಲಿಗೆ ಉರಿದು ಬೂದಿಯಾಗಿದೆ. ಎಲ್ಲಿಗೆ ಎಂದು ಹೊರಗೆ ಬಿಡಲಿ, ತಂದೆ? ಬಿಟ್ಟರೆ ಯಾರ ಭತ್ತಕ್ಕಾದರೂ ಬಾಯಿ ಹಾಕಬಹುದು ಅಥವಾ ಹುಲ್ಲು ಮೇಯಬಹುದು.'

ತಾರಕರತ್ನ ಸ್ವಲ್ಪ ಮೆತ್ತಗಾದರು. 'ಆದರೆ ಕನಿಷ್ಟ ನೆರಳಿನಲ್ಲಾದರೂ ಕಟ್ಟಿ ತಿನ್ನಲು ಒಂದು ಹಿಡಿ ಹುಲ್ಲು ಹಾಕಬೇಕಿತ್ತು. ನಿನ್ನ ಮಗಳು ಅನ್ನ ಬೇಯಿಸಿಲ್ಲವೇನು? ಅದರ ಗಂಜಿಯನ್ನು ಏಕೆ ನೀಡಬಾರದಿತ್ತು? ಕುಡಿಯಲಿ ಸ್ವಲ್ಪ ಕೊಡು.'

ಗಫೂರ್ ಉತ್ತರಿಸಲಿಲ್ಲ. ನಿಸ್ಸಹಾಯಕನಾಗಿ ತಾರಕರತ್ನರ ಕಡೆಗೆ ನೋಡುತ್ತಾನೆ. ಒಂದು ನಿಟ್ಟುಸಿರು ಅವನಿಂದ ಹೊರಡುತ್ತದೆ.

'ಓಹೋ! ಅದೂ ಇಲ್ಲವೇನು? ನಿನಗೆ ಕೊಟ್ಟ ಹುಲ್ಲಿನ ಪಾಲನ್ನು ಏನು ಮಾಡಿದೆ? ಬಹುಶಃ ಹೊಟ್ಟೆ ತುಂಬಿಸಿಕೊಳ್ಳಲು ಅದನ್ನು ಮಾರಿರಬಹುದು? ಒಂದು ಹೊರೆ ಹುಲ್ಲನ್ನು ಬಿಡದೆ? ಎಷ್ಟೊಂದು ಕ್ರೂರಿ ನೀನು!'

ಇಷ್ಟು ಕ್ರೂರವಾದ ಮಾತಿಗೆ ಗಫೂರನ ಸ್ವರವೇ ಉಡುಗಿ ಹೋದಂತಾಯಿತು. "ಈ ವರ್ಷ ಹುಲ್ಲಿನ ಪಾಲು ಬಂತು." ಕ್ಷಣಕಾಲ ಮುಜುಗರದ ನಂತರ ಗಫೂರ್ ಮುಂದುವರೆಸಿದ "ಆದರೆ ಧಣಿಗಳು ಕಳೆದ ವರ್ಷದ ಬಡ್ಡಿಗೆ ಅದನ್ನೆಲ್ಲಾ ವಜಾಹಾಕಿಕೊಂಡರು. 'ಸ್ವಾಮಿ, ನೀವೇ ನನ್ನ ಪಾಲಿನ ದೇವರು, ಧಣಿ ಎಲ್ಲ, ನಿಮ್ಮ ಕಾಲಿಗೆ ಬೀಳುತ್ತೇನೆ. ಸ್ವಲ್ಪ ಹುಲ್ಲನ್ನು ಕೊಡಿ. ನನ್ನ ಗುಡಿಸಲನ್ನು ನೋಡಿ, ಅದರ ಮೇಲು ಹುಲ್ಲು ಇಲ್ಲ. ಒಂದು ಸಣ್ಣ ಗುಡಿಸಿಲಿನಲ್ಲಿ ನಾವಿಬ್ಬರೂ—ಅಪ್ಪ-ಮಗಳು—ವಾಸಿಸುತ್ತಿದ್ದೇವೆ. ತಾಳೆಗರಿಗಳನ್ನು ಗುಡಿಸಲ ಮೇಲೆ ಹಾಕಿ ಹೇಗೊ ಮಳೆಗಾಲ ಕಳೆದೆವು. ಆದರೆ ನಮ್ಮ ಮಹೇಶನ ಹೊಟ್ಟೆಗೆ ಏನು ಮಾಡುವುದು?" 'ಓ!' ಆ ಎತ್ತನ್ನು ಮಹೇಶ ಎಂದು ಕರೆಯುತ್ತಿದ್ದೀಯಾ! ಒಳ್ಳೇ ತಮಾಷೆ! ಆದರೆ ಅವರ ಅಪಹಾಸ್ಯ ಗಫೂರನಿಗೆ ಅರ್ಥವಾಗಲಿಲ್ಲ. "ಧಣಿಗಳು, ಯಾಕೋ ನನ್ನ ಮೇಲೆ ಕರುಣೆ ತೋರಿಸುತ್ತಿಲ್ಲ" ಹೇಳುತ್ತಾ ಹೋದ, ಕಳೆದ ಎರಡು ತಿಂಗಳಿಗಾಗುವಷ್ಟು ಮಾತ್ರ ಹುಲ್ಲನ್ನು ಕೊಟ್ಟರು. ಉಳಿದ ನನ್ನ ಪಾಲನ್ನು ತಮ್ಮ ರಾಶಿಗೆ ಸೇರಿಸಿಕೊಂಡರು—ಈಗ ಮಹೇಶನಿಗೆ ಒಂದು ಹಿಡಿ ಹುಲ್ಲೂ ಸಹಾ ಇಲ್ಲ."

ಹೌದು, ನೀನು ಅವರ ಹತ್ತಿರ ಸಾಲ ಮಾಡಿಲ್ಲವೇನು? "ಅಲುಗಾಡದೆ ತಾರಕರತ್ನ ಹೇಳಿದರು. ನೀನೇಕೆ ಅವರ ಸಾಲ ತೀರಿಸಲಿಲ್ಲ? ಜಮೀನುದಾರರು ಇನ್ನೂ ನಿನಗೆ ಸಹಾಯ ಮಾಡುತ್ತಲೇ ಇರಬೇಕೇನು?"

"ಆದರೆ ಕೊಡುವುದಕ್ಕೆ ನನ್ನ ಹತ್ತಿರ ಏನಿತ್ತು? ನಾಲ್ಕು ಕುಂಟೆ ಜಮೀನು ಉಳುತ್ತೇನೆ. ಆದರೆ ಕಳೆದ ಎರಡು ವರ್ಷದ ಬರಗಾಲದಿಂದ ನೀರಿಲ್ಲದೆ ಭತ್ತವೆಲ್ಲಾ ಒಣಗಿಹೋಯಿತು. ನನ್ನ ಮಗಳು ಮತ್ತು ನನಗೆ ತಿನ್ನುವುದಕ್ಕೂ ಸಹಾ ಸರಿಯಾಗಿಲ್ಲ. ನೋಡಿ ನನ್ನ ಗುಡಿಸಲನ್ನು! ಮಳೆ ಬಂದರೆ, ನಾನು ಮತ್ತು ನನ್ನ ಮಗಳು ಒಂದು ಮೂಲೆಯಲ್ಲಿ ಮುದುರಿಕೊಂಡಿರುತ್ತೇವೆ. ಕಾಲುಗಳನ್ನು ಸಹಾ ಚಾಚುವಂತಿಲ್ಲ. ಮಹೇಶನನ್ನು ನೋಡಿ! ಅದರ ಮೂಳೆಯನ್ನು ಎಣಿಸಬಹುದು. ಸ್ವಲ್ಪ ಹುಲ್ಲು ನೀಡಿ, ಒಂದೆರಡು ದಿನಗಳಾದರೂ ತಿನ್ನಲಿ!" ಹೀಗೆ ಹೇಳುತ್ತಾ ಗಫೂರ್ ಬ್ರಾಹ್ಮಣನ ಪಾದಗಳ ಮೇಲೆ ಕುಸಿಯುತ್ತಾನೆ.

'ಬೇಡ, ಬೇಡ! ದೂರ, ದೂರ ಸರಿ! ತಡವಾಗಿದೆ. ಮನೆಗೆ ಹೋಗಬೇಕು, ಬಿಡು!' ತಾರಕರತ್ನ ಹೊರಡಲನುವಾಗುತ್ತಾರೆ. "ಅಯ್ಯೋ ದೇವರೇ!, ಈ ಎತ್ತು ಕೊಂಬುಗಳಿಂದ ನನ್ನನ್ನು ತಿವಿಯಲು ಬರುವಂತಿದೆ?" ಭಯ ಹಾಗೂ ಕೋಪದಿಂದ ದೂರಕ್ಕೆ ಸರಿಯುತ್ತಾರೆ.

ಗಫೂರ್ ಅವರ ಪಾದಗಳನ್ನು ಹಿಡಿದು "ನಿಮ್ಮ ಕೈಯಲ್ಲಿ ಹಿಡಿದಿರುವ ಒಂದು ಹಿಡಿ ಹುಲ್ಲನ್ನು ಕೇಳುತ್ತಿದೆ." ಅವರ ಕೈಯಲ್ಲಿ ಹಿಡಿದಿದ್ದ ಹುಲ್ಲು ಮತ್ತು ಹಣ್ಣುಗಳನ್ನು ತೋರಿಸುತ್ತಾ ಹೇಳಿದ.

'ನಿಜವೇನು?' ಯಜಮಾನನಂತೆ ಪ್ರಾಣಿ! ತಿನ್ನುವುದಕ್ಕೆ ಹಿಡಿ ಹುಲ್ಲು, ಚೂರು ಹಣ್ಣು ಇಲ್ಲ. ಎಳೆದುಕೊಂಡು ಹೋಗಿ ಎಲ್ಲಾದರೂ ಕಟ್ಟಿಹಾಕು! ಅದರ ಕೊಂಬು ನೋಡು! ಯಾರನ್ನಾದರೂ ಇಂದು ಕೊಲ್ಲುತ್ತದೆ!' ಅದರ ಕೊಂಬಿನ ಚೂಪು ತೋರಿಸುತ್ತಾ ಪುರೋಹಿತರು ವೇಗವಾಗಿ ಹೋಗುತ್ತಾರೆ.

ದೂರದಲ್ಲಿ ಅವರು ಮರೆಯಾದ ಕೂಡಲೇ, ಗಫೂರ್ ಮೌನವಾಗಿ ಮಹೇಶನ ಹಸಿದ ಮತ್ತು ನೋವು ತುಂಬಿದ ಆಳವಾದ ಆದರ ಕಂದು ಬಣ್ಣದ ಕಣ್ಣುಗಳನ್ನು ದಿಟ್ಟಿಸುತ್ತಾನೆ. 'ಒಂದು ಹಿಡಿಯನ್ನೂ ಕೊಡಲಿಲ್ಲ.' ಆ ಎತ್ತಿನ ಕತ್ತು ಮತ್ತು ಬೆನ್ನನ್ನು ಸವರುತ್ತಾ ಮೆತ್ತಗೆ ಉಸುರುತ್ತಾನೆ. "ಮಹೇಶ ನೀನು ನನ್ನ ಮಗ! ಎಂಟು ವರುಷ ಸೇವೆ ಮಾಡಿದೆ. ಆದರೆ ನಿನಗೆ ನಾನು ಹೊಟ್ಟೆತುಂಬ ಹುಲ್ಲು ಕೊಡಲಿಲ್ಲ—ಆದರೂ ನಿನಗೆ ಗೊತ್ತು ನಾನು ನಿನ್ನನ್ನು ಎಷ್ಟೊಂದು ಪ್ರೀತಿಸುತ್ತೇನೆಂದು?" ಮಹೇಶ ಸಂತೋಷದಿಂದ ಕಣ್ಣುಗಳನ್ನು ಮುಚ್ಚಿ ಕತ್ತನ್ನು ನೀಡುತ್ತದೆ.

'ಹೇಳು' ಗಫೂರ್ ಕೇಳುತ್ತಾನೆ, 'ಈ ಬರಗಾಲದಲ್ಲಿ ನಿನ್ನನ್ನು ಹೇಗೆ ಜೀವಂತವಾಗಿಡಲಿ? ಒಂದು ವೇಳೆ ನಿನ್ನ ಪಾಡಿಗೆ ನಿನ್ನನ್ನು ಬಿಟ್ಟರೆ, ಬೇರೆಯವರ ಗದ್ದೆಯನ್ನೋ ಅಥವಾ ಬಾಳೆ ತೋಟವನ್ನೋ ತಿನ್ನಬಹುದು. ಏನು ಮಾಡಲಿ? ನಿನ್ನ ದೇಹದಲ್ಲಿ ರಕ್ತ ಮಾಂಸವೇ ಇಲ್ಲ—ಯಾರಿಗೂ ಬೇಡವಾಗಿದ್ದೀ. ಜನರೆಲ್ಲಾ ನಿನ್ನನ್ನು ಕಟುಕರಿಗೆ ಮಾರೆಂದು...' ಆ ಯೋಚನೆ

ಬಂದ ತಕ್ಷಣ ಅವನ ಕಣ್ಣಾಲಿಗಳು ತುಂಬು ತ್ತವೆ. ಹಿಂಗೈಯಿಂದ ಕಣ್ಣುಗಳನ್ನು ಒರೆಸಿ ಕೊಳ್ಳುತ್ತಾ, ಅತ್ತ ಇತ್ತ ತಿರುಗಿ ನೋಡಿ ತನ್ನ ಗುಡಿಸಲಿನ ಕೊಳೆತ ಹುಲ್ಲನ್ನು ಎಳೆದು 'ತಿನ್ನು ಬೇಗ, ಮಗುವೇ, ಇಲ್ಲವಾದರೇ....' ಮೆಲ್ಲಗೆ ಅದರ ಮುಂದಿಡುತ್ತಾ ಹೇಳು ತ್ತಾನೆ.

'ಅಪ್ಪಾ....'

'ಏನು?'

'ಊಟಕ್ಕೆ ಬಾ', ಬಾಗಿಲ ಕಡೆ ನೋಡುತ್ತಾ ಗಫೂರನ ಮಗಳು ಕರೆಯು ತ್ತಾಳೆ! 'ಮತ್ತೆ ಮತ್ತೆ ಏಕೆ ಗುಡಿಸಿಲಿ ನಿಂದ ಹುಲ್ಲು ಎಳೆದು ಮಹೇಶನಿಗೆ ಕೊಡು ತ್ತೀಯಾ?' ಹೆದರಿಕೆ ಮತ್ತು ನಾಚಿಕೆ ಯಿಂದ ಹೇಳುತ್ತಾನೆ. ಅದು ಹಳತಾದ ಹುಲ್ಲು-ಕೊಳೆತು ಹೋಗಿದ್ದು.

'ಅಪ್ಪಾ ನೀನು ಎಳೆಯುವುದನ್ನು ಕೇಳಿಸಿ ಕೊಂಡೆ.'

'ಇಲ್ಲಾ ಮಗಳೇ, ನಾನು ಎಳೆಯು ಲಿಲ್ಲ....!'

'ಆದರೇ, ಅಪ್ಪಾ ಗೋಡೆ ಆಗಲೇ ಬಿರುಕುಬಿಟ್ಟಿದೆ....'

ಗಫೂರ್ ಮೌನವಾದ. ಈ ಗುಡಿಸಲು ಬಿಟ್ಟರೆ ಅವನಿಗೆ ಬೇರೆಗತಿಯಿಲ್ಲ. ಬಹು ಎಚ್ಚರಿಕೆಯಿಂದ ಅದನ್ನು ನೋಡಿಕೊಳ್ಳ ದಿದ್ದರೆ ಅದು ಮತ್ತೊಂದು ಮಳೆಗಾಲ ಕಾಣುವುದಿಲ್ಲವೆಂದು ಅವನಿಗಿಂತ ಚೆನ್ನಾಗಿ ಬೇರೆಯಾರಿಗೆ ತಾನೇ ಗೊತ್ತಿದೆ? 'ಊಟ ಬಡಿಸಿ ಆಗಿದೆ! ಕೈ ತೊಳೆದುಕೊಂಡು ಬಾ, ಊಟಮಾಡು.' ಮಗಳು ಕೂಗು ತ್ತಾಳೆ 'ಮೊದಲು ಸ್ವಲ್ಪ ಗಂಜಿಕೊಡು, ಅದಕ್ಕೆ ಕುಡಿಸುತ್ತೇನೆ.

ಇಲ್ಲ ಅಪ್ಪಾ—ಅದು ಮಡಕೆಯಲ್ಲಿಯೇ ಇಂಗಿ ಹೋಯಿತು.

ಒಂದು ವಾರ ಕಳೆದಿದೆ. ಖಾಯಿಲೆ ಹಾಗೂ ಉದ್ವೇಗದಿಂದ ಗಫೂರ್ ಅಂಗಳ ದಲ್ಲಿ ಕುಳಿತಿದ್ದಾನೆ. ಮಹೇಶ ಮೊನ್ನೆ ಯಿಂದ ಮನೆಗೆ ಹಿಂತಿರುಗಿಲ್ಲ.

ಗಫೂರ್ ನಿಸ್ಸಹಾಯಕನಾಗಿ ಕುಳಿತಿ ದ್ದಾನೆ. ಅಮೀನ ಎಲ್ಲಕಡೆಯೂ ಎತ್ತಿಗಾಗಿ ಹುಡುಕಾಡುತ್ತಿದ್ದಾಳೆ. ಅವಳು ಮನೆಗೆ ಬಂದಾಗ ಆಗಲೇ ಸಂಜೆಯ ಕತ್ತಲು ಹರಡುತ್ತಿತ್ತು. 'ಅಪ್ಪಾ, ಕೇಳಿದೆಯಾ? ಮಾಣಿಕ್ ಘೋಷ್ ಮಹೇಶನನ್ನು ದೊಡ್ಡಿಗೆ ಹೊಡೆದಿದ್ದಾನಂತೆ.'

'ಸುಳ್ಳು!'

'ಹೂಂ, ಅಪ್ಪಾ, ನಿಜ! ಅವನ ಆಳು ನನಗೆ ಹೇಳಿದ,' ನಿಮ್ಮಪ್ಪನಿಗೆ ಹೇಳು ನಿನ್ನ ಎತ್ತನ್ನು ದರಿಯಾಪುರ್‌ನಲ್ಲಿ ಹೋಗಿ ನೋಡಬೇಕೆಂದು!

'ಅದೇನು ಮಾಡಿತು?'

ಅದು ಅವನ ತೋಟಕ್ಕೆ ನುಗ್ಗಿತಂತೆ, ಅಪ್ಪಾ!

ಗಫೂರ್ ಮಾತಾಡಲಿಲ್ಲ

'ಅವನು ಹೇಳಿದ, ಮೂರು ದಿನವಾದ ಮೇಲೆ, ಪೋಲಿಸರು ಅದನ್ನು ದನಗಳ ಮಾರುಕಟ್ಟೆಗೆ ಮಾರುತ್ತಾರಂತೆ.'

'ಮಾರಲಿಬಿಡು' ಗಫೂರ್ ಉತ್ತರಿಸಿದ.

ಅಮೀನಳಿಗೆ ದನಗಳ ಮಾರುಕಟ್ಟೆ ಎಂದರೇನೆಂದು ಗೊತ್ತಿರಲಿಲ್ಲ. ಆ ಪದ ಕೇಳಿದ ನಂತರ ಅವಳ ಅಪ್ಪ ಪದೇ ಪದೇ ಉದ್ವೇಗಗೊಳ್ಳುತ್ತಿದ್ದುದನ್ನು ಗಮನಿಸಿ ದ್ದಳು. ಆದರೆ ಈ ದಿನ ಅವನು ಒಂದು ಮಾತೂ ಆಡದೇ ಹೊರಗೆ ಹೊರಟು ಹೋದ.

ಕತ್ತಲು ಕವಿಯುತ್ತಿದ್ದಂತೆಯೇ ಗಫೂರ್ ಗುಟ್ಟಾಗಿ ಬನ್ಸಿಯ ಅಂಗಡಿಗೆ ಬಂದ. 'ಅಂಕಲ್, ಒಂದು ರೂಪಾಯಿ ಸಾಲ ಕೊಡಿ.' ಸೀಟಿನ ಕೆಳಗೆ ಒಂದು ಕಂಚಿನ ತಟ್ಟೆಯನ್ನಿಡುತ್ತಾ ಹೇಳಿದ, ಬನ್ಸಿಗೆ ಈ ವಸ್ತು ಬಹಳ ಚಿರಪರಿಚಿತವಾಗಿತ್ತು. ಕಳೆದ ಎರಡು ವರ್ಷಗಳಿಂದ ಕನಿಷ್ಠ ಐದುಬಾರಿಯಾದರೂ ಒಂದು ರೂಪಾಯಿಗಾಗಿ ಗಿರವಿ ಇಟ್ಟಿದ್ದ. ಈ ದಿನ ಅವನು ಒಂದು ಮಾತೂ ಆಡದೇ ಕೊಟ್ಟ.

ಮಾರನೇ ದಿನ ಮಹೇಶ ತನ್ನ ಜಾಗದಲ್ಲಿತ್ತು. ಒಬ್ಬ ಮುದಿ ಸಾಬಿ ಬಹಳ ಎಚ್ಚರಿಕೆಯಿಂದ ಮಹೇಶನನ್ನು ಪರೀಕ್ಷಿಸುತ್ತಿದ್ದ. ಗಫೂರ್ ಸ್ವಲ್ಪ ದೂರದಲ್ಲಿ ನೆಲದ ಮೇಲೆ ಕುಳಿತಿದ್ದ. ಎಲ್ಲಾ ಪರೀಕ್ಷಿಸಿದ ಮೇಲೆ ಆ ಮುದುಕ ತನ್ನ ಶಾಲಿನ ತುದಿಯಲ್ಲಿ ಗಂಟುಹಾಕಿದ್ದ ಹತ್ತು ರೂಪಾಯಿ ನೋಟನ್ನು ಬಿಚ್ಚಿ ಸುಕ್ಕುಗಳನ್ನು ಸವರುತ್ತಾ ಹೇಳಿದ, 'ತಗೋ, ಪೂರ್ತಿ ಹಣ ಕೊಡುತ್ತಿದ್ದೇನೆ.'

ಮೌನವಾಗಿ ಗಫೂರ್ ಕೈಚಾಚಿ ಹಣ ಸ್ವೀಕರಿಸಿದ. ಆ ಮುದುಕನ ಜತೆಯಲ್ಲಿ ಬಂದಿದ್ದ ಇಬ್ಬರು ಇನ್ನೇನು ಆ ಪ್ರಾಣಿಯ ಹಗ್ಗವನ್ನೂ ಬಿಚ್ಚುವುದರಲ್ಲಿದ್ದರು. ತಕ್ಷಣ ಅವನು ಎದ್ದು ನಿಂತು. 'ಎಚ್ಚರಿಕೆ, ಮುಟ್ಟಬೇಡಿ ಹಗ್ಗ!' ಕರ್ಕಶವಾಗಿ ಗಫೂರ್ ಕಿರುಚುತ್ತಾನೆ. ಅವರು ಕೈ ಹಿಂತೆಗೆದುಕೊಂಡರು. 'ಏಕೆ?' ಮುದುಕ ಆಶ್ಚರ್ಯದಿಂದ ಕೇಳಿದ.

'ಏಕೆಗೀಕೆ ಇಲ್ಲ. ಅದು ನನ್ನ ಸ್ವತ್ತು, ನನ್ನ ಇಷ್ಟ. ನಾನು ಮಾರುವುದಿಲ್ಲ!' ಅದೇ ಸ್ವರದಲ್ಲಿ ಉತ್ತರಿಸುತ್ತಾ ನೋಟನ್ನು ದೂರ ಎಸೆದ.

'ಆದರೆ ನೆನ್ನೆ ಅಡ್ವಾನ್ಸ್ ತೆಗೆದುಕೊಂಡಿದ್ದೆ!' ಮೂರು ಜನರೂ ಒಟ್ಟಿಗೆ ಕೇಳಿದರು. 'ತೆಗೆದುಕೊಳ್ಳಿ' ೨ ರೂಪಾಯಿ ನೋಟನ್ನು ಎಸೆಯುತ್ತಾ ಹೇಳಿದ.

ಅಕ್ಕ ಪಕ್ಕದ ಮನೆಯವರ ಹತ್ತಿರ ಗಂಜಿಯನ್ನು ಬೇಡಿ ಮಹೇಶನಿಗೆ ಕುಡಿಸಿ, ಅದರ ಕತ್ತು ತಲೆ ಕೊಂಬನ್ನು ಸವರುತ್ತಾ ಪ್ರೀತಿಯಿಂದ ಮೆಲ್ಲನೆ ಅದರ ಜತೆಗೆ ಮಾತಾಡಿದ.

ಅದು ಜೂನ್ ತಿಂಗಳ ಮಧ್ಯಭಾಗದ ದಿನಗಳು. ಭಾರತದ ಬೇಸಿಗೆಯ ಆಕಾಶವನ್ನು ಯಾರು ನೋಡಿಲ್ಲವೋ ಅವರು ಅದರ ಪ್ರಖರವಾದ ಬಿಸಿ, ದಗೆಯನ್ನು ಅನುಭವಿಸಬೇಕು. ಕರುಣೆಯ ಲವಲೇಶ ಎಲ್ಲೂ ಇಲ್ಲ! ಆದರೆ ಈ ದಿನವಂತೂ ಮುಂದೊಂದು ದಿನ ಆಕಾಶದಲ್ಲಿ ತಣ್ಣಗೆ, ಹೆಪ್ಪುಗಟ್ಟಿದ ಮೋಡಗಳು ಮೂಡುತ್ತವೆ ಎಂಬ ಭಾವನೆಯನ್ನು ಕಿತ್ತುಹಾಕುವಂತಿತ್ತು. ಅದರ ಬಿಸಿ ಹೇಗಿತ್ತೆಂದರೆ ಉರಿಯುತ್ತಿರುವ ಕೊನೆಯಿಲ್ಲದ ಆಕಾಶ ಅದರ ಅಂತ್ಯದವರೆಗೂ ಉರಿದುರಿದು ಮುಗಿಯುವಂತಿತ್ತು.

ಮಧ್ಯಾಹ್ನದಷ್ಟು ಹೊತ್ತಿಗೆ ಗಫೂರ್ ಗುಡಿಸಿಲಿಗೆ ಹಿಂತಿರುಗಿದ. ಆ ದಿನ ಯಾರೂ ಅವನನ್ನು ಕೂಲಿಗೆ ಕರೆದಿರಲಿಲ್ಲ. ಕೇವಲ ಐದಾರು ದಿನಗಳ ಹಿಂದಷ್ಟೇ ಅವನ ಜ್ವರ ಬಿಟ್ಟಿತ್ತು. ಅವನ ದೇಹ ಇನ್ನೂ ನಿಷ್ಪ್ರಾಣವಾಗಿತ್ತು.

ಕೆಲಸ ಹುಡುಕಿಕೊಂಡು ಹೊರಗೆ ಹೋಗಿದ್ದ. ಆದರೆ ಎಲ್ಲೂ ಸಿಗಲಿಲ್ಲ. ಹಸಿವು, ಬಾಯಾರಿಕೆ, ದಣಿವು ಅವನ ಕಣ್ಣು ಕತ್ತಲಾಗಿಸಿತ್ತು. ಅಂಗಳದಿಂದಲೇ ಕೂಗಿ ಕರೆದ.

'ಅಡಿಗೆ ಆಗಿದೆಯಾ ?'

ಮತ್ತೆ ಕೇಳಿದ 'ಅಡಿಗೆ ಆಗಿದೆಯಾ ?' ಉತ್ತರ ಬರಲೇ ಇಲ್ಲ.

'ಮಾಡಿಲ್ಲವೇನು ? ಏಕೆ ?'

'ಅಕ್ಕಿ ಇರಲಿಲ್ಲ, ಅಪ್ಪಾ !'

'ಅಕ್ಕಿ ಇರಲಿಲ್ಲ ? ಬೆಳಗ್ಗೆಯೇ ಏಕೆ ಹೇಳಲಿಲ್ಲ ?'

'ನಿನ್ನೆ ರಾತ್ರಿಯೇ ಹೇಳಿದ್ದೆನಲ್ಲಾ.'

'ನಿನ್ನೆ ರಾತ್ರಿಯೇ ಹೇಳಿದ್ದೆನಲ್ಲಾ' ಅಣಕಿಸಿದ ಗಫೂರ್. "ನಿನ್ನೆ ರಾತ್ರಿ ಹೇಳಿದ್ದನ್ನು ಹೇಗೆ ನೆನಪಿಸಿಕೊಳ್ಳಲಿ ?" ಅವನ ಧ್ವನಿ ಹೆಚ್ಚು ಹೆಚ್ಚು ಏರುತ್ತಾ ಹೋಯಿತು.

"ಅಕ್ಕಿ ಇಲ್ಲ, ಹೋಗಲಿ ಬಿಡು ?" ಮುಖ ಕಿವುಚಿಕೊಂಡು ಗೊಣಗಿದ. 'ನಿಮ್ಮಪ್ಪ ತಿಂದರೆಷ್ಟು ಬಿಟ್ಟರೆಷ್ಟು, ನಿನಗೇನಾಗಬೇಕು? ನೀನು ಮಾತ್ರ ಮೂರು ಸಾರಿ ಉಂಡರೆ ಸಾಕು ! ಇನ್ನು ಮೇಲೆ ಅಕ್ಕಿಗೆ ಬೀಗ ಹಾಕಿ ಆಚೆಗೆ ಹೋಗಬೇಕು." ಕುಡಿಯಲು ಸ್ವಲ್ಪ ನೀರು ಕೊಡು—ಬಳಲಿ ಸಾಯುತ್ತಿದ್ದೇನೆ ....ನೀರು ಸಹಾ ಇಲ್ಲವೇನೊ !' ಅಮೀನ ತಲೆ ಬಗ್ಗಿಸಿ ಹಾಗೆಯೇ ನಿಂತಿದ್ದಳು. ಮನೆಯಲ್ಲಿ ಒಂದು ತೊಟ್ಟು ನೀರಿಲ್ಲವೆಂದು ತಿಳಿದು ಅವನ ತಾಳ್ಮೆ ಕೆಟ್ಟಿತು. ರಭಸವಾಗಿ ಮುಂದೆ ನುಗ್ಗಿ ಅವಳ ಮುಖದ ಮೇಲೆ ಜೋರಾಗಿ ಹೊಡೆದ. 'ದರಿದ್ರ ! ಇಡೀ ದಿನ ಏನು ಮಾಡುತ್ತೀಯಾ ? ಬೇಕಾದಷ್ಟು ಜನ ಸಾಯುತ್ತಾರೆ—ಆದರೆ ನಿನಗೇಕೆ ಸಾವು ಬರುವುದಿಲ್ಲ ?'

ಆ ಹುಡುಗಿ ತುಟಿ ಬಿಚ್ಚಲಿಲ್ಲ. ಖಾಲಿ ಮಣ್ಣಿನ ಕೊಡ ತೆಗೆದುಕೊಂಡು ಮಧ್ಯಾಹ್ನದ ಉರಿಬಿಸಿಲಿನಲ್ಲಿ ಮೌನವಾಗಿ ಕಣ್ಣೀರನ್ನು ಒರೆಸುತ್ತಾ ಸಾಗಿದಳು.

ಕಣ್ಣಾಚೆಯಿಂದ ಅವಳು ದೂರ ಸರಿದ ನಂತರ, ಅವಳ ತಂದೆ ಪಶ್ಚಾತ್ತಾಪ ಪಡತೊಡಗಿದ. ತಾಯಿಯಿಲ್ಲದ ತಬ್ಬಲಿ ಹುಡುಗಿಯನ್ನು ಹೇಗೆ ಸಾಕಿದನೆಂದು ಅವನೊಬ್ಬನಿಗೇ ಗೊತ್ತು. ಆ ಮುಗ್ಧ ಮಗಳದು ತಪ್ಪಿಲ್ಲವೆಂದು ಸಹಾ ಅವನಿಗೆ ಗೊತ್ತು. ಮನೆಯಲ್ಲಿ ಅಕ್ಕಿ ತೀರಿದ ದಿನದಿಂದ ಹೊಟ್ಟೆ ತುಂಬ ಊಟವೇ ಅವರಿಗಿರಲಿಲ್ಲ. ದಿನಕ್ಕೆ ಮೂರು ಸಾರಿ ಉಣ್ಣುವುದಕ್ಕೆ ಸಾಧ್ಯವೇ ಇರಲಿಲ್ಲ. ಮನೆಯಲ್ಲಿ ನೀರು ಬಾಕಿರಲಿಲ್ಲವೆಂಬುದಕ್ಕೆ ಕಾರಣವೂ ಅವನಿಗೆ ಗೊತ್ತಿರದೇ ಇರಲಿಲ್ಲ. ಊರಿನಲ್ಲಿದ್ದ ಎರಡು ಮೂರು ಕೆರೆಗಳು ಬತ್ತಿಹೋಗಿದ್ದವು. ಶಿವುಬಾಬುವಿನ ಸ್ವಂತ ಕೆರೆಯಲ್ಲಿ ಮಾತ್ರ ಸ್ವಲ್ಪ ನೀರಿತ್ತು. ಆದರೆ ಅದು ಸಾರ್ವಜನಿಕರಿಗಲ್ಲ. ಕೆರೆಗಳಲ್ಲಿ ಸ್ವಲ್ಪ ಆಳವಾಗಿ ಗುಂಡಿಯನ್ನು ತೋಡಲಾಗಿತ್ತು. ಆದರೆ ಅಲ್ಲಿ ಹೆಚ್ಚು ಗದ್ದಲವಿದ್ದುದರಿಂದ ಆ ಪುಟ್ಟ ಹುಡುಗಿಯನ್ನು ಯಾರೂ 'ಕ್ಯಾರೇ' ಎಂದಿರಲಿಲ್ಲ. ಅವಳು ಗಂಟೆಗಟ್ಟಲೆ ನಿಂತು ಬೇಡಿ ಯಾರಾದರೂ ಕರುಣೆ ತೋರಿ ಸ್ವಲ್ಪ ನೀರು ನೀಡಿದರೆ ಅದನ್ನು ತೆಗೆದುಕೊಂಡು ಹಿಂತಿರುಗುತ್ತಿದ್ದಳು. ಇದೆಲ್ಲವೂ ಸಹಾ ಅವನಿಗೆ ಗೊತ್ತಿತ್ತು. ಆ ದಿನ ಬಹುಶಃ ಅಲ್ಲಿ ನೀರಿರಲಿಲ್ಲ ಅಥವಾ ಅವಳಿಗೆ ಯಾರೂ ಕರುಣೆ ತೋರಿಸದಿರಬಹುದೆಂದು ಯೋಚಿಸುತ್ತಾನೆ. ಅವನ ಕಣ್ಣಾಲಿಗಳು ನೀರಿನಿಂದ ತುಂಬುತ್ತವೆ.

'ಗಫೂರ್ ! ಒಳಗಿದ್ದೀಯಾ ?' ಅಂಗಳದಿಂದ ಯಾರೋ ಕೂಗಿದರು. ಅವನು ಜಮೀನ್ದಾರರ ಆಳು. 'ಹೌದು, ಇದ್ದೇನೆ. ಏಕೆ ? ಬೇಸರದಿಂದ ಉತ್ತರಿಸಿದ.

ಧಣಿಗಳು ನಿನ್ನನ್ನು 'ಕರೆದುಕೊಂಡು ಬರಲು ಹೇಳಿದ್ದಾರೆ, ಬಾ.'

ಅವನ ಬೇಸರದ ಉತ್ತರ ಆ ಆಳನ್ನು ಕೆರಳಿಸಿತ್ತು. ಮತ್ತೆ ಹೇಳಿದ "ಧಣಿ ನಿನ್ನನ್ನು ಒದ್ದು ಎಳೆದುಕೊಂಡು ಬರಲು ಹೇಳಿದ್ದಾರೆ." ಕೆಟ್ಟ ಮಾತುಗಳಿಂದ ಬೈಯುತ್ತಾ ಹೇಳಿದ.

ಗಫೂರ್, ಎರಡನೇ ಬಾರಿಗೆ ತಾಳ್ಮೆಗೆಟ್ಟ. 'ನಾವು ಯಾರ ಜೀತದಾಳುಗಳಲ್ಲ. ನಾನು ಇಲ್ಲಿರುವುದಕ್ಕೆ ಬಾಡಿಗೆ ಬಿಸಾಕುತ್ತಿದ್ದೇನೆ. ನಾನು ಬರುವುದಿಲ್ಲ.' ಅಷ್ಟೇ ಕಟುವಾಗಿ ಉತ್ತರಿಸಿದ.

ಆದರೆ ಆ ಪ್ರಪಂಚದಲ್ಲಿ ಚಿಕ್ಕವರು ದೊಡ್ಡವರಿಗೆದುರಾಗಿ ಸತ್ಯವನ್ನು ಹೇಳುವಂತಿಲ್ಲ. ಅದು ಬಹಳ ಅಪಾಯಕಾರಿ. ಅದೃಷ್ಟವಶಾತ್ ಆ ಸಣ್ಣ ಸ್ವರ ದೊಡ್ಡ ಕಿವಿಗಳಿಗೆ ತಲುಪಲಿಲ್ಲ, ತಲುಪಿದ್ದರೆ ಏನಾಗುತ್ತಿತ್ತೋ ಯಾರಿಗೆ ಗೊತ್ತು?

ಜಮೀನುದಾರರ ಬಳಿಯಿಂದ ತನ್ನ ಮನೆಗೆ ಹಿಂತಿರುಗಿದ ಗಫೂರ್ ಮೌನವಾಗಿ ನೆಲದ ಮೇಲೆ ಮಲಗಿದ. ಅವನ ಮುಖ ಹಾಗೂ ಕಣ್ಣುಗಳು ಊದಿದ್ದವು. ಅವನ ನೋವಿಗೆ ಮೂಲ ಕಾರಣ ಮಹೇಶ. ಆ ದಿನ ಬೆಳಗ್ಗೆ ಗಫೂರ್ ಮನೆಯಿಂದ ಆಚೆಗೆ ಹೊರಟನಂತರ, ಮಹೇಶ ಗೂಟದಿಂದ ಬಿಚ್ಚಿಕೊಂಡು ಜಮೀನುದಾರರ ತೋಟಕ್ಕೆ ನುಗ್ಗಿ ಹೂವುಗಳನ್ನೆಲ್ಲಾ ತಿಂದು, ಒಣಗಿ ಹಾಕಿದ್ದ ಕಾಳುಗಳನ್ನೆಲ್ಲಾ ಚೆಲ್ಲಾಪಿಲ್ಲಿಗೊಳಿಸಿತು. ಅದನ್ನು ಹಿಡಿಯುವುದಕ್ಕೆ ಪ್ರಯತ್ನಿಸಿದಾಗ ಜಮೀನುದಾರರ ಕಿರಿಯ ಮಗಳಿಗೆ ತಿವಿದು ತಪ್ಪಿಸಿಕೊಂಡಿತು. ಇಂಥಹದು ಇದೇ ಮೊದಲಿನದೇನಲ್ಲ. ಗಫೂರ್ ಬಡವನೆಂದು ಕ್ಷಮಿಸಲಾಗುತ್ತಿತ್ತು. ಆದರೆ ಅವನು ನಾನು ಯಾರ ಜೀತದಾಳಲ್ಲ ಬಾಡಿಗೆ ಬಿಸಾಕುತ್ತಿದ್ದೇನೆ ಎಂದು ಹೇಳದೆ ಸುಮ್ಮನೆ ಬಂದು ಗೋಗರೆದಿದ್ದರೆ ಕ್ಷಮಿಸಲಾಗುತ್ತಿತ್ತೇನೋ. ಜಮೀನುದಾರ ಶಿವುಬಾಬು ಮೊದಲೇ ಕ್ರೂರಿ, ಜತೆಗೆ ಈ ಮಾತುಗಳು ಅವನನ್ನು ಇನ್ನಷ್ಟು ಕ್ರೂರಗೊಳಿಸಿದವು. ಗಫೂರ್ ಅಲುಗಾಡದೆ, ಸುಮ್ಮನೆ ಮೌನವಾಗಿ ಹೊಡೆಯಿಸಿಕೊಂಡ. ಮನೆಯಲ್ಲಿಯೂ ನಿಶ್ಶಬ್ಧವಾಗಿ ನೋವು ನುಂಗಿಕೊಂಡು ಒಂದು ಮೂಲೆಯಲ್ಲಿ ಬಿದ್ದುಕೊಂಡ. ಹಸಿವು, ಬಾಯಾರಿಕೆಯನ್ನು ಅವನು ಮರೆತ. ಆದರೆ ಅವನ ಹೃದಯ ಹೊರಗೆ ಉರಿಯುತ್ತಿರುವ ಸೂರ್ಯನಂತೆ ಧಗಧಗನೆ ಉರಿಯುತ್ತಿತ್ತು. ಎಷ್ಟು ಹೊತ್ತು ಕಳೆಯಿತೋ ಅವನಿಗೆ ಅರಿವಾಗಲಿಲ್ಲ.

ಅವನ ಮಗಳು ಎಡವಿದ ಸದ್ದಿಗೆ ಅವನು ತಕ್ಷಣ ಬೆಚ್ಚಿಬಿದ್ದ. ಅಮೀನ ನೆಲದ ಮೇಲೆ ಜಾರಿ ಬಿದ್ದಳು ತಕ್ಷಣ ಅವಳು ಹೊತ್ತು ತಂದಿದ್ದ ಬಿಂದಿಗೆಯೂ ಸಹಾ ಜಾರಿತು, ನೆಲದ ಮೇಲೆ ಚೆಲ್ಲಿದ ನೀರನ್ನೆಲ್ಲಾ ಮಹೇಶ ಹೀರಿತು. ಗಫೂರ್ ಆಗ ಪೂರ್ತಿ ತಾಳ್ಮೆಗೆಟ್ಟಿದ್ದ. ಒಂದು ಕ್ಷಣವೂ ತಡಮಾಡದೆ, ಹಿಂದಿನ ದಿನ ರಿಪೇರಿಗೆಂದು ತೆಗೆದಿಟ್ಟಿದ್ದ ನೇಗಿಲನ್ನು ಎರಡು ಕೈಗಳಿಂದ ಎತ್ತಿ ಬಲವಾಗಿ ಮಹೇಶನ ತಲೆಗೆ ಹೊಡೆದ. ಮಹೇಶ ತಲೆಯೆತ್ತಲು ಪ್ರಯತ್ನಿಸಿತು. ಆದರೆ ಹಸಿವಿನಿಂದ ನಿತ್ರಾಣಗೊಂಡ ಅದರ ದೇಹ ನೆಲಕ್ಕೊರಗಿತು. ಅದರ ಕಿವಿಗಳಿಂದ ಕೆಲವು ರಕ್ತದ ಹನಿಗಳು ತೊಟ್ಟಿಕ್ಕಿದವು, ಒಂದೆರಡು ಸಲ ಅದರ ದೇಹ ಒದರಾಡಿ ನಂತರ

ಹಿಂಗಾಲು ಮತ್ತು ಮುಂಗಾಲುಗಳನ್ನು ಚಾಚಿತು. ಮಹೇಶ ಸತ್ತುಹೋಯಿತು.

'ಏನುಮಾಡಿದೆ ಅಪ್ಪಾ? ನಮ್ಮ ಮಹೇಶ ಸತ್ತು ಹೋಯಿತು!' ಅಮಿನಾ ಅಳುವುದಕ್ಕೆ ಶುರುಮಾಡಿದಳು.

ಗಫೂರ್ ಉತ್ತರಿಸಲೂ ಇಲ್ಲ, ಅಲುಗಾಡಲೂ ಇಲ್ಲ. ಮತ್ತೆ ಮತ್ತೆ ನಿಶ್ಚಲವಾದ ಕಪ್ಪು ಕಣ್ಣನ್ನು ಮಿಟುಕಿಸದೆ ದಿಟ್ಟಿಸಿ ನೋಡುತ್ತಾನಿಂತ.

ಎರಡು ಗಂಟೆಯೊಳಗೆ ಊರಾಚೆಗಿರುವ ಮೋಚಿಗಳು ಗುಂಪು ಗುಂಪಾಗಿ ಬಂದು ಸತ್ತ ಮಹೇಶನನ್ನು ಬೊಂಬುಗಳಿಂದ ಸಾಗಿಸಿದರು. ಅವರು ಥಳಗುಟ್ಟುವ ಕತ್ತಿಗಳನ್ನು ತಮ್ಮ ಕೈಗಳಿಂದ ಝಳಪಿಸುವುದನ್ನು ನೋಡಲಾರದೆ ಗಫೂರ್ ಮೌನವಾಗಿ ಕಣ್ಣುಮುಚ್ಚಿದ.

ಗೋಹತ್ಯೆಯಂಥಹ ಮಹಾಪಾಪ ಮಾಡಿದುದಕ್ಕೆ ಗಫೂರ್‌ನಿಗೆ ಯಾವ ರೀತಿ ಪ್ರಾಯಶ್ಚಿತ್ತ ಮಾಡಬೇಕೆಂಬುದನ್ನು ತಿಳಿಯಲು ಜಮೀನ್ದಾರರು ತಾರಕರತ್ನರಿಗೆ ಹೇಳಿ ಕಳುಹಿಸಿದ್ದಾರೆಂದು ಅಕ್ಕಪಕ್ಕದವರು ಅವನಿಗೆ ಹೇಳಿದರು.

ಗಫೂರ್ ಉತ್ತರಿಸುವ ಗೋಜಿಗೆ ಹೋಗದೆ ಮಂಡಿಗೆ ಗಲ್ಲ ಊರಿ ಕುಳಿತಿದ್ದ. 'ಮಗೂ, ಅಮಿನಾ, ಬಾ ಹೊರಡೋಣ', ಅರ್ಧ ರಾತ್ರಿಯಲ್ಲಿ ಗಫೂರ್ ಮಗಳನ್ನು ಎಬ್ಬಿಸುತ್ತಾ ಹೇಳಿದ. ಅವಳು ನಿದ್ದೆಹೋಗಿದ್ದಳು. 'ಎಲ್ಲಿಗಪ್ಪಾ? ಕಣ್ಣುಗಳನ್ನು ಉಜ್ಜುತ್ತಾ ಕೇಳಿದಳು.

'ಫಲ್‌ಬರ್‌ನ ಸೆಣಬಿನ ಗಿರಣಿಯಲ್ಲಿ ಕೆಲಸಮಾಡಲು', ಹೇಳಿದ ಗಫೂರ್.

ನಂಬದೆ ಅವನತ್ತ ನೋಡಿದಳು. ಬಹಳ ನೋವನುಭವಿಸಿ ಫಲ್‌ಬರ್‌ಗೆ ಹೋಗಲು ತೀರ್ಮಾನಿಸಿದ್ದ. 'ಎಲ್ಲಿ ಧರ್ಮವಿಲ್ಲವೋ, ಎಲ್ಲಿ ಕೀಳಾಗಿ ಕಾಣುವುದಿಲ್ಲವೋ, ಎಲ್ಲಿ ಹೆಂಗಸರಿಗೆ ಗೋಶಾ ಇಲ್ಲವೋ ಅಲ್ಲಿಗೆ ಹೋಗೋಣ'. ಎಂಬ ಅವನ ಪುನರುಚ್ಚಾರವನ್ನು ಕೇಳಿದಳು.

'ಜಲ್ದಿ ಮಗು! ನಾವು ಬಹಳ ದೂರ ಹೋಗಬೇಕಾಗಿದೆ.' ಗಫೂರ್ ಹೇಳಿದ.

ಅಮಿನಾ ನೀರು ಕುಡಿಯುವ ಪಾತ್ರೆ, ತನ್ನ ತಂದೆಯು ಕಂಚಿನ ತಟ್ಟೆಯನ್ನು ತೆಗೆದುಕೊಳ್ಳುವುದಕ್ಕೆ ಅಡಿಯಿಟ್ಟಳು. 'ಬೇಡ ಅವನ್ನ ಹಾಗೇ ಬಿಡು, ಮಗು. ಅವೆಲ್ಲ ಮಹೇಶನ ಪ್ರಾಯಶ್ಚಿತ್ತಕ್ಕೆ ಉಪಯೋಗವಾಗಲಿ.' ಗಫೂರ್ ಹೇಳಿದ.

ಮಗಳ ಕೈ ಹಿಡಿದು ದಟ್ಟ ಕತ್ತಲಲ್ಲಿ ಗಫೂರ್ ಹೊರಟ. ಆ ಹಳ್ಳಿಯಲ್ಲಿ ಅವನನ್ನು ಕೂಗಿ ಕರೆದು ಮಾತಾಡಿಸುವ ಯಾವ ಆತ್ಮೀಯರೂ ಇರಲಿಲ್ಲ. ಯಾರಿಗೂ ಅವನು ಹೇಳಿ ಹೊರಡಬೇಕಿರಲಿಲ್ಲ. ಮನೆಯ ಅಂಗಳ ದಾಟಿ, ಕಳ್ಳಿಗಿಡದ ಹತ್ತಿರ ನಿಂತು ಗಟ್ಟಿಯಾಗಿ ಅತ್ತ. ಕಪ್ಪನೆ ಆಕಾಶದಲ್ಲಿ ಮಿನುಗುವ ನಕ್ಷತ್ರಗಳೆಡೆ ಕತ್ತೆತ್ತಿ ಹೇಳಿದ. 'ಅಲ್ಲಾಹ!, ನಿನಗೆ ತೃಪ್ತಿಯಾಗುವಷ್ಟು ನನ್ನನ್ನು ಶಿಕ್ಷಿಸು—ಮಹೇಶ ತನ್ನ ಒಡಲಲ್ಲಿದ್ದ ಹಸಿವಿನಿಂದ ಸತ್ತ. ಅದನ್ನು ಬದುಕಿಸಲು ಯಾರೂ ಒಂದು ಹಿಡಿ ಹುಲ್ಲು ನೀಡಲಿಲ್ಲ. ದಯವಿಟ್ಟು ಆ ಜಮೀನುದಾರನ ಪಾಪವನ್ನು ಮಾತ್ರ ಕ್ಷಮಿಸಬೇಡ. ನೀನು ಕೊಟ್ಟ ನೀರನ್ನು ಕುಡಿಯಲು ಹುಲ್ಲನ್ನು ತಿನ್ನಲು ಬಿಡಲಿಲ್ಲ' ಅವರಿಬ್ಬರೂ ಸೆಣಬಿನ ಗಿರಣಿಯತ್ತ ಅಡಿಯಿಟ್ಟರು.

ಉನ್ನತ ಸ್ಥಾನವನ್ನು ಕುರಿತು

ವಿ. ಶ್ರೀನಿವಾಸ
ನಂ. ೮/೪೫೫, ಜಕ್ಕಸಂದ್ರ ಬಡಾವ
೧ನೆಯ ಬ್ಲಾಕ್, ೧ನೆಯ ಮೇನ್
ಕೋರಮಂಗಲ, ಬೆಂಗಳೂರು-೩೪

ಉನ್ನತ ಸ್ಥಾನದಲ್ಲಿರುವವರು ಮೂವರಿಗೆ ಸೇವಕರು : ರಾಜನಿಗೆ ಅಥವಾ ಸರ್ಕಾರಕ್ಕೆ, ಕೀರ್ತಿಗೆ ಮತ್ತು ಕಾರ್ಯಭಾರಕ್ಕೆ. ಆದ್ದರಿಂದ ಅವರಿಗೆ ತಮ್ಮ ವೈಯಕ್ತಿಕ ಜೀವನದಲ್ಲಾಗಲಿ, ಅವರು ಮಾಡುವ ಕೆಲಸ-ಕಾರ್ಯಗಳಲ್ಲಾಗಲಿ, ಸಮಯದ ಬಳಕೆಯಲ್ಲಾಗಲಿ ಸ್ವಾತಂತ್ರ್ಯವಿಲ್ಲ. ಸ್ವಾತಂತ್ರ್ಯವನ್ನು ಕಳೆದುಕೊಂಡು ಅಧಿಕಾರವನ್ನು ಪಡೆದುಕೊಳ್ಳಲು ಹವಣಿಸುವುದು ಅಥವಾ ತನ್ನ ಮೇಲಿನ ಅಧಿಕಾರವನ್ನು ಕಳೆದುಕೊಂಡು ಇತರರ ಮೇಲೆ ಅಧಿಕಾರವನ್ನು ಸ್ಥಾಪಿಸಲೆಳಸುವುದು ಒಂದು ವಿಚಿತ್ರ ಬಯಕೆಯೇ ಸರಿ. ಪದವಿಗೇರುವುದು ಪ್ರಯಾಸಕರ; ಮನುಷ್ಯರು ಕಷ್ಟಪಟ್ಟು ಅಧಿಕಾರವನ್ನುಗಳಿಸಿ, ಕಷ್ಟದಿಂದ ಹೆಚ್ಚು ಕಷ್ಟಕ್ಕೆ ದಾರಿ ಮಾಡಿಕೊಳ್ಳುತ್ತಾರೆ. ಅನೇಕ ವೇಳೆ ಅಂಥ ಪ್ರಯತ್ನ, ಪ್ರಯಾಸ ಅಲ್ಪತನದ್ದಾಗಿರುತ್ತದೆ.

ಮನುಷ್ಯರು ಹಿಂಬಾಗಿಲಿನಿಂದ ಅಧಿಕಾರಕ್ಕೆ ಏರುತ್ತಾರೆ. ಅಧಿಕಾರ ಸ್ಥಾನಕ್ಕೆ ಏರಿದ ಮೇಲೆ ಅದನ್ನು ಉಳಿಸಿಕೊಳ್ಳುವುದು ಕಷ್ಟ. ಉನ್ನತ ಸ್ಥಾನದಲ್ಲಿ ನಿಂತವನ ಕಾ
ಜಾರುತ್ತಿರುತ್ತದೆ. ಹಿನ್ನಡೆಯಿಂದ ಪತ
ಇಲ್ಲವೆ, ವ್ಯಕ್ತಿಗೆ ಗ್ರಹಣ ಹಿಡಿದಂತಾಗು
ವಿಷಾದ ಪರಿಸ್ಥಿತಿ. 'ಮನುಷ್ಯ ತಾನು ಯಾ
ಸ್ಥಿತಿಯಲ್ಲಿದ್ದನೋ ಆ ಸ್ಥಿತಿಯಲ್ಲಿ ಇ
ವೆಂಬುದನ್ನು ಮನಗಂಡಾಗ ಜೀವನದ
ಆಸಕ್ತಿಯನ್ನು ಕಳೆದುಕೊಳ್ಳುತ್ತಾನೆ
ಅದಕ್ಕಿಂತ ಹೆಚ್ಚಾಗಿ ಮನುಷ್ಯರು ನಿವೃ
ಹೊಂದಬಹುದಾದಾಗ, ನಿವೃತ್ತಿ ಹೊಂ
ವುದು ವಿವೇಕವೆನಿಸಿದಾಗ, ನಿವೃತ್ತಿ ಹೊಂ
ಲಾರರು. ವೃದ್ಧ ಪಟ್ಟಣಿಗರು ತಮ್ಮ ಮನೆಗ
ತಲೆಬಾಗಿಲುಗಳ ಬಳಿ ಕುಳಿತು, ವೃದ್ಧಾ
ವನ್ನು ಅವಹೇಳನಕ್ಕೆ ಗುರಿಮಾಡುವಂ
ಮುಪ್ಪು-ಅನಾರೋಗ್ಯಗಳಿಂದಾಗಿ ನಿವೃ
ಹೊಂದುವುದು ಅಗತ್ಯವೆನಿಸಿದಾಗಲೂ ಜ
ರಿಗೆ ಅಧಿಕಾರವಿಲ್ಲದೆ ಇರುವುದು ಸೇರಿ
ಯಾಗುವುದಿಲ್ಲ. ನಿಜವಾಗಿ, ದೊಡ್ಡವರ
ಇತರರ ಅಭಿಪ್ರಾಯಗಳ ಮೇಲಿಂದಲ
ತಮ್ಮನ್ನು ತಾವು ಸುಖಿಗಳೆಂದು ಭಾವಿ
ಬೇಕು. ಏಕೆಂದರೆ, ಅವರು ತಮ್ಮ ಸ್ವಂ
ಭಾವನೆಗಳ ಆಧಾರದ ಮೇಲೆಯ

ಮೂಲ: ಸರ್ ಫ್ರಾನ್ಸಿಸ್ ಬೇಕನ್‌ನ (೧೫೬೧–೧೬೨೬) "ಆಫ್ ಗ್ರೇಟ್ ಪ್ಲೇಸ್" ಎಂ
ಸುಪ್ರಸಿದ್ಧ ಪ್ರಬಂಧದ ಕನ್ನಡ ಭಾವಾನುವಾದ.

ಶೀರ್ವಾನಿಸುವುದಾದರೆ, ಅವರಿಗೆ ತಾವು ಸುಖಿಗಳೆಂದು ಅನ್ನಿಸುವುದೇ ಇಲ್ಲ. ಆದರೆ, ಇತರರು ತಮ್ಮ ಬಗ್ಗೆ ಏನೆಂದು ತಿಳಿದುಕೊಳ್ಳುತ್ತಾರೆ, ಅವರೂ ತಮ್ಮಂತೆಯೇ ಇರಬಯಸುತ್ತಾರೆ ಎಂಬುದನ್ನು ತಮ್ಮ ಮನಸ್ಸಿನಲ್ಲಿ ಆಲೋಚಿಸಿಕೊಂಡಾಗ ಅವರು ಸುಖಿಗಳು. ಅವರು ಅಂತರಂಗದಲ್ಲಿ ಅಸುಖಿಗಳೇ ಆಗಿದ್ದರೂ, ಇತರರ ಹೇಳಿಕೆಯಂತೆ ಸುಖಿಗಳು. ಏಕೆಂದರೆ ಅವರು ತಮ್ಮ ದೋಷಗಳನ್ನು ಕಂಡುಕೊಳ್ಳುವಲ್ಲಿ ಕಡೆಯವರಾದರೂ, ತಮ್ಮ ದುಃಖಗಳನ್ನು ಕಂಡುಕೊಳ್ಳುವಲ್ಲಿ ಮಾತ್ರ ಮೊದಲಿಗರು. ನಿಜವಾಗಿ, ದೊಡ್ಡ ಅದೃಷ್ಟದ ಪದವಿಗಳಲ್ಲಿರುವವರು ತಮಗೆ ತಾವೇ ಪರಕೀಯರು. ಕಾರ್ಯಬಾಹುಳ್ಯದ ಗೊಂದಲ–ಗಡಿಬಿಡಿಗಳಲ್ಲಿ ಅವರಿಗೆ ತಮ್ಮ ದೈಹಿಕ ಅಥವಾ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ವ್ಯವಧಾನವೇ ಇರುವುದಿಲ್ಲ. ಉಳಿದೆಲ್ಲರಿಗೂ ಸುಪರಿಚಿತನಾಗಿ ತನಗೆ ತಾನು ಅಪರಿಚಿತನಾಗಿ ಸಾಯುವುದು ದುರ್ವಿಧಿಯೇ ಸರಿ.

ಅಧಿಕಾರ ಸ್ಥಾನದಲ್ಲಿ ಒಳ್ಳೆಯದು ಮತ್ತು ಕೆಟ್ಟದ್ದು ಎರಡನ್ನೂ ಮಾಡಲು ಸ್ವಾತಂತ್ರ್ಯವುಂಟು. ಕೆಟ್ಟದ್ದನ್ನು ಮಾಡುವ ಸ್ವಾತಂತ್ರ್ಯವಂತೂ ಒಂದು ಶಾಪವೇ ಸರಿ. ಕೆಟ್ಟದ್ದರ ವಿಷಯದಲ್ಲಿ ಮನಸ್ಸು ಮಾಡದಿರುವುದು ಅತ್ಯುತ್ತಮ. ಕೆಟ್ಟದ್ದನ್ನು ಮಾಡುವ ಸಾಮರ್ಥ್ಯವಿಲ್ಲದಿರುವುದು ಅದಕ್ಕೆ ಎರಡನೆಯದು. ಆದರೆ ಒಳ್ಳೆಯದನ್ನು ಮಾಡುವುದೇ ಎಲ್ಲ ಅಧಿಕಾರಾನ್ವೇಷಣೆಯ ನಿಜವಾದ, ನ್ಯಾಯಸಮ್ಮತವಾದ ಗುರಿ. ಏಕೆಂದರೆ ಒಳ್ಳೆಯ ಆಲೋಚನೆಗಳನ್ನು ದೇವರು ಒಪ್ಪಬಹುದಾದರೂ, ಮನುಷ್ಯರ ಮಟ್ಟಿಗೆ ಹೇಳುವುದಾದರೆ, ಅವು ಕೃತಿರೂಪಕ್ಕಿಳಿಯದಿದ್ದರೆ ಕೇವಲ ಸ್ವಪ್ನಗಳಷ್ಟೇ ಆಗಿಬಿಡುತ್ತವೆ. ಅಧಿಕಾರ ಮತ್ತು ಸ್ಥಾನಬಲಗಳ ನೆಲಗಟ್ಟಿಲ್ಲದೆ, ಅವುಗಳನ್ನು ಕೃತಿರೂಪಕ್ಕಿಳಿಸುವುದು ಸಾಧ್ಯವಿಲ್ಲ. ಅರ್ಹತೆ ಮತ್ತು ಸತ್ಕಾರ್ಯಗಳೇ ಮಾನವನ ಎಲ್ಲ ಕಾರ್ಯಚಟುವಟಿಕೆಗಳ ಗುರಿ. ಇದರ ಅರಿವಿನಿಂದಲೇ ಆತನಿಗೆ ವಿಶ್ರಾಂತಿ ಲಭ್ಯ. (ಮಾನವನು ಭಗವಂತನ ಲೀಲಾ ನಾಟಕದಲ್ಲಿ ಭಾಗಿಯಾಗಬಲ್ಲನಾದರೆ, ಆತನು ಕರುಣಿಸುವ ವಿಶ್ರಾಂತಿಗೂ ಅರ್ಹನೇ.) ಪರಮಾತ್ಮ ತನ್ನ ಕೈಗಳಿಂದ ಸೃಷ್ಟಿಸಿದವೆಲ್ಲವುಗಳನ್ನೂ ತಿರುಗಿ ನೋಡಿದ. ಅವೆಲ್ಲವೂ ಒಳ್ಳೆಯವೇ ಆಗಿದ್ದುವು. ನಂತರ ಆತ ವಿಶ್ರಾಂತಿಯ ದಿನವನ್ನು ಗೊತ್ತುಪಡಿಸಿದ. ನಿಮ್ಮ ಸ್ಥಾನದ ಅಧಿಕಾರವನ್ನು ಚಲಾಯಿಸುವಾಗ, ನಿಮ್ಮ ಮುಂದೆ ಅತ್ಯುತ್ತಮವಾದ ಉದಾಹರಣೆಗಳನ್ನಿಟ್ಟುಕೊಳ್ಳಿ. ಪೂರ್ವೋದಾಹರಣೆಗಳ ಅನುಕರಣೆಯಿಂದ ಮಾರ್ಗದರ್ಶನಕ್ಕಾಗಿ ನಿಯಮಗಳ ಸಂಗ್ರಹವೇ ಲಭ್ಯವಾಗುತ್ತದೆ. ಸ್ವಲ್ಪ ಕಾಲದ ನಂತರ, ನಿಮ್ಮ ಸ್ವಂತ ಉದಾಹರಣೆಯನ್ನೇ ನಿಮ್ಮ ಮುಂದಿಟ್ಟುಕೊಳ್ಳಿ. ನಿಮ್ಮ ಅಧಿಕಾರಾವಧಿಯಲ್ಲಿ ನೀವು ನಿಮ್ಮ ಸ್ಥಾನದ ಕರ್ತವ್ಯಗಳನ್ನು ಅತ್ಯುತ್ತಮವಾಗಿ ನಿರ್ವಹಿಸಿದಿರೇ ಇಲ್ಲವೆ ಎಂಬುದನ್ನು ಕಟ್ಟುನಿಟ್ಟಾಗಿ ವಿಮರ್ಶಿಸಿಕೊಳ್ಳಿ. ಅದೇ ಸ್ಥಾನದಲ್ಲಿ ಕೆಟ್ಟದ್ದಾಗಿ ನಡೆದುಕೊಂಡವರ ನಿದರ್ಶನಗಳನ್ನು ಅಲಕ್ಷಿಸಬೇಡಿ. ಅವರ ಕೆಟ್ಟದ್ದರೊಂದಿಗೆ ನಿಮ್ಮ ಒಳ್ಳೆಯದನ್ನು ಹೋಲಿಸಿಕೊಂಡು ಅವರ ನೆನಪಿಗೆ ಮಸಿ ಬಳಿಯದಿರಿ. ಆದರೆ

ಯಾವುದನ್ನು ನಿವಾರಿಸಬೇಕು, ಯಾವುದನ್ನು ತಪ್ಪಿಸಬೇಕು ಎಂಬುದಕ್ಕೆ ಗಮನ ಕೊಡಿ. ಆದ್ದರಿಂದ, ಯಾವ ಆಡಂಬರವನ್ನೂ ಪ್ರದರ್ಶಿಸದೆ, ಗತಕಾಲವನ್ನೂ ಗತಕಾಲದವರನ್ನೂ ಹಳಿಯದೆ, ನಿಮ್ಮನ್ನು ನೀವು ಸುಧಾರಿಸಿಕೊಂಡು, ಅನುಸರಣೆಗೆ ಯೋಗ್ಯವಾದ ಉತ್ತಮ ನಿದರ್ಶನಗಳನ್ನು ಸೃಷ್ಟಿಸಿ.

ಎಲ್ಲ ವಿಷಯಗಳ ಮೂಲಕ್ಕೆ ಹೋಗಿ, ಕಾಲಗತಿಯಲ್ಲಿ, ಬದಲಾದ ಸಂದರ್ಭ—ಸನ್ನಿವೇಶಗಳಲ್ಲಿ ಅವು ಕ್ಷೀಣಿಸಿದುದೆಲ್ಲಿ ಎಂತು ಎಂಬುದನ್ನು ಗಮನಿಸಿ. ಆದಾಗ್ಯೂ ಭೂತಕಾಲ ಮತ್ತು ವರ್ತಮಾನಕಾಲಗಳೆರಡರಿಂದಲೂ ವಿವೇಕವನ್ನು ಗಳಿಸಿಕೊಳ್ಳಿ. ಪ್ರಾಚೀನ ಕಾಲದಲ್ಲಿ ಅತ್ಯುತ್ತಮವಾದದ್ದೇನಿದೆಯೋ, ಈಚಿನ ಕಾಲದಲ್ಲಿ ಅತ್ಯಂತ ಸೂಕ್ತವಾದದ್ದೇನೇನಿದೆಯೋ—ಎರಡರಿಂದಲೂ ಮಾರ್ಗದರ್ಶನವನ್ನು ಪಡೆದುಕೊಳ್ಳಿ. ನಿಮ್ಮ ಮಾರ್ಗವು ಯಾವಾಗಲೂ ನೇರವಾಗಿದ್ದು, ಜನರು ನಿಮ್ಮಿಂದ ಏನನ್ನು ನಿರೀಕ್ಷಿಸಬಹುದೆಂಬುದು ಅವರಿಗೆ ಮುಂಚಿತವಾಗಿ ತಿಳಿಯುವಂತಿರಲಿ. ಆದರೆ, ಅಧಿಕಾರದ ದರ್ಪ, ನಿಯಮಗಳ ಪಾಲನೆಯಲ್ಲಿ ಅತಿಯಾದ ಬಿಗಿ, ಕಟ್ಟು–ನಿಟ್ಟು ಬೇಡ. ನೀವು ನಿಮ್ಮ ನಿಯಮದಿಂದ ದೂರ ಸರಿದಾಗ, ಅದನ್ನು ಸರಿಯಾಗಿ ಸಮರ್ಥಿಸಿಕೊಳ್ಳಿ. ನಿಮ್ಮ ಸ್ಥಾನದ ಹಕ್ಕನ್ನು ಕಾಯ್ದುಕೊಳ್ಳಿ. ಆದರೆ, ನಿಮ್ಮ ಕಾರ್ಯಕ್ಷೇತ್ರದ ವ್ಯಾಪ್ತಿಗೆ ಸಂಬಂಧಿಸದ ಪ್ರಶ್ನೆಗಳನ್ನು ಕೆದಕಬೇಡಿ. ಹಕ್ಕುಗಳನ್ನು ಸವಾಲುಗಳನ್ನು ಮುಂದೊಡ್ಡಿ, ನಿಮ್ಮ ಹಕ್ಕನ್ನು ಪ್ರತಿಪಾದಿಸುವ ಬದಲು, ಸದ್ದಿಲ್ಲದೆ, ನಿಮ್ಮ ಸ್ಥಾನಬಲದ ಮೇಲೆ ಹಕ್ಕನ್ನು ಚಲಾಯಿಸಿ. ಅಂತೆಯೇ, ನಿಮ್ಮ ಅಧೀನಸ್ಥಾನಗಳ ಹಕ್ಕುಗಳನ್ನೂ ರಕ್ಷಿಸಿ. ಎಲ್ಲ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುವುದಕ್ಕಿಂತ ಮುಖ್ಯವಾದ ವಿಷಯಗಳಲ್ಲಿ ನಿರ್ದೇಶನ ನೀಡುವುದು ಹೆಚ್ಚು ಗೌರವಯುತವಾದುದೆಂಬುದನ್ನು ಮನಗಾಣಿರಿ. ನಿಮ್ಮ ಸ್ಥಾನದ ಕರ್ತವ್ಯಗಳ ನಿರ್ವಹಣೆಯಲ್ಲಿ ಸಹಾಯ–ಸಲಹೆಗಳನ್ನು ಸ್ವಾಗತಿಸಿ, ಸ್ವೀಕರಿಸಿ. ನಿಮಗೆ ಮಾಹಿತಿ ನೀಡುವವರನ್ನು ಅನಾವಶ್ಯಕವಾಗಿ ಮಧ್ಯಪ್ರವೇಶ ಮಾಡುವವರೆಂದು ದೂರೀಕರಿಸದೆ, ಅವರು ನೀಡುವ ಮಾಹಿತಿಯನ್ನು ಒಳ್ಳೆಯ ರೀತಿಯಲ್ಲಿ ಅಂಗೀಕರಿಸಿ.

ಅಧಿಕಾರದ ದೋಷಗಳು ಮುಖ್ಯವಾಗಿ ನಾಲ್ಕು: ವಿಳಂಬ, ಭ್ರಷ್ಟಾಚಾರ, ಒರಟುತನ ಮತ್ತು ಚಾರಿತ್ರ್ಯ ದೌರ್ಬಲ್ಯ. ವಿಳಂಬಗಳಿಗೆ ಸಂಬಂಧಿಸಿದಂತೆ: ನಿಮ್ಮನ್ನು ಕಾಣಲು ಬರುವವರಿಗೆ ಸುಗಮ್ಯತೆ, ಎಲ್ಲ ಕೆಲಸಗಳಿಗೂ ನಿಗದಿತ ಸಮಯ; ಒಂದೊಂದೇ ಕೆಲಸವನ್ನು ಕೈಗೆತ್ತಿಕೊಂಡು ಮುಗಿಸುವುದು; ಅಗತ್ಯಬಿದ್ದಾಗ ಹೊರತು, ಉಳಿದಂತೆ ವಿವಿಧ ಕೆಲಸ—ಕಾರ್ಯಗಳನ್ನು ಏಕಕಾಲದಲ್ಲಿ ಕೈಗೆತ್ತಿಕೊಳ್ಳದಿರುವುದು—ಇವು ಅಗತ್ಯ. ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ: ನಿಮ್ಮ ಹಾಗೂ ನಿಮ್ಮ ಸೇವಕರ ಕೈಗಳನ್ನು ಲಂಚಪಡೆಯಲು ಸಾಧ್ಯವಾಗದಂತೆ ಕಟ್ಟಿ ಹಾಕುವುದರ ಜೊತೆಗೆ, ಲಂಚವನ್ನು ನೀಡಲು ಬರುವ ಕಕ್ಷಿದಾರರ ಕೈಗಳನ್ನೂ ಕಟ್ಟಿಹಾಕಿ. ಪ್ರಾಮಾಣಿಕತೆಯನ್ನು ನಿಮ್ಮ ನಡತೆಯಲ್ಲಿ ಅಳವಡಿಸಿಕೊಂಡು, ಕೃತಿರೂಪಕ್ಕೆ ತರುವುದರಿಂದ ಮೊದಲನೆಯ ಗುರಿಯನ್ನೂ, ಪ್ರಾಮಾಣಿ


ಕತೆಯ ವಿಷಯದಲ್ಲಿ ನಿಮ್ಮ ದೃಢನಿಷ್ಠೆಯನ್ನು ವ್ಯಕ್ತಪಡಿಸಿ, ಲಂಚದ ಬಗ್ಗೆ ಜಿಗುಪ್ಸೆಯನ್ನು ತಾಳುವುದರಿಂದ ಎರಡನೆಯ ಗುರಿಯನ್ನೂ ಸಾಧಿಸಬಹುದು. ತಪ್ಪು ಮಾಡದಿರುವುದಷ್ಟೇ ಸಾಲದು; ತಪ್ಪು ನಡೆದಿರಬಹುದೆಂಬ ಸಂಶಯಕೂಡ ಬರದಂತೆ ಎಚ್ಚರಿಕೆವಹಿಸಿ. ಯಾರು ದೃಢವಾದ ನಿಲುವನ್ನು ತಳೆಯದೆ, ಅಕಾರಣವಾಗಿ ತಮ್ಮ ನಿಲುವನ್ನು ಬದಲಾಯಿಸುವರೋ, ಅಂತಹವರು ಲಂಚಗುಳಿತನದ ಸಂಶಯಕ್ಕೆ ಪಕ್ಕಾಗುತ್ತಾರೆ. ಆದ್ದರಿಂದ, ನೀವು ನಿಮ್ಮ ಅಭಿಪ್ರಾಯವನ್ನು, ಕಾರ್ಯವಿಧಾನವನ್ನು ಬದಲಾಯಿಸಿದಾಗ, ಅಂತಹ ಬದಲಾವಣೆಯ ಬಗ್ಗೆ ಯಾವ ಮುಚ್ಚುಮರೆಯೂ ಇಲ್ಲದೆ ಸರಳ ರೀತಿಯಲ್ಲಿ ತಿಳಿಸಿ, ನೀವು ಮಾಡಿರುವ ಬದಲಾವಣೆಗೆ ಕಾರಣಗಳನ್ನು ಬಹಿರಂಗವಾಗಿ ಘೋಷಿಸಿ, ಯಾವುದನ್ನೂ ಮುಚ್ಚಿಡಬೇಡಿ. ಒಬ್ಬಾನೊಬ್ಬ ಆಪ್ತ ಅಥವಾ ನೌಕರ ಗುಟ್ಟಾಗಿ ವ್ಯವಹರಿಸುತ್ತ, ಸಲಿಗೆಯಿಂದಿರುವುದಕ್ಕೆ ಯಾವ ಅರ್ಹತೆಯೂ ಇಲ್ಲದೆ ಸಲಿಗೆಯಿಂದ ವರ್ತಿಸುತ್ತಿದ್ದರೆ, ಆತ ಗುಪ್ತ ಭ್ರಷ್ಟಾಚಾರದ ದಳ್ಳಾಳಿಯೆಂದು ಜನ ತಿಳಿಯುತ್ತಾರೆ.

ಒರಟುತನದ ವಿಷಯದಲ್ಲಿ ಹೇಳುವುದಾದರೆ, ಅದು ಅನಾವಶ್ಯಕ ಅತೃಪ್ತಿಯ ಕಾರಣ; ಕ್ರೌರ್ಯವು ಭಯವನ್ನು ಹುಟ್ಟಿಸಿದರೆ, ಒರಟುತನವು ದ್ವೇಷವನ್ನು ಬೆಳೆಸುತ್ತದೆ. ಅಧಿಕಾರಯುತ ನಿಂದನೆ ಕೂಡ ಗಂಭೀರವಾಗಿರಬೇಕಲ್ಲದೆ ಮೂದಲಿಕೆಯಾಗಿರಬಾರದು. ಚಾರಿತ್ರ್ಯ ದೌರ್ಬಲ್ಯವಂತೂ ಭ್ರಷ್ಟಾಚಾರಕ್ಕಿಂತಲೂ ಕೆಟ್ಟದ್ದು. ಲಂಚವಾದರೋ ಆಗೊಮ್ಮೆ ಈಗೊಮ್ಮೆ ಬರುವಂಥದು. ಅಧಿಕಾರದಲ್ಲಿರುವವನು ಬೇಡಿಕೆಗಳಿಗೆ ಮಣಿಯುವ ದಾಕ್ಷಿಣ್ಯಪರ ವ್ಯಕ್ತಿಯಾದರಂತೂ ಮುಗಿದೇಹೋಯಿತು—ಆತ ಕಾರ್ಯಾರ್ಥಿಗಳ ಬೇಡಿಕೆಗಳ ಕಾಟದಿಂದ ತಪ್ಪಿಸಿಕೊಳ್ಳುವಂತೆಯೇ ಇಲ್ಲ. ಸಾಲೊಮನ್ ನುಡಿದಿರುವಂತೆ "ಜನರ ದಾಕ್ಷಿಣ್ಯಕ್ಕೆ ಒಳಗಾಗುವುದು ಒಳ್ಳೆಯದಲ್ಲ. ಅಂತಹ ವ್ಯಕ್ತಿ ಒಂದು ತುಣುಕು ರೊಟ್ಟಿಗಾಗಿ ದಾರಿತಪ್ಪಿ ಬಿಡುತ್ತಾನೆ." ಹಿಂದಿನವರು ಹೇಳಿರುವ ಈ ಮಾತು ತುಂಬ ಸತ್ಯವಾದದ್ದು : ಸ್ಥಾನವು ಮನುಷ್ಯನು ಎಂತಹವನೆಂಬುದನ್ನು ತೋರಿಸುತ್ತದೆ. ಅದು ಕೆಲವರನ್ನು ಉತ್ತಮರನ್ನಾಗಿ ತೋರಿಸಿದರೆ, ಮತ್ತೆ ಕೆಲವರನ್ನು ಕೆಟ್ಟವರನ್ನಾಗಿ ತೋರಿಸುತ್ತದೆ. ಟೇಸಿಟಸ್ ಚಕ್ರವರ್ತಿ ಗಾಲ್ಬನನ್ನು ಕುರಿತು "ತಾನೇ ಚಕ್ರವರ್ತಿಯಾಗಿರದಿದ್ದದ್ದರೆ, ಪ್ರತಿಯೊಬ್ಬರೂ ಚಕ್ರಾಧಿಪತ್ಯವನ್ನು ನಡೆಸಲು ಅರ್ಹರಾದವರು ಎಂದು ಭಾವಿಸುತ್ತಿದ್ದಂತಹ ವ್ಯಕ್ತಿ" ಎಂದಿದ್ದಾನೆ. ಆತನೇ ಚಕ್ರವರ್ತಿ ವೆಸ್ಪೇಸಿಯಸ್‌ನನ್ನು ಕುರಿತು "ಆತ ಅಧಿಕಾರದಿಂದ ಉತ್ತಮಗೊಂಡ ಏಕೈಕ ಚಕ್ರವರ್ತಿ" ಎಂದಿದ್ದಾನೆ. ಈ ಎರಡು ನುಡಿಗಳಲ್ಲಿ ಮೊದಲನೆಯದು ರಾಜ್ಯವನ್ನಾಳುವ ಸಾಮರ್ಥ್ಯವನ್ನು ಕುರಿತದ್ದಾದರೆ, ಎರಡನೆಯದು ನಡೆ–ನುಡಿ, ಭಾವೋದ್ರೇಕಗಳಿಗೆ ಸಂಬಂಧಿಸಿದ್ದಾಗಿದೆ.

ಗೌರವದ ಸ್ಥಾನದಲ್ಲಿ ಉತ್ತಮ ವ್ಯಕ್ತಿಯಾಗಿ ಮಾರ್ಪಡುವುದು ಶ್ರೇಷ್ಠ ಹಾಗೂ ಉದಾರ ಚೇತನದ ಖಚಿತ ಲಕ್ಷಣ. ಪದವಿ ಶ್ರೇಷ್ಠತೆಯ ನೆಲೆಯಾಗಬೇಕು. ಪ್ರಕೃತಿಯಲ್ಲಿ ವಸ್ತುಗಳು ತಮ್ಮ ಸ್ಥಾನವನ್ನು

ತಲುಪುವವರೆಗೆ ರಭಸದಿಂದ ಚಲಿಸಿ ತಮ್ಮ ಸ್ಥಾನದಲ್ಲಿ ನೆಲೆಗೊಂಡ ಮೇಲೆ ಶಾಂತವಾಗುವಂತೆ, ಅಧಿಕಾರಾನ್ವೇಷಣೆಯಲ್ಲಿ ಶ್ರೇಷ್ಠತೆಯು ರಭಸದಿಂದ ಚಲಿಸಿ, ಅಧಿಕಾರದಲ್ಲಿ ಶಾಂತವಾಗಿ ನೆಲೆಗೊಳ್ಳುತ್ತದೆ. ಎಲ್ಲ ಉನ್ನತ ಪದವಿಗಳಿಗೆ ಬಳಸು-ಬಳಸಾದ ಮೆಟ್ಟಲುಗಳ ಮೇಲೆಯೇ ಏರಿ ಹೋಗಬೇಕು. ಒಳ ಪಂಗಡಗಳಿದ್ದ ಪಕ್ಷದಲ್ಲಿ, ಅಧಿಕಾರಕ್ಕೇರುವಾಗ, ತನ್ನ ಸ್ವಂತ ಹಿತಾಶಕ್ತಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಒಂದು ಪಂಗಡವನ್ನು ಬೆಂಬಲಿಸಿ, ಅಧಿಕಾರಕ್ಕೇರಿದ ಮೇಲೆ ಎಲ್ಲ ಒಳಪಂಗಡಗಳ ವಿಷಯದಲ್ಲಿ ತಟಸ್ಥ ಧೋರಣೆಯನ್ನು ತಳೆಯುವುದು ಉತ್ತಮ. ನಿಮಗಿಂತ ಮುಂಚೆ ನಿಮ್ಮ ಸ್ಥಾನದಲ್ಲಿದ್ದ ವ್ಯಕ್ತಿಯ ನೆನಪನ್ನು ನ್ಯಾಯಸಮ್ಮತವಾಗಿಯೂ, ನಯ-ವಿನಯಗಳಿಂದಲೂ ಬಳಸಿಕೊಳ್ಳಿ. ಇಲ್ಲವಾದರೆ, ನೀವು ಅಧಿಕಾರದಿಂದ ಕೆಳಗಿಳಿದ ಮೇಲೆ, ಸಾಲವನ್ನು ತೀರಿಸಲೇಬೇಕಾಗುವುದು ಖಚಿತ.

ನಿಮಗೆ ಸಹೋದ್ಯೋಗಿಗಳಿದ್ದರೆ, ಅವರನ್ನು ಗೌರವದಿಂದ ಕಂಡು, ಅವರೇ ನಿರೀಕ್ಷಿಸದಿದ್ದಾಗ ಅವರನ್ನು ಕರೆಯುವುದು ಅವರು ನಿಮ್ಮಿಂದ ಸಕಾರಣವಾಗಿ ಕರೆಯನ್ನು ನಿರೀಕ್ಷಿಸಿದ್ದಾಗ ಕರೆಯದಿರುವುದಕ್ಕಿಂತ ಮೇಲು. ನಿಮ್ಮ ಸಂಭಾಷಣೆಯಲ್ಲಿ, ಕಕ್ಷಿದಾರರಿಗೆ ಖಾಸಗಿ ಉತ್ತರಗಳನ್ನು ನೀಡುವಾಗ, ಅಧಿಕಾರ ಪ್ರಜ್ಞೆಯಿಂದ ನಿಮ್ಮ ಪದವಿಯನ್ನು ಮೇಲಿಂದ ಮೇಲೆ ನೆನಪಿಸಿಕೊಳ್ಳದಿರಿ. ಆದರೆ ಪದವಿಯನ್ನು ಅಲಂಕರಿಸಿ, ತನ್ನ ಸ್ಥಾನದ ಕರ್ತವ್ಯಗಳನ್ನು ನಿರ್ವಹಿಸುವಾಗ ಆತ ಬೇರೊಬ್ಬ ಮನುಷ್ಯನೇ ಆಗುತ್ತಾನೆ ಎಂದು ಜನರಾಡಿಕೊಳ್ಳುವಂತೆ ನಡೆದುಕೊಳ್ಳಿ.



"ಬೆಳವಣಿಗೆಗಾಗಿ ಬೆಳವಣಿಗೆ ಎಂಬುದು ಅರ್ಬುದ ಕೋಶದ ನಿಯಮ."

—ಶೂನ್ಯ ಜನಸಂಖ್ಯಾ ಬೆಳವಣಿಗೆ

ಜಾಣ ರೋಗಾಣುಗಳು

ಡಾ|| ಸ. ಜ. ನಾಗಲೋಟಿಮಠ

೨೫, ಶಾಂತಾ, ಬಸವ ಕಾಲನಿ

ಬೆಳಗಾವಿ-೧೦

"ರೋಗ ನಮಗೇಕೆ ಬರುತ್ತದೆ?" ರೋಗಾಣುಗಳ ಆಕ್ರಮಣದಿಂದ. "ನಾವೇನು ಅವುಗಳಿಗೆ ಶತ್ರುಗಳೇ?" ಜೀವಿ ಬಾಳಿ ವೃದ್ಧಿಸುವುದು ಸೃಷ್ಟಿನಿಯಮ. ಇಲ್ಲಿ ಜೀವಿ-ಅತಿಥೇಯ ಸಂಬಂಧವೊಂದೇ ಸಾಧು, ಶತ್ರು-ಮಿತ್ರ ಅಲ್ಲ. ರೋಗಾಣುಗಳೆಂದು ಅವುಗಳಿಗೆ ಹೆಸರಿತ್ತವರು ನಾವು ಮನುಷ್ಯರು. ವಾಸ್ತವವಾಗಿ ಅವು ನಮ್ಮ ತೆರದಲ್ಲೇ ಜೀವಿಗಳು. ನಾವು ಅವುಗಳಿಗೆ ಅತಿಥೇಯರಾಗಿ ಒದಗುವುದರಿಂದ ಅವು ನಮ್ಮನ್ನು ಆಕ್ರಮಿಸುತ್ತವೆ, ಇತ್ಯಾದಿ ಭೂಮಿಗೆ ಮಾತಾಡಲು ಬಂದರೆ ಅದು ನಮ್ಮನ್ನು "ರೋಗಾಣುಗಳು" ಎಂದು ಖಂಡಿತ ಹೆಸರಿಸದಿರದು.

"ಜಾಣ ರೋಗಾಣುಗಳು" ಎಂಬ ಲೇಖನ ಮಾಲೆಯಲ್ಲಿ ಡಾ|| ಸ. ಜ. ನಾಗಲೋಟಿಮಠರು ನಮ್ಮ ಓದುಗರಿಗೆ ಹೊಸ ಮಾಹಿತಿಯನ್ನು ಒದಗಿಸಲು ಒಪ್ಪಿದ್ದಾರೆ. ವಾಚಕರಿಂದ ಬರುವ ಪ್ರಶ್ನೆ ಸೂಚನೆಗಳಿಗೆ ಸ್ವಾಗತ ಉಂಟು.

ಬಹಳ ದಿನಗಳಿಂದ ಈ ವಿಷಯದ ಮೇಲೆ ನನ್ನ ವಿಚಾರಗಳನ್ನು ಬರೆಯಲು ಬಯಸಿದ್ದೆ. ಆಗೊಮ್ಮೆ-ಈಗೊಮ್ಮೆ ವಿಚಾರಿಸುತ್ತಿದ್ದೆ. ಆನಂತರ ಅದನ್ನು ಅಷ್ಟಕ್ಕೆ ಮರೆತು ಸುಮ್ಮನಾಗುತ್ತಿದ್ದೆ. ವಿಷಯವೂ ಮೆದುಳಿನಲ್ಲಿ ಮಲಗಿಬಿಡುತ್ತಿತ್ತು. ಅದಕ್ಕೆ ಒಂದು ರೂಪ ಬಂದಿರಲೇ ಇಲ್ಲ. ಒಂದು ದಿನ ನಾನು ಹಾಗೂ ನನ್ನ ಸ್ನೇಹಿತ ಡಾ|| ಕೆ. ಪಿ. ದೇವಧರ ಕೂಡಿಕೊಂಡು ಪಾಟ್ನಾಕ್ಕೆ ಹೊರಟಿದ್ದೆವು. ನಮ್ಮ ಟ್ರೇನು ಮುಂಬೈದಿಂದ ಹೊರಡಬೇಕಾಗಿತ್ತು. ಟ್ರೇನಿನಲ್ಲಿ ಕುಳಿತಾಗ ನನ್ನ ವಿಚಾರ ಅವರೆದುರಿಗೆ ಇಟ್ಟೆ. ಅವರು ನಗಹತ್ತಿದರು. ಇನ್ನೊಮ್ಮೆ ವಿವರಿಸೆಂದು ಕುಳಿತರು. ವಿವರಿಸಿದೆ. ಸ್ವಾರಸ್ಯಕರವಾಗಿದೆ. ನೀವು ವಿಚಾರಿಸುತ್ತಿರುವುದು ಸರಿ ಎನಿಸುತ್ತದೆ. ಆದರೆ ವೈದ್ಯರು ಇದನ್ನು ಒಪ್ಪುವರೋ ಇಲ್ಲವೋ ಎಂದು ಶಂಕೆಪಟ್ಟರು. ಮತ್ತೆ ರೋಗಾಣುಗಳ ಜಾಣತನವನ್ನು ನಾನು ಅಲ್ಲಿಯೇ ನಿಲ್ಲಿಸಿದೆ.

ಪಾಟ್ನಾದಲ್ಲಿಯ ವಾರ್ಷಿಕ ಅಧಿವೇಶನವನ್ನು ಮುಗಿಸಿಕೊಂಡು ಮರಳುತ್ತಿರುವಾಗ ನನ್ನ ಜೊತೆಗೆ ಡಾ|| ನಾಗರಾಜ ಇದ್ದರು. ಮದ್ರಾಸ್ ಸ್ಟೇಷನ್‌ನಲ್ಲಿ ಕುಳಿತಾಗ ಅವರ ಮುಂದೆ ನನ್ನ ವಿಚಾರ ಪ್ರಸ್ತಾವಿಸಿದೆ. ಅವರಂತೂ ಖುಷಿಪಟ್ಟರು. ಹೇಳಿದರು "ಸರ್, ನಾನು ಈ ರೋಗಾಣುಗಳ ಬಗ್ಗೆ

ಹತ್ತಾರು ವರ್ಷಗಳಿಂದ ಉಪನ್ಯಾಸ ಮಾಡುತ್ತಿರುವೆನು. ಆದರೆ ಈ ರೀತಿಯಲ್ಲಿ ನಾನು ವಿಚಾರಿಸಿಲ್ಲ. ಯಾವ ಪುಸ್ತಕದಲ್ಲೂ ಇಂಥ ವಿಚಾರಸರಣಿ ಕಣ್ಣಿಗೆ ಬಿದ್ದಿಲ್ಲ" ಎಂದರು. ಅವರು ಹೇಳುವುದು ನಿಜವೆಂದು ನನಗೂ ಗೊತ್ತಿತ್ತು. ಯಾಕೆಂದರೆ ನನ್ನ ವಿಚಾರ ಸಾಮಾನ್ಯ ಸರಳ ವಿಚಾರಗಳಿಂದ ವಿರುದ್ಧ ದಿಕ್ಕಿನಲ್ಲಿ ಇತ್ತು. ನನಗೂ ಒಂದು ರೀತಿಯ ಭಯವಿತ್ತು. ಡಾ|| ನಾಗರಾಜ ಅವರು ಮೇಲಿಂದ ಮೇಲೆ ನನ್ನನ್ನು ಪೀಡಿಸತೊಡಗಿದರು. "ಸರ್, ನೀವು ಮೊದಲು ಆ ವಿಷಯದ ಮೇಲೆ ಒಂದು ಪುಸ್ತಕವನ್ನು ಬರೆಯಿರಿ" ಎಂದು ಬೆನ್ನು ಬಿದ್ದರು. ನಾನಾದರೋ ಬರೆಯಲು ಕೂಡ್ರುತ್ತಿದ್ದೆ. ಮತ್ತೆ ಏನೋ ಕುಂದು ಕಂಡಂತಾಗಿ ಬರೆಯುವುದನ್ನು ಅಷ್ಟಕ್ಕೆ ನಿಲ್ಲಿಸುತ್ತಿದ್ದೆ. ಈ ತುಮುಲ ಹಲವಾರು ತಿಂಗಳುಗಳವರೆಗೆ ನಡದೇ ಇತ್ತು.

ವಿದ್ಯಾರ್ಥಿಗಳಿಗೆ ಇದನ್ನು ವಿವರಿಸಿದರೆ ಅವರು ಈ ವಿಚಾರ ಹೇಗೆ ಸ್ವಾಗತಿಸುವರು ಎಂಬ ಕುತೂಹಲ ಬಂತು. ನನ್ನ ಕಿರಿಯ ಮಗ ಡಾ|| ಉಮೇಶನು ಇನ್ನೂ ಸ್ನಾತಕೋತ್ತರ ವಿದ್ಯಾರ್ಥಿ. ಅವನೆದುರಿಗೆ ಒಮ್ಮೆ ಈ ವಿಚಾರ ಸುರುಳಿ ಬಿಚ್ಚಿದೆ. ಅವನು ಖುಷಿಪಟ್ಟ. "ನೀವು ಹೇಳಿದ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ಹೇಳಿದರೆ ರೋಗದ ಸುಳಿವುಗಳ ಬಗ್ಗೆ ಚೆನ್ನಾಗಿ ತಿಳಿಯುತ್ತದೆ. ಹಾಗೂ ವಿಷಯವು ಸ್ವಾರಸ್ಯಕರವಾಗಿರುತ್ತದೆ" ಎಂದನು. "ನೀವು ಇದರ ಬಗ್ಗೆ ಮೊದಲು ಇಂಗ್ಲಿಷ್ ಭಾಷೆಯಲ್ಲಿ ಪುಸ್ತಕ ಬರೆಯಿರಿ. ಈ ವಿಷಯವನ್ನು ವೈದ್ಯರು ಹೆಚ್ಚು ಮೆಚ್ಚುತ್ತಾರೆ" ಎಂದು ಅಭಿಪ್ರಾಯಪಟ್ಟನು.

ನನಗೆ ಅನಿಸಿದ ಈ ವಿಚಾರಗಳನ್ನು ಕೇ ಹಲವಾರು ಸ್ನೇಹಿತರು ಹಾಸ್ಯ ಮಾಡಿದರು "ನೀನು ಈ ವಿಕೃತ ವಿಚಾರಗಳನ್ನು ಯಾ ಮಾಡುವೆ?" ಎಂದರು. ಅವರಿಗೆ ವಿಕೃತವೆ ಸಿದರೂ ನನಗೆ ಅವು ಇನ್ನೂ ಹೆಚ್ಚಾ ನಿಚ್ಚಳವಾಗತೊಡಗಿವೆ. ನನ್ನ ಯೋಜ ಸರಿಯಾಗಿದೆ ಎಂದು ಮನಸ್ಸು ಗಟ್ಟಿಗೊಳ್ಳುತ್ತಲಿದೆ.

ಈ ಬರಹಗಳ ಮುಖ್ಯ ಹಾಗೂ ಮೂಲ ತತ್ವವೆಂದರೆ "ಯಾರೂ ಯಾರಿಗೂ ಕಾ ಬೇಕೆಂದು ಹುಟ್ಟಿಲ್ಲ. ಎಲ್ಲ ಜೀವಿಗಳೂ ತಮ್ಮ ಸಂತತಿಯನ್ನು ಉಳಿಸಿಕೊಂಡು ಹೋಗಲು ಪ್ರಯತ್ನಿಸುತ್ತವೆ. ತಮ್ಮ ಪ್ರಯತ್ನ ನಡೆ ದಾಗ ಪರರ ಸಹಾಯ ತೆಗೆದುಕೊಳ್ಳಬಹುದು. ಇಲ್ಲವೇ ಪರಜೀವಿಗಳನ್ನು ಒತ್ತಾಯ ಮಾಡಬಹುದು". ಆದರೆ ಪರರಿಗೆ ತೊಂದರೆ ಕೊಡಲು ಅವು ಬಯಸುವುದಿಲ್ಲ. ಅದಕ್ಕಾಗಿ ಅವು ಹುಟ್ಟಿಲ್ಲ. ಕೇವಲ ತಮ್ಮ ಪೀಳಿಗೆಯ ಮುಂದುವರಿಕೆಗಾಗಿ ಹಾಗೂ ಪ್ರಗತಿಗಾಗಿ ಪ್ರಯತ್ನಿಸುತ್ತವೆ. ಹಲವಾರು ತಂತ್ರಗಳನ್ನು ಹೂಡುತ್ತವೆ. ಈ ತಂತ್ರಗಳು ವ್ಯಕ್ತಿಗಳಲ್ಲಿ ಹತ್ತಾರು ತೊಂದರೆಗಳನ್ನು ತರುತ್ತವೆ. ಈ ತೊಂದರೆಗಳಿಗೆ ನಾವು ರೋಗ ಲಕ್ಷಣಗಳೆಂದು ಕರೆಯುತ್ತೇವೆ. ದೇಹದ ಶಕ್ತಿಯು ಹಲವಾರು ಬಗೆಯಿಂದ ರೋಗಾಣುವು ನಮಗೆ ತರುವ ಹಾನಿಯನ್ನು ತಡೆಯಲು ಪ್ರಯತ್ನಿಸುವುದು. ರೋಗಾಣುಗಳು ಈ ನಿರೋಧಕ ಶಕ್ತಿಯನ್ನು ತಪ್ಪಿಸಿ ಮತ್ತೆ ತಮ್ಮ ಸಂತಾನ ಬೆಳೆಸುವುವು. ಮಾನವನ ದೇಹದ ರೋಗ ನಿರೋಧಕತೆ ಒಂದು ಕಡೆಗಾಗಿರುವುದು. ಇನ್ನೊಂದು ಬದಿಯಲ್ಲಿ ಮಾನವನ

ಆವಿಷ್ಕಾರ ಮಾಡಿದ ಔಷಧಗಳನ್ನೂ ಬಳಸುತ್ತಿರುವೆವು. ರೋಗಾಣುಗಳು ಇಂಥ ಮದ್ದುಗಳಿಗೆ ಸಮರ್ಥಕವಾದ ಪ್ರತಿರೋಧ ತೋರುತ್ತಲಿವೆ. ಅಂಥ ಶಕ್ತಿಯನ್ನು ಬೆಳೆಸಿಕೊಳ್ಳುತ್ತಲಿರುವುವು. ಮಾನವನ ರೋಗಾಣುಗಳನ್ನು ನಾಶಪಡಿಸಲು ಒಂದು ಉಪಾಯ ಮಾಡಿದರೆ ರೋಗಾಣುಗಳು ಈ ಉಪಾಯವನ್ನು ಮುರಿದು ಹಾಕುವ ತಂತ್ರವನ್ನು ಬೆಳೆಸಿಕೊಳ್ಳುತ್ತಲಿರುವುವು.

ಹಲವಾರು ರೋಗಾಣುಗಳ ಹಾವಳಿಯಿಂದ ರೋಗಿಯು ಮರಣ ಹೊಂದುವ ಸಾಧ್ಯತೆ ಇದೆ. ರೋಗಿಯ ಮರಣವು ರೋಗಾಣುಗಳಿಗೆ ನಿಜವಾಗಿ ಬೇಕಾಗಿಯೇ ಇಲ್ಲ. ಮಾನವನು ಮರಣ ಹೊಂದುವುದು ಈ ರೋಗಾಣುಗಳಿಗೂ ದೊಡ್ಡ ಹಾನಿಯೇ. ಅವನು ಇನ್ನೂ ಕೆಲದಿನ ಬದುಕಿದ್ದರೆ ಮತ್ತೂ ಹೆಚ್ಚಿಗೆ ತಮ್ಮ ಪೀಳಿಗೆಯನ್ನು ಅವು ಬೆಳೆಸಿಕೊಳ್ಳುತ್ತಿದ್ದವು. ಕಾರಣ ಮಾನವನ ಮರಣ ಒಂದು ರೀತಿಯಿಂದ ರೋಗಾಣುಗಳಿಗೆ ಆತ್ಮಹತ್ಯೆಯೆಂದೇ ಅನಿಸುವುದು. ಮರಣ ಒಂದು ಅಪಘಾತ. ಅಪಘಾತವನ್ನು ಯಾರೂ ಬಯಸುವುದಿಲ್ಲ, ಅದು ನಡೆದರೆ ತಪ್ಪಿಸುವ ಪ್ರಶ್ನೆಯೇ ಬರುವುದಿಲ್ಲ. ಅಪಘಾತದಲ್ಲಿ ಎರಡೂ ಕಡೆಯವರಿಗೂ ಹಾನಿ ಎಂಬುದು ಖಚಿತ. ಮಾನವನ ಸಂಬಂಧಿಕರು ದುಃಖಿಸಿದಂತೆ ರೋಗಾಣುಗಳ ಸಂಬಂಧಿಕರೂ ದುಃಖಿಸುವುದು ಸಾಧ್ಯವಿದೆ. ಮಾನವನ ದೇಹ ಅವುಗಳಿಗೆ ಒಂದು ರೀತಿಯಿಂದ ಮಾತೃಭೂಮಿ. ಅಲ್ಲಿಯೇ ಹುಟ್ಟುತ್ತವೆ. ಅಲ್ಲಿಯೇ ಬೆಳೆಯುತ್ತವೆ. ತಮಗೆ ಬೇಕಾದ ಹಾಗೆ ದೇಹದಲ್ಲಿ ಕೃಷಿಮಾಡುತ್ತವೆ. ಅವಶ್ಯವಿರುವ ಹದವಾಗುವಂಥ ಗೊಬ್ಬರ ಹಾಕುತ್ತವೆ. ಸರಿಯಾಗಿ ವಾತಾವರಣ ಬರುವಂತೆ ಪ್ರಯತ್ನಿಸುತ್ತವೆ. ಇದೆಲ್ಲವನ್ನೂ ಕೇವಲ ತಮ್ಮ ಪೀಳಿಗೆಯ ಅಭಿವೃದ್ಧಿಗೆಂದು ಮಾತ್ರ ಮಾಡುತ್ತವೆಯೇ ವಿನಾ ಮಾನವನ ಮೇಲಿನ ಸಿಟ್ಟಿಗಾಗಿ, ಸೇಡಿಗಾಗಿ ಅಲ್ಲ. ಅವನ ಮೇಲಿನ ದ್ವೇಷಕ್ಕಾಗಿ ಅಲ್ಲ. ಮಾನವನ ನಿರೋಧಕ ಶಕ್ತಿಯ ಎದುರಿನಲ್ಲೇ ನಿಂತು ತನ್ನ ಪೀಳಿಗೆಯನ್ನು ಹೆಚ್ಚಿಸುವುದು ರೋಗಾಣುಗಳ ಸಾಹಸವೇ ಸರಿ. ಈ ಈ ರೋಗಾಣುಗಳ ತಂತ್ರಗಳನ್ನು ಅವು ಉಪಯೋಗಿಸುವ ಬುದ್ಧಿಯ ಬಗ್ಗೆ ನಾನು ಇಲ್ಲಿ ಚರ್ಚಿಸಿರುವೆನು. ಅದನ್ನೇ "ಜಾಣ ರೋಗಾಣುಗಳು" ಎಂದು ಕರೆಯಲಾಗಿದೆ.

ರೋಗಾಣುಗಳು ತಮ್ಮ ಮಿತಿಯನ್ನು ಬಿಟ್ಟು ದೇಹದಲ್ಲಿ ಅತಿಯಾಗಿ ಬೆಳೆದರೆ ಅವುಗಳಿಗೂ ಸುಖವಿಲ್ಲ. ದೇಹವು ಜರ್ಜರಿತವಾಗಿ ವ್ಯಕ್ತಿ ಮರಣವನ್ನು ಅಪ್ಪಬಹುದು. ವ್ಯಕ್ತಿ ಮರಣ ಹೊಂದಿದ ತಕ್ಷಣವೇ ರೋಗಾಣುಗಳ ಬೆಳವಣಿಗೆಯೂ ನಿಂತುಹೋಗುವುದು. ಅವುಗಳಿಗೂ ಅದು ಬೇಡವಾದ ಸಂಗತಿ. ಇದೇ ತತ್ವವನ್ನು ನಾವು ನಮಗೆ ಹೋಲಿಸಿದರೆ ಭಯವಾಗುವುದು. ಮನುಷ್ಯರು ಒಂದು ಜೀವಿಗಳು. ಈ ಭೂಮಿ ಮಾನವ ದೇಹವಿದ್ದಂತೆ. ದೇಹದಲ್ಲಿ ರೋಗಾಣುಗಳು ಮಿತಿಯಿಲ್ಲದೆ ಬೆಳೆದರೆ ತೊಂದರೆಯಾದಂತೆ ಭೂಮಿಯ ಮೇಲೆ ಜನರು ಮಿತಿಮೀರಿ ಬೆಳೆದರೆ ಮಿತಿಮೀರಿ ವಿಷಗಳನ್ನು ಬಿಟ್ಟರೆ ದೇಹವೆಂಬ ಈ ಭೂಮಂಡಲಕ್ಕೂ ನಮ್ಮ ದೇಹದ ಗತಿಯೇ? ಎಂಬ ಭೂತ ಕಾಣಿಸುತ್ತದೆ. ಸಧ್ಯಕ್ಕಂತೂ ಈ ವಿಷಯವನ್ನು ಇಲ್ಲಿಗೆ ತಡೆದು ಕೇವಲ ರೋಗಾಣುಗಳ ಬಗ್ಗೆ ವಿಚಾರಿಸೋಣ.

ಈ ಬರಹದಲ್ಲಿ ನಾನು ಉದಾಹರಣೆಗೆಂದು ಕೆಲವು ರೋಗಾಣುಗಳನ್ನು ಮಾತ್ರ ಆರಿಸಿಕೊಂಡಿರುವೆನು. ಅವುಗಳ ಬಗ್ಗೆ ವಿಶೇಷ ವಿವರಗಳನ್ನೂ ಕೊಟ್ಟಿರುವೆನು. ಇನ್ನುಳಿದವುಗಳ ಬಗ್ಗೆ ವಿವರಿಸಲು ಹೋಗದೇ ಕೇವಲ ಟಿಪ್ಪಣಿಗಳನ್ನು ಮಾತ್ರ ಬರೆದಿರುವೆ. ಎಲ್ಲ ರೋಗಾಣುಗಳ ಬಗ್ಗೆ ಬರೆಯುತ್ತ ಕುಳಿತರೆ ಅದೊಂದು ಬೃಹತ್ ವೈದ್ಯಕೀಯ ಗ್ರಂಥವಾಗಬಹುದು. ನಾನು ಈ ವಿಚಾರಧಾರೆಯನ್ನು ಪ್ರಾರಂಭಿಸಿರುವೆನು. ಉಳಿದವರು ಸರಿ ಎನಿಸಿದರೆ ಅದನ್ನೇ ಬೆಳೆಸಿಕೊಂಡು ಹೋಗಬಹುದು.

ಈ ವಿಚಾರಧಾರೆಯನ್ನು ವೈದ್ಯರು ಹಾಗೂ ಜನಸಾಮಾನ್ಯರು ಸ್ವಾಗತಿಸುವರೆಂದು ನಂಬಿರುವೆ.



"ಮಾನವನ ಜನಸಂಖ್ಯಾ ಸ್ಫೋಟವನ್ನು ಈ ನಡುವೆ ಗಮನಿಸಿದ್ದೀರಾ, ಅಡೆತಡೆ ಇಲ್ಲದೆ ಅವತರಿಸುವ ನವಜಾತ ಶಿಶುಗಳನ್ನು, ತುಂಬಿ ಹರಿಯುವ ಶಾಲೆಗಳನ್ನು? ಆಶ್ಚರ್ಯಕರ ಇದು, ಮನುಷ್ಯನ ಘನತೆಗೆ ಇದರಿಂದ ಎಂದಿದ್ದರೂ ಕುಂದು."

—ರಾಬಿನ್ಸನ್ ಜೆಫರ್ಸ್ (ಕವಿ)

ಕನ್ನಡ ನಾಡಿನ ಹಬ್ಬ ಹರಿದಿನಗಳು

ಎಸ್. ರೋಹಿಣಿ ಶರ್ಮ
ತ್ಯಾಗರಾಜ ಬಡಾವಣೆ, ಅಜ್ಜಂಪುರ
ತರೀಕೆರೆ, ಚಿಕ್ಕಮಗಳೂರು ೫೭೭೫೪೭

ನಮ್ಮ ಹಿರಿಯರು ಬಲು ಚತುರರು. ಕಾಲಕಾಲಕ್ಕೆ ಉತ್ತಿ-ಬಿತ್ತಿ ಬೆಳೆ ತೆಗೆದು ತಾವು ಸುಖವಾಗಿ ಬದುಕಿ ಇತರರನ್ನೂ ಬದುಕಲು ಬಿಟ್ಟವರು. "ಸರ್ವೇ ಜನಾಃ ಸುಖಿನೋಭವಂತು" ಎನ್ನುವ ವೇದವಾಕ್ಯದಂತೆ ಸುಖವಾಗಿ ಬದುಕಬೇಕೆಂಬ ಮಾನವನ ಮನಸ್ಸಿನಿಂದ ಅನೇಕ ನೈಮಿತ್ತಿಕ ವ್ರತ ಸ್ನಾನ, ದಾನ, ಉಪವಾಸ, ನಿಯಮ, ಪೂಜೆ, ಪುನಸ್ಕಾರ ಹಬ್ಬ ಹರಿದಿನಗಳ ಆಚರಣೆ ಮೂಲಕ ಅನುಷ್ಠಾನಕ್ಕೆ ತಂದುಕೊಂಡು ವರ್ಷದ ಹನ್ನೆರಡು ತಿಂಗಳಲ್ಲಿಯೂ ಹಬ್ಬ ಹುಣ್ಣಿಮೆಗಳನ್ನು ತಪ್ಪದೆ ನೆರವೇರಿಸುತ್ತಾ ಬಂದಿದ್ದು ಇದೇ ಕಾಯಕ ಇಂದೂ ಮುಂದುವರಿದೇ ಬಂದಿದೆ. ಈ ಹಬ್ಬ ಹರಿದಿನಗಳನ್ನು ಆಚರಿಸುವುದರಿಂದ ಪರಿಶುದ್ಧರಾಗಿ ನಡೆಯಲು ಪ್ರೇರಣೆ ಸಿಗುತ್ತದೆ. ಅಂತೆಯೇ ಹಬ್ಬ ಹುಣ್ಣಿಮೆ ಉದ್ದೇಶ, ಚರಿತ್ರೆ, ರಹಸ್ಯವನ್ನು ತಿಳಿದುಕೊಳ್ಳದೆ ಇದು ಕೇವಲ ಕೆಲಸವಿಲ್ಲದೆ ಮಾಡಿದ ಸಂಪ್ರದಾಯವೆಂದು ಮೂಗು ಮುರಿಯದೆ ಅದರ ರಹಸ್ಯಾರ್ಥವನ್ನು ತಿಳಿದು ಆಚರಿಸುವುದರಿಂದ ಬಹಳ ಪ್ರಯೋಜನವೂ ಇದೆ. ಆನಂದವೂ ಇದೆ.

'ಹಬ್ಬ' ಇದು 'ಪರ್ವ' ಎಂಬ ಸಂಸ್ಕೃತದ ಪ್ರಾಕೃತರೂಪ. ಇದು ಬಾಯಲ್ಲಿ ಅಪಭ್ರಂಶವಾಗಿ 'ಪಬ್ಬ' ಎಂದಾಯಿತು. ಇದೇ 'ಪಬ್ಬ' ಹಬ್ಬ ಎಂದು ರೂಪಗೊಂಡು ಕನ್ನಡ ನಾಡಿನಲ್ಲಿ ಪ್ರಚಲಿತವಾಗಿದೆ.

ಸಂಸ್ಕೃತಿಯ ಬೀಡಾದ ಭಾರತದಲ್ಲಿ ಎಲ್ಲ ಹಬ್ಬಗಳು ಸಾಮಾನ್ಯವಾಗಿ ಆಚರಣೆಯಲ್ಲಿವೆ ಜಾತ್ಯಾತೀತ ರಾಷ್ಟ್ರವಾದ ಕಾರಣ ವಿವಿಧ ಮತ ಪಂಥದವರ ಹಬ್ಬಗಳೂ ಆಚರಣೆಯಲ್ಲಿವೆ. ಹಿಂದೂಗಳು ತಮ್ಮ ಸಂಸ್ಕೃತಿಗೆ ಪೂರಕವಾದ ಹಬ್ಬ ಆಚರಿಸಿದರೆ ಮುಸಲ್ಮಾನರು "ಈದ್ ಮಿಲಾದ್, ಮೊಹರಂ, ರಂಜಾನ್ ಆಚರಿಸುತ್ತಾರೆ. ಕ್ರೈಸ್ತರು ಕ್ರಿಸ್‌ಮಸ್, ಗುಡ್‌ಫ್ರೈಡೇ ಆಚರಿಸುತ್ತಾರೆ. ಒಟ್ಟಿನಲ್ಲಿ ವರ್ಷದ ಹನ್ನೆರಡು ತಿಂಗಳಲ್ಲಿಯೂ ಪ್ರತಿ ದಿನ ಒಂದೊಂದು ಹಬ್ಬದ ಆಚರಣೆ, ಸಿಹಿಯೂಟದ ಸೀಕರಣೆ!

ಹಬ್ಬ ಬಂತೆಂದರೆ ಪ್ರತಿಯೊಬ್ಬರೂ ಉತ್ಸಾಹದ ಚಿಲುಮೆಗಳಾಗುತ್ತಾರೆ. ತಳಿರುತೋರಣಗಳಿಂದ ಮನೆಯನ್ನು ಅಲಂಕರಿಸಿದರೆ, ಸುಣ್ಣ ಬಣ್ಣ ಬಳಿದು ಮನೆ ಮುಂದೆ ಎಳೆ ಬಟ್ಟಿನ ರಂಗವಲ್ಲಿ ಇಟ್ಟು ಮಾವಿನ ಹಸಿರೆಲೆ ತೋರಣ ಕಟ್ಟಿ

ಹಬ್ಬವನ್ನು ಸ್ವಾಗತಿಸುತ್ತೇವೆ. ಹಾಗೇ ಮನೆ ಒಳಗೆ ಸಿಹಿತಿಂಡಿಗಳ ಮಹಾಪೂರ. ಒಂದೊಂದು ಹಬ್ಬದಲ್ಲೂ ವಿಶಿಷ್ಟವಾದ ಪೂಜೆ. ವಿವಿಧ ಭಕ್ಷ್ಯ-ಭೋಜ್ಯಗಳು ಹೀಗೆ ಹಬ್ಬದ ಆಚರಣೆಯ ಮೂಲಕ ಕಲೋಪಾಸನೆ. ಸೌಂದರ್ಯ ಪ್ರಜ್ಞೆ, ರಸಿಕತನ, ಸಾಮಾಜಿಕ ಚೈತನ್ಯದ ಜಾಗೃತಿಯ ಉತ್ಥಾನಕ್ಕೆ ಹಬ್ಬಗಳು ಪ್ರತೀಕವಾಗಿದೆ.

ಒಂದೊಂದು ಋತುವಿನಲ್ಲೂ ಒಂದೊಂದು ಹಬ್ಬದ ವೈಭವ

ವಸಂತ ಋತುಗಳ ರಾಜ. ಎಲ್ಲಿ ನೋಡಿದರೂ ಪ್ರಕೃತಿಯು ಹಸಿರು ಸೀರೆಯನ್ನುಟ್ಟು ನಲಿವಪರಿ, ಕೋಗಿಲೆಯ ಕೂಗಿನ ಶುಭದಾಯಕವಾದ ಮಾರುತ. ಚೈತ್ರ ಚಿಗುರಿನ ಮೊದಲನೆಯ ದಿನ ಆರಂಭವಾಗುವ ಯುಗಾದಿ ಚತುರ್ಮುಖ ಬ್ರಹ್ಮದೇವ, ಶ್ವೇತ, ವರಾಹಕಲ್ಪದಲ್ಲಿ ಸೃಷ್ಟಿಯನ್ನು ಆರಂಭಿಸಿದನೆಂಬ ಕಲ್ಪನೆಯೊಂದಿಗೆ ನವವರ್ಷಾರಂಭಕ್ಕೆ ಅಭೂತಪೂರ್ವ ಸ್ವಾಗತ.

> ಯುಗ ಯುಗಾದಿ ಕಳೆದರೂ
> ಯುಗಾದಿ ಮರಳಿ ಬರುತಿದೆ
> ಹೊಸವರುಷಕೆ ಹೊಸ ಹರುಷವ
> ಹೊಸತು ಹೊಸತು ತರುತಿದೆ

ಎಂಬುದಾಗಿ ಕವಿ ಅಂಬಿಕಾತನಯದತ್ತರು ಮನೋಜ್ಞವಾಗಿ ಹಾಡಿದ್ದಾರೆ. ಇನ್ನೊಬ್ಬ ಕವಿ

> ಬಂದ ಚೈತ್ರದ ಹಾದಿ ಕೆರೆದಿಹೆ
> ಬಣ್ಣ ಬೆಡಗಿನ ಮೋಡಿಗೆ
> ಹೊಸತು ವರ್ಷದ ಹೊಸತು ಹರ್ಷದ
> ಬೇವು ಬೆಲ್ಲದ ದೀಡಿಗೆ

ಎಂಬುದಾಗಿ ಯುಗಾದಿಯಲ್ಲಿ ಬೇವು ಬೆಲ್ಲಕ್ಕೆ ಪ್ರಾಶಸ್ತ್ಯ ಕೊಟ್ಟಿದ್ದಾರೆ. ಈ ರೀತಿ ಒಬ್ಬೊಬ್ಬ ಕವಿಯೂ ಒಂದೊಂದು ವಿಧದಲ್ಲಿ ಹಾಡಿದ್ದು, ಯುಗಾದಿ ಹೊಸ ವರ್ಷಕ್ಕೆ ಆದಿಯಂತೂ ಹೌದು!

ಈ ಯುಗಾದಿಯಲ್ಲಿ ಬೇವು-ಬೆಲ್ಲಕ್ಕೆ ಪ್ರಾಶಸ್ತ್ಯ. ಬಾಳಿನಲ್ಲಿ ಸಿಹಿ-ಕಹಿ ಸಮರಸವಾಗಿದ್ದರೇನೇ ಬದುಕು ಎಂಬುದು ಯುಗಾದಿಯ ಸಂಕೇತ. ಇದನ್ನು ಕೆಲವರು ಚಾಂದ್ರಮಾನ ರೀತ್ಯಾ ಆಚರಿಸಿದರೆ ಇನ್ನು ಕೆಲವು ಕಡೆ ಸೌರಮಾನ ರೀತ್ಯ ಆಚರಿಸುತ್ತಾರೆ. ಪ್ರಾತಃಕಾಲ ಎದ್ದು ಅಭ್ಯಂಜನ ಸ್ನಾನ ಮಾಡಿ ದೇವರನ್ನು ಪ್ರಾರ್ಥಿಸಿ, ಗುರು ಹಿರಿಯರಿಗೆ ನಮಿಸಿ ಆಶೀರ್ವಾದ ಪಡೆದರೆ ಮಧ್ಯಾಹ್ನ ಪಂಚಾಂಗ ಶ್ರವಣ ಮಾಡಬೇಕು. ರೈತರು ಆ ದಿನ ತಮ್ಮ ಕೃಷಿ ಪರಿಕರಗಳನ್ನು ಪೂಜಿಸಿ, ಬಿತ್ತನೆ ಮಾಡುವ ಎಲ್ಲಾ ಧಾನ್ಯಗಳನ್ನು ಮಾದರಿಗಾಗಿ ಬಿತ್ತಿ, ಪೂಜಿಸಿ ಆರಂಭ ಕೈಗೊಳ್ಳುತ್ತಾರೆ. ಹಬ್ಬದ ಮಾರನೇ ದಿನ ಹಬ್ಬದ ಕರಿ ಅಥವಾ ವರ್ಷದ ತೊಡಕು.

ಚೈತ್ರಶುಕ್ಲ ನವಮಿಯಂದು ರಾವಣ ಸಂಹಾರಕ್ಕಾಗಿ ಪರಬ್ರಹ್ಮ ದಾಶರಥಿರಾಮನಾಗಿ ಅವತರಿಸಿದನೆಂಬ ನಂಬಿಕೆಯಿಂದ ರಾಮನವಮಿ ಆಚರಣೆ ಮಾಡುತ್ತಾರೆ. ಬೆಲ್ಲದ ಪಾನಕ, ಹೆಸರುಬೇಳೆಕೋಸಂಬರಿ ಇದಕ್ಕೆ ಪ್ರಧಾನ. ರಾಮ ಭಜನೆ, ಮನರಂಜನೆ ಕಾರ್ಯಕ್ರಮದೊಂದಿಗೆ ರಾಮ ಪಟ್ಟಾಭಿಷೇಕಕ್ಕೆ ಹಬ್ಬದ ಮುಕ್ತಾಯ. ಚೈತ್ರ ಶುಕ್ಲ ಪಾಡ್ಯಮಿಯಿಂದ ನವಮಿವರೆಗೆ ವಸಂತ ನವರಾತ್ರಿ ಆಚರಣೆಯಲ್ಲಿದೆ.

ಚೈತ್ರಪೂರ್ಣಿಮಾ (ಮುತ್ತುಗದ ಎಲೆಯಲ್ಲಿ ಚಿತ್ರಾನ್ನ ತಿನ್ನುವುದು) ಅಕ್ಷಯ ತೃತೀಯಾ (ಶುಭಕಾರ್ಯಕ್ಕೆ ಮುಹೂರ್ತ ನೋಡುವುದೇ ಬೇಡ) ನೃಸಿಂಹ ಜಯಂತಿ, ವ್ಯಾಸಪೂರ್ಣಿಮಾ ಮುಂತಾದವು ವಸಂತ ಋತುವಿನಲ್ಲಿ ಬಂದು ಹೋಗುವ ಹಬ್ಬಗಳು.

ಗ್ರೀಷ್ಮ ಋತುವಿನ ಹಬ್ಬಗಳು

ಕಾರಹುಣ್ಣಿಮೆ, ಜೇಷ್ಠ ಮಾಸದ ಹುಣ್ಣಿಮೆ. ಹೆಣ್ಣುಮಕ್ಕಳಿಗೆ ಮುಖ್ಯವಾದ ಹಬ್ಬ. ಸಾವಿತ್ರಿ ತನ್ನ ಪತಿ ಸತ್ಯವಾನನನ್ನು ಪಡೆದ ದಿನ. ಅಂದು ಅರಳಿಮರಕ್ಕೆ ಪೂಜೆ ಪುನಸ್ಕಾರ. ಶ್ರಮದಿಂದ ಉತ್ತಿ-ಬಿತ್ತಿ ಲೋಕಕ್ಕೆ ಅನ್ನ ಕೊಡುವ ಬಸವನ ಕಾಯಕಕ್ಕೆ ಕೃತಜ್ಞತೆ ಸಲ್ಲಿಸುವ ದಿನ ಬಸವನ ಅಮಾವಾಸ್ಯೆ–ಮಣ್ಣೆತ್ತಿನ ಅಮಾವಾಸ್ಯೆ ಎಂದೂ ಹೆಸರಿದೆ. ಮಣ್ಣಿನಲ್ಲಿ ಬಸವನ ಆಕೃತಿ ಮಾಡಿ ಚಕ್ಕುಲಿ, ಕೋಡುಬಳೆ ಮಾಡುವುದು ಇದರ ವೈಶಿಷ್ಟ್ಯಗಳಲ್ಲೊಂದು.

ಆಷಾಢಮಾಸ ಬಂದೀತವ್ವ
ಖಾಸ ಅಣ್ಣಾ ಬರಲಿಲ್ಲಾ

ಗಂಡನ ಮನೆಯಲ್ಲಿರುವ ಹೆಣ್ಣುಮಗಳೊಬ್ಬಳು ರೊಟ್ಟಿಬುತ್ತಿ ಮಾಡಿಕೊಂಡು ಎಲ್ಲವನ್ನೂ ಒಪ್ಪ ಮಾಡಿ ಜೋಡಿಸಿಕೊಂಡಿರುತ್ತಾಳೆ. ಆಷಾಢದಲ್ಲಿ ಅಣ್ಣನಿಗೆ ಹೊಲಮನೆ ಕೆಲಸವಿರುವುದಿಲ್ಲ. ಆಗ ಅಣ್ಣ ತಂಗಿಯನ್ನು ನೋಡಲಿಕ್ಕೆ ಬರುವುದು ವಾಡಿಕೆ. ಅಣ್ಣನಿಗಾಗಿ ಎಲ್ಲಾ ಸಿದ್ಧತೆ ಆಗಿದೆ. ಅಣ್ಣ ಬರುವುದು ಸ್ವಲ್ಪ ತಡವಾಗಿದೆ. ಆ ಚಿಂತೆಯಲ್ಲೇ ತಂಗಿ ಅಣ್ಣ ಬಂದಿಲ್ಲವೆಂದು ಕೊರಗುತ್ತಿರುತ್ತಾಳೆ. ಇದನ್ನೇ ಜನಪದ ಕವಿಗಳು ಸೊಗಸಾಗಿ ರಚಿಸಿದ್ದಾರೆ. ತಂಗಿ–ಅಣ್ಣನ ಮನೆಗೆ ಹೋಗುವುದಕ್ಕಾಗಿ ಆಷಾಢಮಾಸದ ಬರುವಿಕೆ ಅಣ್ಣನಿಗಾಗಿ ಕಾಯುವುದು ಈ ಕವಿತೆಯಲ್ಲಿದೆ.

ಜಡಿ ಮಳೆ ಸುರಿದು ಜಲಾಶಯ ನದಿ ನಿರ್ಝರಗಳು, ಹೊಳೆ ಹಳ್ಳಗಳು ತುಂಬಿ ತುಳುಕುತ್ತಿರುತ್ತವೆ. ಆಗಲೇ ಬರುವುದು ದಕ್ಷಿಣಾಯನ ಪುಣ್ಯಕಾಲ. ಸೂರ್ಯ ಮಿಥುನ ರಾಶಿಯನ್ನು ಬಿಟ್ಟು ಕರ್ಕಾಟಕ ರಾಶಿಯನ್ನು ಪ್ರವೇಶಿಸುವ ಕಾಲವೇ ದಕ್ಷಿಣಾಯನ ಪುಣ್ಯಕಾಲ. ಮಹಾತ್ಮರೆಲ್ಲಾ ತಮ್ಮ ಸಾವಿಗಾಗಿ ಈ ಪುಣ್ಯಕಾಲವನ್ನು ಕಾಯುವರಂತೆ! ಅಂದು ಪುಣ್ಯತೀರ್ಥ ಸ್ನಾನಕ್ಕೆ ಪ್ರಾಶಸ್ತ್ಯ. ದೀಪದಾನ, ಪಿತೃತರ್ಪಣಕ್ಕೆ ಈ ವಾರ ಶುಭ ದಿನ. ಆಷಾಢ ಬಹುಳ ಅಮಾವಾಸ್ಯೆ ಆಡಿಶುಕ್ರವಾರ ಬರುತ್ತದೆ. ಆಷಾಢ ಶುಕ್ಲ ಏಕಾದಶಿ ಮಹಾವಿಷ್ಣು ಮಲಗುವ ದಿನ ಚಾತುರ್ಮಾಸದ ವ್ರತಾರಂಭ. ಇದಕ್ಕೆ ಪ್ರಥಮ ಏಕಾದಶಿ ಎಂದೂ ಕರೆಯುತ್ತಾರೆ.

ವರ್ಷ ಋತುವಿನ ಆಗಮನ

ಶ್ರಾವಣ ಬಂತು ಶ್ರಾವಣ
ಬಂತೂ ನಾಡಿಗೇ ಬಂತು ಬೀಡಿಗೆ

ಎನ್ನುವ ಕವಿ ಬೇಂದ್ರೆಯವರ ಹಾಡು ಶ್ರಾವಣಕ್ಕೆ ಸ್ಫೂರ್ತಿ. ಶ್ರಾವಣ ಬಂತೆಂದರೆ ಹಬ್ಬಗಳ ಸಾಲೇಸಾಲು. ಶ್ರಾವಣ ಮಾಸದ ಶುಕ್ರವಾರಗಳೆಲ್ಲವೂ ಲಕ್ಷ್ಮೀ ಪೂಜೆಗೆ

ಮೀಸಲು. ಗೋಧೂಳಿಯ ಲಗ್ನದಲ್ಲಿ ಪೂಜೆ ಪ್ರಾರಂಭಿಸಿ ಅಲಂಕೃತವಾದ ಮಂಟಪದಲ್ಲಿ ರತ್ನಾಭರಣ, ಮಂಗಲ ದ್ರವ್ಯಗಳಿಂದ ಸಿಂಗರಿಸಿರುವ ಲಕ್ಷ್ಮೀ ಪ್ರತಿಕೃತಿ ಇಟ್ಟು ವರಮಹಾಲಕ್ಷ್ಮಿ ಪೂಜೆಯನ್ನು ಶೋಡಶೋಪಚಾರಗಳಿಂದ ಪೂಜಿಸಿ ಮೊರದಲ್ಲಿ ಬಾಗಿನಕೊಟ್ಟು ಮುತ್ತೈದೆಯರಿಗೆ ಸುವಾಸಿನಿ ಸಂತರ್ಪಣೆಯೂ ನಡೆಯುತ್ತದೆ.

ಶ್ರಾವಣ ಶನಿವಾರಗಳು ತಿರುಪತಿ ತಿಮ್ಮಪ್ಪನಿಗೆ ಮೀಸಲು ವಾರಗಳು. ಮಂಗಳಗೌರಿ, ನಾಗರಚೌತಿ, ನಾಗಪಂಚಮಿ ಸಿರಿಯಾಳಷಷ್ಠಿ ಈ ಮಾಸದಲ್ಲೇ ಬರುವುದಾದರೂ 'ನೂಲು ಹುಣ್ಣಿಮೆ' ಅಥವಾ 'ಶ್ರಾವಣೀ' ಗಂಡಸರು ಆಚರಿಸುವ ಹಬ್ಬ. ವೇದೋಕ್ತ ಕರ್ಮಗಳಲ್ಲಿ ವರ್ಷದಲ್ಲಾಗಿರುವ ಲೋಪದೋಷಗಳ ನಿವಾರಣಾರ್ಥವಾಗಿ ಮಾಡುವ ಪ್ರಾಯಶ್ಚಿತ್ತವೆಂದು ಆಸ್ತಿಕರ ನಂಬಿಕೆ. ಹೊಸ ಯಜ್ಞೋಪವೀತವನ್ನು ಧರಿಸಿ ದೇವ ಪಿತೃ-ಋಷಿಗಳಿಗೆ ತರ್ಪಣ ಕೊಡುವ ಹಬ್ಬ. ಇದನ್ನೇ 'ರಾಖೀ' ಅಥವಾ 'ರಕ್ಷಾಬಂಧನ'ವೆಂದೂ ಆಚರಿಸುವರು. ಕೃಷ್ಣ ದುಷ್ಟ ಶಕ್ತಿಗಳ ದಮನ, ಶಿಷ್ಟರ ಪೋಷಕನಾಗಿ ಅವತರಿಸಿದ ರೋಹಿಣಿ ನಕ್ಷತ್ರದಲ್ಲಿ ಅಷ್ಟಮಿ ದಿನ ಜನಿಸಿದ್ದ ಕೃಷ್ಣ ಜನ್ಮಾಷ್ಟಮಿ. ಉಂಡೆ, ಚಕ್ಕುಲಿ ಮೊಸರವಲಕ್ಕಿ ನಿವೇದಿಸಿ ಕೃಷ್ಣನಿಗೆ ಪೂಜೆ ಸಲ್ಲಿಸುತ್ತಾರೆ. ಈ ಹಬ್ಬವನ್ನು ಚಾಂದ್ರ-ಸೌರಮಾನ ರೀತ್ಯ ಆಚರಿಸುವವರಿದ್ದಾರೆ. ಉಡುಪಿಯಲ್ಲಿ ಇದರ ವೈಭವವನ್ನು ಇಂದೂ ಕಾಣಬಹುದಾಗಿದೆ.

ಹಾ! ಬಂದಿತು ಸ್ವರ್ಣಗೌರಿ ಪೂಜೆ. ಗಂಡಸರಿಗೇಕೆ ಗೌರಿದುಃಖ ಎನ್ನುವಂತೆ ಗಂಡಸರ ಹಬ್ಬ ಇದಲ್ಲ. ಹೆಂಗಸರ ಸಂಭ್ರಮದ ಹಬ್ಬ, ಸೌಭಾಗ್ಯಪ್ರದವಾದ ವ್ರತ. ಗೌರಿ ಪ್ರತಿಮೆಯನ್ನಿಟ್ಟು ಸಕಲ ಪೂಜಾ ವಿಧಿವಿಧಾನದೊಂದಿಗೆ ಗೌರಿವ್ರತ ಕಥೆಯನ್ನು ಹೇಳುತ್ತಾರೆ. ಮೊರದ ಬಾಗಿನ ಈ ಹಬ್ಬದಲ್ಲಿ ಮುಖ್ಯವಾದದ್ದು. ಆಗತಾನೆ ಮದುವೆಯಾದ ಹೆಣ್ಣು ಮಕ್ಕಳು ಗೌರಿವ್ರತವನ್ನು ಕೈಗೊಂಡು ಹತ್ತೊಂಬತ್ತು ಮೊರ ಬಾಗಿನ ಕೊಡುವ ಸಂಪ್ರದಾಯ ಕೆಲವು ಕಡೆ ಇದೆ. ತೌರು ಮನೆಯವರು ಹೆಣ್ಣುಮಕ್ಕಳನ್ನು ಕರೆಸಿ ಬಾಗಿನ ಕೊಡಿಸುವುದು ಒಂದು ವಿಧವಾದರೆ ಅಣ್ಣನೇ ತಂಗಿಗೆ ಬಾಗಿನ ಮುಟ್ಟಿಸಿ ಬರುವ ವೈಶಿಷ್ಟ್ಯವನ್ನು ಕಾಣಬಹುದಾಗಿದೆ.

ಗಣೇಶ ಚತುರ್ಥಿ ಸರ್ವವಿಘ್ನನಿವಾರಕ. ಆದಿ ಪೂಜಿತ. ಭಕ್ತಿಯ ಜೊತೆ ಕಲಾವಂತಿಕೆಯನ್ನು ಪ್ರತಿಬಿಂಬಿಸುವ ಈ ಹಬ್ಬ ಮನೆಗಳಲ್ಲಿಮಾತ್ರವಲ್ಲದೆ ಶಾಲೆ, ಕಾಲೇಜು, ಸಂಘ ಸಂಸ್ಥೆಗಳಲ್ಲೂ ಮಾನ್ಯ. ಭಾದ್ರಪದ ಶುಕ್ಲ ಚತುರ್ಥಿ ಪ್ರಶಸ್ತವಾದ ದಿನ. ಮಣ್ಣಿನಿಂದ ತಯಾರಾಗುವ ರಂಗುರಂಗಿನ ಗಣಪತಿಯನ್ನು ಅಲಂಕೃತ ಮಂಟಪದಲ್ಲಿಟ್ಟು ಪ್ರತಿಷ್ಠಾಪಿಸಿ ಪೂಜಿಸುತ್ತಾರೆ. ಕಡುಬು ಗಣಪನ ಪ್ರಿಯವಾದ ಭಕ್ಷ್ಯ. ಚಕ್ಕುಲಿ ಮೋದಕ, ಪಂಚಕಜ್ಜಾಯ ಆಗಲೇಬೇಕು. ಕನಿಷ್ಠ ಪಕ್ಷ ಇಪ್ಪತ್ತೊಂದು ಗಣಪತಿಯನ್ನು ಮನೆಮನೆಗೂ ಹೋಗಿ ನೋಡಬೇಕೆನ್ನುತ್ತಾರೆ. ಹಿರಿಯರು ಚಂದ್ರನ ದರ್ಶನ

ನೋಡಿದರೆ ಅಪವಾದಕ್ಕೆ ಗುರಿಯಾಗುತ್ತಾರೆನ್ನುವ ಪ್ರತೀತಿ ಇರುವುದರಿಂದ ಚಂದ್ರದರ್ಶನ ನಿಷಿದ್ಧ. ಶಮಂತೋಪಾಖ್ಯಾನ ಪಠಣ ಇದಕ್ಕೆ ಪರಿಹಾರ. ಋಷಿ ಪಂಚಮಿ, ಅನಂತಪದ್ಮನಾಭ ಪೂಜೆ ಅನಂತನ ಹುಣ್ಣಿಮೆ ಇದೇ ಅವಧಿಯಲ್ಲಿ ಬರುವುದಾದರೂ ಬಹುಳದಲ್ಲಿ ಬರುವ "ಪಿತೃಪೂಜೆ" ಅಷ್ಟೇ ಮುಖ್ಯವಾದುದು. ಹದಿನೈದು ದಿನಗಳಲ್ಲಿ ಮಾಡುವ ಶ್ರಾದ್ಧ ಕರ್ಮವನ್ನು "ಪಕ್ಷ" ಎಂತಲೂ ಕರೆದು ಮಹಾಲಯ ಅಮಾವಾಸ್ಯೆಗೆ ಮುಕ್ತಾಯ ಮಾಡುತ್ತಾರೆ. ಪಿತೃಗಳಿಗೆ ತರ್ಪಣ ಬಿಡುವುದೇ ಇದರ ವಿಶೇಷತೆ.

ಶರದೃತುವಿನಲ್ಲಿ ಬರುವ ಹಬ್ಬಗಳು

ನವರಾತ್ರಿಯು ಆಶ್ವೀಜ ಶುಕ್ಲ ಪಾಡ್ಯಮಿ ದಿನದಿಂದ ದಶಮಿಯವರೆಗೆ ಬರುವ ಹಬ್ಬ ದಸರಾ. ಇದಕ್ಕೆ ಶರನ್ನವರಾತ್ರಿ ಎಂದು ಹೆಸರು. ಇದೊಂದು ನಾಡಹಬ್ಬ. ಗೊಂಬೆಪೂಜೆ, ಸರಸ್ವತಿಪೂಜೆ, ದುರ್ಗಾಷ್ಟಮಿ, ಮಹಾನವಮೀ ಇದರಲ್ಲಿ ಅಡಕವಾಗಿರುವ ಹಬ್ಬಗಳು. ಮೂಲಾ ನಕ್ಷತ್ರದ ದಿನ ಪುಸ್ತಕಗಳನ್ನಿಟ್ಟು ಪೂಜೆ ಮಾಡುತ್ತಾರೆ. ಮಹಾನವಮಿ ವಾಹನಗಳಿಗೆ ಪೂಜೆಸಲ್ಲಿಸುವ ದಿನ. ಈ ದಿನ ಶಮಿ ಪತ್ರೆಯನ್ನು ದೇವರಿಗೆ ಸಮರ್ಪಿಸಿ ಸರಸ್ವತಿಗೆ ವಿಶೇಷಪೂಜೆ ನೈವೇದ್ಯ ಮಾಡಲಾಗುವುದು. ದೊಡ್ಡ ದಿನವೇ ವಿಜಯದಶಮಿ. ಶಮೀ ವೃಕ್ಷಕ್ಕೆ ಪೂಜೆ, ಬನ್ನಿ ಹಂಚಿ ಶುಭ ಕೋರುವುದು, ಸಂನ್ಯಾಸಿಗಳು ಚಾತುರ್ಮಾಸ ಮುಗಿಸಿ ಸಂಚಾರ ಹೊರಡುವುದೆಲ್ಲಾ ಇದೇ ದಿನ. ಸರಸ್ವತಿ ವಿಸರ್ಜನೆ ಆವಾಹಿತ ಸಕಲ ದೇವತೆಗಳನ್ನು ವಿಸರ್ಜಿಸುವುದೇ ಈ ದಿನ.

ಶೀಗಿ ಹುಣ್ಣಿಮೆ ಅಥವಾ ಭೂಮಿ ಹುಣ್ಣಿಮೆ ಭೂ ತಾಯಿಗೆ ಬಯಕೆ ಊಟ ಮಾಡಿಸುವ ವಿಧಿ. ಬಗೆ ಬಗೆಯ ತಿಂಡಿ ಮಾಡಿ ಹೊಲಗದ್ದೆ ತೋಟಗಳಿಗೆ ಎಡೆಯಿಟ್ಟು ಬರುವ ದಿನ. ಆಶ್ವೀಜ ಶುಕ್ಲ ಪೂರ್ಣಿಮೆಯಂದು ಮಳೆ ಬೆಳೆಯನ್ನು ಕೊಡುವ ದೇವೇಂದ್ರನನ್ನು ತೃಪ್ತಿ ಪಡಿಸಲು ಈ ಹಬ್ಬದ ಆಚರಣೆ ಎಂಬುದು ಹಿರಿಯರ ಅನಿಸಿಕೆ.

ಬಂತು, ಬಂತು ದೊಡ್ಡ ಹಬ್ಬ ದೀಪಾವಳಿ. ಈ ಹಬ್ಬಕ್ಕೆ ಹಿನ್ನೆಲೆಯಾಗಿದೆ ನೀರು ತುಂಬುವ ಹಬ್ಬ ನರಕಚತುರ್ದಶಿ, ಬಲಿಪಾಡ್ಯಮಿ ಅಮಾವಾಸ್ಯೆಗಳ ಬಲಗೊಂಬಲು ಬರಲೇಬೇಕು. ಚತುರ್ದಶಿಯ ಹಿಂದಿನ ದಿನ ಬಚ್ಚಲು ಮನೆಯನ್ನೆಲ್ಲ ತೊಳೆದು ಹಂಡೆಗೆಲ್ಲಾ ಶೇಡಿ ಬರೆದು ನೀರು ತುಂಬುತ್ತಾರೆ. ಇದಕ್ಕೊಂದು ಐತಿಹ್ಯವಿದೆ. ಪರಶಿವನಿಗೆ ಜಲಂಧರನೆಂದರೆ ಭಯ. ಈ ಭಯದಿಂದ ಪರಶಿವ ಮಾಲಿಂಗನ ಬಳ್ಳಿಯಲ್ಲಿ ಅವಿತಿದ್ದು ಇದನ್ನು ನೋಡಿದ ಪಾರ್ವತಿ ನೀರಿನ ಹಂಡೆಯ ಸುತ್ತಲೂ ಆ ಬಳ್ಳಿಸುತ್ತಿಟ್ಟು ಆ ದುಷ್ಟನ ಕೈಯಿಂದ ಪರಶಿವ ಪಾರಾಗುವಂತೆ ಮಾಡುತ್ತಾಳೆ. ಇದೇ ದೀಪಾವಳಿ ಹಬ್ಬಕ್ಕೆ ನಾಂದಿ.

ನರಕಚತುರ್ದಶಿ ನರಕಾಸುರನ ಸಂಹಾರದ ದಿನ. ಅಳಿಯಂದಿರಿಗೆ ಪ್ರಾಶಸ್ತ್ಯ. ಬಾಣ ಬಿರುಸುಗಳ ಅಬ್ಬರ ಇಂದಿನಿಂದಲೇ ಆರಂಭ. ವಾಮನಾವತಾರದ ಕಥೆಯ ಹಿನ್ನೆಲೆ

ಯೊಂದಿಗೆ ಗೋಪಾದ್ಯ ಬಲಿಪಾಡ್ಯದ ಆಚರಣೆ. ದೀಪ+ಆವಲಿ=ದೀಪಾವಳಿ. ರಾತ್ರಿ ಹಬ್ಬ ಕಳಿಸುವ ಶಾಸ್ತ್ರ. ಅಂಟಿಕೆ–ಪಂಟಿಕೆ (ಹಬ್ಬ ಹಾಡುವವರು)ಯುವರಜನಪದ ಸಂಸ್ಕೃತಿಯ ಉಳಿವು ಎಲ್ಲಾ ಈ ಹಬ್ಬದಲ್ಲೆ 'ಹಬ್ಬ ತಪ್ಪಿದರೂ ಹೋಳಿಗೆ ತಪ್ಪದು' ಎನ್ನುವ ವಾಡಿಕೆ ಮಾತಿನಂತೆ ಈ ಹಬ್ಬಕ್ಕೆ ಹೋಳಿಗೆ ಆಗಬೇಕು. ಕಾರ್ತಿಕ ಶುದ್ಧ, ಏಕಾದಶೀ ದಿವಸ ಅಂಗಳದ ಬೃಂದಾವನಕ್ಕೆ ನೆಲ್ಲಿಟೊಂಗೆ ನೆಟ್ಟು ದ್ವಾದಶಿ ದಿನ ಪೂಜೆ ಮಾಡುತ್ತಾರೆ. ಇದನ್ನು "ತುಳಿಸಿ ವಿವಾಹ"ವೆಂದೂ ಕರೆಯುವರು. ಚಾತುರ್ಮಾಸದಲ್ಲಿ ಮಲಗಿದ್ದ ವಿಷ್ಣು ಈಗಲೇ ಏಳುವುದರಿಂದ 'ಉತ್ಥಾನ ದ್ವಾದಶಿ' ಎಂದು ಹೆಸರು ಬಂದಿದೆ. ದೀಪಾವಳಿ ರಾತ್ರಿಯಿಂದಲೇ ದೀಪೋತ್ಸವ ನಡೆಯುವುದರಿಂದ ಕಾರ್ತೀಕ ಬಹುಳ ಅಮಾವಾಸ್ಯೆಗೆ ಕಡೆಯ ಕಾರ್ತೀಕವೆಂದು ಹೆಸರು. ಎಲ್ಲೆಡೆಗೂ ದೀಪೋತ್ಸವ—ತೆಪ್ಪೋತ್ಸವಗಳು ನಡೆಯುತ್ತವೆ.

ವಸಂತ, ಗ್ರೀಷ್ಮ, ವರ್ಷ. ಋತುಗಳೆಲ್ಲಾ ಮುಗಿದು ಹೇಮಂತಕ್ಕೆ, ಕಾಲಿಟ್ಟಿದೆ. ಆಗ ಬರುವುದು ಸ್ಕಂಧ ಷಷ್ಠಿ ಅಥವಾ ಚಂಪಾಷಷ್ಠಿ. ಸುಬ್ರಹ್ಮಣ್ಯ ಸ್ವಾಮಿಯ ಹೆಸರಿನಲ್ಲಿ ವಿಶೇಷಪೂಜೆ. ಸುಬ್ರಾಯನ ಷಷ್ಠಿ ಎಂದು ಮತ್ತೊಂದು ಹೆಸರಿದೆ. ಬ್ರಹ್ಮಚಾರಿಗೆ ಭೋಜನ ಹಾಕುವುದು ಇದರ ವಿಶೇಷತೆ. ಹನುಮಜ್ಜಯಂತಿ ಮಾರ್ಗಶಿರ ಪೂರ್ಣಿಮ ಎಳ್ಳಮವಾಸ್ಯೆ, ಧನುರ್ಮಾಸಗಳೆಲ್ಲಾ ಮುಗಿದು ಮಕರ ಸಂಕ್ರಾಂತಿಗೆ ಬಂದಿದ್ದೇವೆ. ಇದು ಸುಗ್ಗಿಯ ಹಬ್ಬ. ಸೂರ್ಯ ಮಕರರಾಶಿಗೆ ಪ್ರವೇಶಿಸುವ ದಿನ. ಉತ್ತರಾಯಣ ಪುಣ್ಯಕಾಲವೆಂದೂ ಎಳ್ಳುಬೀರಿ ಒಳ್ಳೆಯ ಮಾತನಾಡುವುದು ಈ ಹಬ್ಬದ ಸಂಕಲ್ಪ. ಇಂದು ಸ್ವರ್ಗದ ಬಾಗಿಲು ತೆರೆಯುತ್ತದೆ ಎಂಬ ನಂಬಿಕೆ ಜನರಲ್ಲಿದೆ.

ಶಿಶಿರ ಋತು ಮಾಘಮಾಸದ ಅಂತಿಮ ಘಟ್ಟ. ಈಗ ಬರುವುದು ರಥಸಪ್ತಮಿ ಸೂರ್ಯ ಉಪಾಸನೆ ಇಲ್ಲಿ ಮುಖ್ಯ. ಸೂರ್ಯರಥಕ್ಕೆ ಪೂಜೆ, ಬಿಳಿ ಎಕ್ಕದ ಎಲೆಯನ್ನು ಧರಿಸಿ ಸ್ನಾನಮಾಡುವ ವಿಧಿ ಇದೆ. ಅರ್ಕಪುಷ್ಪ ಸೂರ್ಯನಿಗೂ ಪ್ರಿಯವಾದದ್ದು ಹಾಗೂ ಆರೋಗ್ಯದ ದೃಷ್ಟಿಯಿಂದಲೂ ಬಹು ಉಪಯೋಗಿ ಆಗಿದೆ.


ಮಾಘ ಶುಕ್ಲ ಏಕಾದಶಿಯು ವಿಶೇಷವಾದ ಏಕಾದಶಿ. ಈ ಏಕಾದಶಿಯಲ್ಲಿ ಉಪವಾಸಮಾಡಿದರೆ ಉಳಿದ ಏಕಾದಶಿಗಳ ಉಪವಾಸ ಫಲ ಬರುವುದಂತೆ. ಏಕಾದಶಿ ವ್ರತದ ದಿವಸ ಸಂಕಲ್ಪಪೂರ್ವಕ ಸ್ನಾನ ಮಾಡಿ ಶ್ರೀ ಕೃಷ್ಣನನ್ನು ಆರಾಧಿಸಿದರೆ ಸನ್ಮಾರ್ಗದೊರೆಯುವುದೆಂಬ ನಂಬಿಕೆ ಇದೆ.

ಶಿವರಾತ್ರಿ ಪ್ರತಿ ತಿಂಗಳು ಬರುವುದಾದರೂ ಅದು ಗಣನೆಗೆ ಇಲ್ಲ. ಆದರೆ ಮಾಘಮಾಸದ ಶಿವರಾತ್ರಿ ಮಹಾಶಿವರಾತ್ರಿ ಬಿಲ್ವಪತ್ರೆಗಳಿಂದ ಈಶ್ವರನನ್ನು ನಾಲ್ಕು ಯಾಮಗಳಲ್ಲಿ ಪೂಜಿಸಿ ರಾತ್ರಿ ಜಾಗರಣೆ ಮಾಡುವರು.

ಹೋಳಿಹಬ್ಬ ಫಾಲ್ಗುಣ ಶುಕ್ಲ ಪಕ್ಷದಲ್ಲಿ ಬರುವುದು. ಈ ಹಬ್ಬದ ಆಚರಣೆಯ ಹಿನ್ನಲೆಯಾಗಿ ಕೆಲವು ಕಥೆಗಳಿವೆ. ಭಕ್ತಾಗ್ರಣಿ ಪ್ರಹ್ಲಾದನಿಗೆ ಹೋಲಿಕಾ ಎಂಬ ರಾಕ್ಷಸಿಯಿಂದ ಬಹಳ ಹಿಂಸೆ ಆಗುತ್ತಿತ್ತು.

ಭಕ್ತಾದಿಗಳೆಲ್ಲಾ ಕಟ್ಟಿಗೆ ಕೋಲುಗಳಿಂದ ಬಡಿದು ಸಾಯಿಸಿ ಊರ ಮಧ್ಯದಲ್ಲಿ ಸುಟ್ಟು ಹಾಕುತ್ತಾರೆ. ಅಂದು ಕಾಮದಹನ ನಡೆಯುತ್ತದೆ. ಮದನೋತ್ಸಾಹ ಎಂದು ಆಚರಿಸುತ್ತಾರೆ. ಸಾಮಾಜಿಕ ಹಬ್ಬಗಳಲ್ಲಿ ಇದಕ್ಕೊಂದು ವಿಶಿಷ್ಟಸ್ಥಾನವಿದೆ. ಸಕಲಕಲೆಗಳಿಗೂ ಅವಕಾಶವಿದೆ.

ಹೀಗೆ ಸರ್ವಋತುಗಳಲ್ಲೂ ಹಲವಾರು ಸಣ್ಣ ದೊಡ್ಡ ಹಬ್ಬಗಳು ಬಂದು ಋತುಚಕ್ರದ ತಿರುವನ್ನು ಸಂಪೂರ್ಣಗೊಳಿಸುತ್ತ ಮಾನವನಿಗೆ ಪ್ರತಿನಿತ್ಯ ಸಿಹಿ ಊಟ ಉಣಿಸುತ್ತಾ, ಕಾಲಚಕ್ರ ಉರುಳುತ್ತಲೇ ಇದೆ. ಮಾನವನಾದರೂ ಏನೇಬರಲಿ, ಹೇಗೇ ಇರಲಿ ಹಿರಿಯರು ಹಾಕಿದ ಹಾದಿ ನಮ್ಮದೆಂದು ಹಬ್ಬದ ಆಚರಣೆಯನ್ನು ಆಚರಿಸುತ್ತ ಬಂದಿರುವುದು ಹೆಮ್ಮೆಯ ವಿಷಯವೇ ಆಗಿದೆ.



ಕ್ರಿ. ಶ. ಆರಂಭವಾಗುವ ಮುನ್ನ ವಿಶ್ವದ ಜನಸಂಖ್ಯೆ ಕೇವಲ ೨೦೦ ರಿಂದ ೪೦೦ ದಶಲಕ್ಷವಿತ್ತು.

ಕ್ರಿ. ಶ. ೧೭೫೦ರ ಹೊತ್ತಿಗೆ ಈ ಜನಸಂಖ್ಯೆ ಸುಮಾರು ೭೨.೫ ಕೋಟಿಯ ಮಟ್ಟಕ್ಕೆ ಏರಿತು.

೧೮೩೦ರ ವೇಳೆಗೆ ವಿಶ್ವದ ಜನಸಂಖ್ಯೆ ೧೦೦ ಕೋಟಿ (೧ ಬಿಲಿಯನ್) ಆಯಿತು.

೧೯೩೦ರ ವೇಳೆಗೆ ಅದು ೨ ಬಿಲಿಯನ್ ಆಗಿ ಕೇವಲ ೩೦ ವರ್ಷಗಳ ಅಂತರದಲ್ಲಿ ಅಂದರೆ ೧೯೬೧ರ ಹೊತ್ತಿಗೆ ೩ ಬಿಲಿಯನ್ ಆಯಿತು. ಇಪ್ಪತ್ತು ವರ್ಷಗಳಲ್ಲಿ ೪.೪ ಬಿಲಿಯನ್ ಆಗಿ, ೧೯೮೭ರ ಹೊತ್ತಿಗೆ ವಿಶ್ವದ ಜನಸಂಖ್ಯೆ ೫ ಬಿಲಿಯನ್ ಆಗಿ ಮುಂದುವರಿದಿದೆ. ಹೀಗೆ ಜನಸಂಖ್ಯೆ ಏರುತ್ತಿದ್ದರೆ ಕೇವಲ ೩೫ ವರ್ಷಗಳಲ್ಲಿ ಇದು ದ್ವಿಗುಣವಾಗುವ ಸಾಧ್ಯತೆ ಇದೆ. ಹೀಗೆ ನಿರಂತರವಾಗಿ ಸೇರ್ಪಡೆಯಾಗುತ್ತಿರುವವರ ಮೂಲಭೂತ ಅವಶ್ಯಕತೆಗಳನ್ನು ಪೂರೈಸಲು ಸಾಧ್ಯವೆ?

ಅಂಬಿಕಾ ಪ್ರದಾನಿಸಿದ ಉಡುಗೊರೆ

ಜಿ. ವೈದೇಹಿ

೩೫೮, ನವಿಲು ಮುಖ್ಯ ರಸ್ತೆ
ಕುವೆಂಪುನಗರ
ಮೈಸೂರು–೫೭೦ ೦೨೩

"ಅದೃಶ್ಯ ಲೋಕದ ಅನೂಹ್ಯ ರೂಪದ ಅನಂತ ಕಾಲದ ಯಾತ್ರಿಕರೇ! ಮಣ್ಣಿನ ಮನದಲಿ ಹೊನ್ನನೆ ಬೆಳೆಯುವ ಅಪೂರ್ವ ತೇಜದ ಮಾಂತ್ರಿಕರೇ!" ಎಂದರು ಗೋಪಾಲಕೃಷ್ಣ ಅಡಿಗ. ಅಂಬಿಕ ಅದೃಶ್ಯ ಲೋಕದಿಂದ ಬಂದಳು, ಅನೂಹ್ಯ ರೂಪದಲ್ಲಿ ಮರೆಯಾಗಿ ಅನಂತಕಾಲಲೀನಳಾದಳು. ಆದರೆ ಅವಳ ಸ್ಮರಣೆ ಚಿರಕಾಲ ಹೊಸ ಭಾವನೆಗಳಿಗೆ ಕಾರಣವಾಗುವುದು.

ಶರತ್ಕಾಲದ ಒಂದು ದಿನ ಇಂಗ್ಲೆಂಡಿನ ರೆಜೆಂಟ್ಸ್ ಪಾರ್ಕಿನ ಲಂಡನ್ ಮೃಗಾಲಯದಲ್ಲಿ ಸುಮಾರು ೫೦೦ ಜನರು ಒಂದು ಪ್ರತಿಮೆಯ ಮುಂದೆ ನಿಂತಿದ್ದರು. ಪ್ರತಿಮೆಗೆ ಬಿಳಿ ಬಣ್ಣದ ರೇಷ್ಮೆ ಬಟ್ಟೆಯನ್ನು ಮುಚ್ಚಲಾಗಿತ್ತು. ಗುಂಪನ್ನು ನೋಡಿ ೬೩ ವರ್ಷದ ಉದ್ಯಮಪತಿ ಸ್ವರಾಜ್ ಪಾಲ್‌ಗೆ ಹೆಮ್ಮೆಯೂ ಸಂಕಟವೂ ಒಮ್ಮೆಲೇ ಆಯಿತು.

ನವೆಂಬರ್ ೧೮ರ ಬೆಳಿಗ್ಗೆ ಅತನ ಪತ್ನಿಯೂ ಆರು ಮೊಮ್ಮಕ್ಕಳೂ ಸೇರಿದಂತೆ ಆತನ ಕುಟುಂಬದವರೆಲ್ಲರೂ, ಭಾರತದ ರಾಯಭಾರಿಗಳಂತಹ ಉನ್ನತ ಅಧಿಕಾರಿಗಳೂ, ಪತ್ರಕರ್ತರೂ, ಪತ್ರಿಕಾ ಛಾಯಾಗ್ರಾಹಕರೂ ನೆರೆದಿದ್ದರು.

ಸ್ವರಾಜ್ ಪಾಲ್ ಮಾತನಾಡಲು ಪ್ರಾರಂಭಿಸುತ್ತಿದ್ದಂತೆಯೇ ವಾತಾವರಣದಲ್ಲಿ ಮುಸುಕಿದ್ದ ಮಂಜು ಕರಗಿ ವಾತಾವರಣ ತಿಳಿಯಾಯಿತು. ಆದರೆ ಚಳಿ ಪ್ರಾರಂಭವಾಯಿತು. ಸ್ವರಾಜ್ ತಾನು ಬರೆದು ತಂದಿದ್ದ ಕಾಗದದ ಕಡೆ ನೋಡುತ್ತಿದ್ದರೂ ಅಕ್ಷರಗಳನ್ನು ಓದಲಾಗಲಿಲ್ಲ. ಬದಲಾಗಿ ಕಣ್ಣಲ್ಲಿ ನೀರು ತುಂಬಿಕೊಂಡು ಹೃದಯದಿಂದ ಬಂದ ಕೆಲವು ಮಾತುಗಳನ್ನು ಮಾತ್ರ ನುಡಿದನು.

"ಅಂಬಿಕಾ", ಸ್ವರಾಜ್ ನುಡಿಯುತ್ತಾ, "ನೀನು ಎಲ್ಲೇ ಇರು, ಏನಾದರೂ ಆಗಿರು ಆದರೆ ಒಂದನ್ನು ಮಾತ್ರ ನೆನಪಿಟ್ಟುಕೊ. ಇಲ್ಲಿರುವ ನಿನ್ನ ತಂದೆ, ತಾಯಿ, ಅಣ್ಣಂದಿರು, ಅಕ್ಕಂದಿರು ಅವರ ಮಕ್ಕಳು, ನಿನ್ನ ಗೆಳೆಯ ಗೆಳತಿಯರು ಕೆಲವರು ನಿನ್ನನ್ನು ನೋಡಿರು

೧೯೯೭ರ ನವೆಂಬರ್ ತಿಂಗಳಿನ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ ಜೊನಾತನ್ ಮಾರ್ಕ್ಲಿಸ್ ಅವರ "ಅಂಬಿಕಾಸ್ ಗಿಫ್ಟ್" ಎಂಬ ಲೇಖನದ ಅನುವಾದ.

ವವರು, ಕೆಲವರು ನಿನ್ನ ಛಾಯಾಚಿತ್ರವನ್ನು ಮಾತ್ರ ನೋಡಿರುವವರು ಇವರೆಲ್ಲರೂ ನಿನ್ನನ್ನು ಪ್ರೀತಿಸುತ್ತಾರೆ" ಎಂದು ಗದ್ಗದಿತನಾದನು.

ಅನಂತರ ಆತನ ಮೊಮ್ಮಕ್ಕಳು ಮುಂದೆ ಹೋಗಿ ಪ್ರತಿಮೆಯ ಮೇಲೆ ಮುಚ್ಚಿದ್ದ ರೇಷ್ಮೆ ಬಟ್ಟೆಯನ್ನು ಸರಿಸಲು ಒಂದು ದಾರವನ್ನು ಹಿಡಿದೆಳೆದರು. ಮುದ್ದಾದ ಒಂದು ಪುಟ್ಟ ಹುಡುಗಿಯ ಕಂಚಿನ ಶಿಲ್ಪಾಕೃತಿ ಒಂದು ಕಾರಂಜಿಯ ನಡುವೆ ಸುಂದರವಾಗಿ ಕಾಣುತ್ತಿತ್ತು. ಅವಳ ಮುಖ ಆಕಾಶದತ್ತ ತಿರುಗಿತ್ತು. ಪುಟ್ಟ ಕೈಯಿಂದ ಒಂದು ಪಾರಿವಾಳವನ್ನು ಬಿಡುತ್ತಿರುವಂತಿತ್ತು.

"ಅಂಬಿಕಾ ಆ ದಿನ ಇಲ್ಲಿಯೇ ನನ್ನ ಜೊತೆಯಲ್ಲಿದ್ದ ಆ ಕ್ಷಣವನ್ನು ನಾನು ಮರೆಯಲಾರೆ" ಸ್ವರಾಜ್ ಹೇಳಿದನು. "ಅವಳಿದ್ದಿದ್ದರೆ ಈ ದಿನ ಅವಳ ಮೂವತ್ತೊಂದನೇ ಹುಟ್ಟಿದ ಹಬ್ಬ."

ಸ್ವರಾಜ್ ಮತ್ತು ಅರುಣರಿಗೆ ಅಂಬಿಕಾ ನಾಲ್ಕನೆಯ ಮಗು. ೧೯೬೩ನೇ ನವೆಂಬರ್ ೧೨ ರಂದು ಕಲ್ಕತ್ತದಲ್ಲಿನ ಅಲೀಪುರದಲ್ಲಿ ಹುಟ್ಟಿದಳು. ಬಹಳ ಚೂಟಿಯಾಗಿಯೂ ಸುಂದರವಾಗಿಯೂ ಇದ್ದ ಅವಳು ತನ್ನ ಒಂಭತ್ತನೆಯ ತಿಂಗಳಿನಲ್ಲಿಯೇ ನಡೆಯಲು ಪ್ರಾರಂಭಿಸಿದಳು. ಎರಡು ವರ್ಷವಾಗುವ ಮುಂಚೆಯೇ ಕುಟುಂಬದವರ ಮೇಲೆ ತಾನೇ ರಚಿಸಿದ ಪದ್ಯಗಳನ್ನು ಹಾಡಿ ಅವರ ಮನರಂಜಿಸುತ್ತಿದ್ದಳು.

ಅಂಬಿಕಾಳ ಮುದ್ದು ಮುಖ ಮತ್ತು ಮುದ್ದಾದ ಮಾತಿಗೆ ಮರುಳಾಗದವರೇ ಇರಲಿಲ್ಲ. ತಾಯಿಯೊಡನೆ ಹೊರಗೆ ಸುತ್ತಾಡುವಾಗ ಅಪರಿಚಿತರೊಂದಿಗೂ ಸಲಿಗೆಯಿಂದ ಹೋಗುತ್ತಾ, ಮುಗುಳ್ನಗುತ್ತಾ, 'ನಾನು ನಿಮ್ಮ ಗೆಳತಿಯಾಗುತ್ತೇನೆ' ಎನ್ನುತ್ತಿದ್ದಳು.

ಸ್ವರಾಜ್ ಮತ್ತು ಅವನ ಸಹೋದರರು ನಡೆಸುತ್ತಿದ್ದ ಇಂಜಿನಿಯರಿಂಗ್ ಕಂಪೆನಿಯು ಪ್ರಗತಿಯ ಹಾದಿಯಲ್ಲಿತ್ತು. ಭವಿಷ್ಯ ಆಶಾದಾಯಕವಾಗಿತ್ತು. ಒಂದು ಸಂಜೆ ಸ್ವರಾಜ್ ನ್ಯೂಯಾರ್ಕಿನಿಂದ ತನ್ನ ಕಂಪೆನಿ ಕೆಲಸ ಮುಗಿಸಿಕೊಂಡು ಮನೆ ತಲುಪಿದ ಕೂಡಲೇ ಮಕ್ಕಳನ್ನು ಹತ್ತಿರ ಕರೆದು ಮುದ್ದಾಡುತ್ತಿದ್ದಾಗ ಅಂಬಿಕಾಳಲ್ಲಿ ಏನೋ ವ್ಯತ್ಯಾಸವಿರುವುದನ್ನು ಗಮನಿಸಿದನು.

ಎರಡನೆಯ ಸಲಹೆ: "ಹೇಗೆಯೋ ಅವಳಿಗೆ ಆಗಾಗ ಜ್ವರ ಜಾಸ್ತಿಯಾಗಿ ಮತ್ತೆ ಇಳಿಯುತ್ತದೆ ಮತ್ತೆ ಬರುತ್ತದೆ" ಆತನ ಹೆಂಡತಿ ಅವನಿಗೆ ಹೇಳಿದಳು. "ಹವಾಮಾನದ ಬದಲಾವಣೆ ಮತ್ತು ಈ ಮಳೆಯಿಂದಾಗಿ ಅವಳಿಗೆ ಹೀಗಾಗುತ್ತದೆ ಎಂದು ವೈದ್ಯರು ಹೇಳುತ್ತಾರೆ. ಆದರೆ ನನಗಿದು ಸರಿಯೆನಿಸುವುದಿಲ್ಲ."

ರಾತ್ರಿಯೆಲ್ಲಾ ತನ್ನ ಪುಟ್ಟಮಗಳ ಬಗ್ಗೆ ಯೋಚಿಸುತ್ತಾ ಸ್ವರಾಜ್ ನ್ಯೂಯಾರ್ಕಿನಲ್ಲಿರುವ ತನ್ನ ಸ್ನೇಹಿತನಾದ ಕ್ಲಾರೆನ್ಸ್ ಕೋಹೆನ್ ಎಂಬ ಪ್ರಸಿದ್ಧ ವೈದ್ಯನಿಗೆ ಅಂಬಿಕಳ ಸ್ಥಿತಿಯನ್ನು ವಿವರಿಸಿ ಒಂದು ಪತ್ರ ಬರೆದ. ಲ್ಯುಕೇಮಿಯ (ರಕ್ತ ಕ್ಯಾನ್ಸರ್) ಇರಬಹುದಾದ ಸಾಧ್ಯತೆಯನ್ನು ಪತ್ತೆಹಚ್ಚುವುದು ಬಹಳ

ಮುಖ್ಯ. ಆದ್ದರಿಂದ ತಕ್ಷಣವೇ ರಕ್ತಪರೀಕ್ಷೆ ಮಾಡಿಸುವಂತೆ ಡಾ|| ಕೊಹೆನ್ ತನ್ನ ಗೆಳೆಯ ಸ್ವರಾಜ್‌ಗೆ ಪತ್ರ ಬರೆದ.

ತಪಾಸಣೆಯಿಂದ ಅಂತಹುದೇನೂ ಇಲ್ಲವೆಂದು ತಿಳಿಯಿತು. ಆದರೂ ಸ್ವರಾಜ್ ಮನಸ್ಸು ಚಡಪಡಿಸುತ್ತಿತ್ತು. ತಪಾಸಣೆಯ ಫಲಿತಾಂಶವನ್ನು ಡಾ|| ಕೊಹೆನ್‌ರಿಗೆ ಕಳುಹಿಸಿದ. ಕೆಲವು ದಿನಗಳ ನಂತರ ಡಾ|| ಕೊಹೆನ್ ದೂರವಾಣಿ ಮೂಲಕ ಮಾತನಾಡಿ, "ಅವಳಿಗೆ ರಕ್ತ ಕ್ಯಾನ್ಸರ್ ಆಗಿದೆಯೆಂದು ತಿಳಿಸಲು ವಿಷಾದಿಸುತ್ತೇನೆ. ಭಾರತದ ವೈದ್ಯರು ತಪ್ಪಾಗಿ ಹೇಳಿದ್ದಾರೆ. ತಡಮಾಡದೆ ಅಂಬಿಕಾಳಿಗೆ ವಿದೇಶದಲ್ಲಿ ವೈದ್ಯಕೀಯ ಚಿಕಿತ್ಸೆ ಮಾಡಿಸಬೇಕಾಗಿದೆ. ಪ್ರತಿ ಕ್ಷಣವೂ ಮುಖ್ಯವಾಗಿದೆ" ಎಂದ.

"ತೊಂದರೆ ತೆಗೆದುಕೊಂಡರೂ ಪ್ರಯೋಜನವಿಲ್ಲ. ಅವಳು ಅಷ್ಟು ದೂರದ ಪ್ರಯಾಣವನ್ನು ತಡೆದುಕೊಳ್ಳಲಾರಳು" ಎಂದ ಸ್ಥಳೀಯ ವೈದ್ಯನೊಬ್ಬನ ಮಾತಿಗೆ ಸ್ವರಾಜ್ ಗಮನ ಕೊಡಲಿಲ್ಲ.

ನ್ಯೂಯಾರ್ಕಿಗೆ ಹದಿನೆಂಟು ಗಂಟೆಗಳ ವಿಮಾನಯಾನ ಅಂಬಿಕಾಳಿಗೆ ಬಹಳ ತ್ರಾಸದಾಯಕವೆಂದು ಲಂಡನ್‌ಗೆ ಕರೆದುಕೊಂಡು ಹೋಗಲು ನಿಶ್ಚಯಿಸಿದರು. ಡಾ|| ಕೊಹೆನ್‌ರವರು ದೂರವಾಣಿಯಲ್ಲಿ ಮಾತನಾಡಿದ ನಲವತ್ತೆಂಟು ಗಂಟೆಗಳ ಒಳಗಾಗಿ ಅಂಬಿಕಾಳನ್ನು ಮಿಡಲ್‌ಸೆಕ್ಸ್ ಆಸ್ಪತ್ರೆಗೆ ಸೇರಿಸಿಯಾಗಿತ್ತು.

ಆ ಸಂಜೆ ಅಂಬಿಕಾ ನಿದ್ದೆಯಲ್ಲಿ ಚಡಪಡಿಸುವುದು ಕಂಡು ಅವಳ ರೋಗ ದೃಢೀಕರಿಸಲ್ಪಟ್ಟಿತು. ಅವಳಿಗೆ ಅತೀವ ದ್ರವರಕ್ತ ಕ್ಯಾನ್ಸರ್ ಆಗಿತ್ತು. ಇದು ಸಾಮಾನ್ಯವಾಗಿ ಮಕ್ಕಳಲ್ಲಿ ಕಾಣಿಸಿಕೊಳ್ಳುವ ಒಂದು ಖಾಯಿಲೆ. ಇಂದಿನ ದಿನಗಳಲ್ಲಿ ಶೀಘ್ರ ತಪಾಸಣೆ ಮತ್ತು ಶೀಘ್ರ ಚಿಕಿತ್ಸೆಯಾದರೆ ಶೇ. ೭೦ರಷ್ಟು ಬದುಕುಳಿಯುವ ಸಾಧ್ಯತೆ ಇದೆ. ಆದರೆ ೧೯೬೩ರಲ್ಲಿ ಯುಕ್ತ ಚಿಕಿತ್ಸೆಯೇ ಇರಲಿಲ್ಲ.

ಆಸ್ಪತ್ರೆ ಪಹರೆ: ಅಂಬಿಕಾಳ ಆಯುಸ್ಸು ಮೂರು ವಾರದಿಂದ ಮೂರು ವರ್ಷಗಳವರೆಗೆ ಮಾತ್ರ ಎಂದು ಅಂದಾಜು ಮಾಡಲಾಯಿತು. ಅವಳ ಚಿಕಿತ್ಸೆಯಾಗುತ್ತಿರುವ ಸಮಯದಲ್ಲೇ ಗುಣಪಡಿಸುವ ವಿಧಾನ ಆವಿಷ್ಕಾರವಾದರೆ, ಅವಳನ್ನು ಉಳಿಸಬಹುದೆಂಬ ಒಂದೇ ಒಂದು ಆಶಾಕಿರಣ ಮಾತ್ರ ಇತ್ತು. ಹೀಗಾಗಿ ಅವಳಿಗೆ ನರಕಸದೃಶವಾದ ಔಷಧೀಯ ಚಿಕಿತ್ಸೆ ಪ್ರಾರಂಭವಾಯಿತು. ವಿಮೋಚನೆ ಮತ್ತು ಮರುಕಳಿಕೆ, ಆಸೆ ಮತ್ತು ನಿರಾಸೆ ಇವುಗಳ ನಡುವಿನ ತೂಗುಯ್ಯಾಲೆಯಲ್ಲಿ ಅಂಬಿಕ ಹದಿನೆಂಟು ತಿಂಗಳು ಕಳೆದಳು.

ಅಂಬಿಕಾ ತನ್ನ ಖಾಯಿಲೆಯ ಬಗ್ಗೆ ಒಂದು ದಿನವೂ ದೂರಲಿಲ್ಲ. ಅದನ್ನು ಒಂದು ಮುಗುಳ್ನಗೆಯಿಂದಲೇ ಒಪ್ಪಿಕೊಂಡಿದ್ದಂತೆ ಕಂಡಳು. ತಾನು ಆಹಾರ ತೆಗೆದುಕೊಳ್ಳಲಾರದಂತಹ ಸ್ಥಿತಿಯಲ್ಲಿದ್ದ ದಿನವೂ ಪಕ್ಕದ ಮಕ್ಕಳನ್ನು ತಿನ್ನುವಂತೆ ಪುಸಲಾಯಿಸುತ್ತಿದ್ದಳು. ಮಲಗಿದ್ದಲ್ಲೇ ತನಗೆ ತಾನೇ ಪುಟ್ಟಪುಟ್ಟ ಲೆಕ್ಕಗಳನ್ನು ಮಾಡುತ್ತಾ ದೇವರಿಗೆ ಕಾಗದಗಳನ್ನು ಬರೆಯುತ್ತಾ ವಿನೋದವಾಗಿ ಕಾಲ ಕಳೆಯುತ್ತಿದ್ದಳು. ಹೀಗೇ ಒಂದು ದಿನ ತನ್ನ ತಂದೆಯೊಂದಿಗೆ

ಹರಟೆ ಹೊಡೆಯುತ್ತಾ, "ಅಪ್ಪ ಒಂದು ದಿನ ನಾನು ದೇವರನ್ನು ನೋಡುವೆ. ಆಗ ನಾವಿಬ್ಬರೂ ಒಟ್ಟಿಗೆ ಆಡುವೆವು" ಎಂದಳು. ತನಗೇನಾಗುತ್ತಿದೆ ಎಂಬುದರ ಅರಿವು ಅಂಬಿಕಾಳಿಗೆ ಆಗುತ್ತಿರುವುದಕ್ಕೆ ಇದೇ ಮೊದಲ ಸೂಚನೆಯೆಂದು ಧಾರ್ಮಿಕ ಶ್ರದ್ಧೆಯುಳ್ಳ ಸ್ವರಾಜ್ ತಿಳಿದನು. ಅವನ ಮನಸ್ಸು ಛಿದ್ರವಾಯಿತು. ದೇವರು ಒಳಗೆ ಬರಲು ಅನುಕೂಲವಾಗುವಂತೆ ತನ್ನ ಹಾಸಿಗೆ ಪಕ್ಕದಲ್ಲಿರುವ ಕಿಟಕಿಯು ತೆಗೆದೇ ಇರಲೆಂದು ಒತ್ತಾಯಿಸಿದಳು.

ಅಂಬಿಕಾಳು ಔಷಧಗಳಿಗೆ ತಕ್ಕಮಟ್ಟಿಗೆ ಪ್ರತಿಕ್ರಿಯಿಸಿದಾಗೆಲ್ಲಾ ಸ್ವರಾಜ್ ಮತ್ತು ಅರುಣ ಅಂಬಿಕಾಳನ್ನು ಆಸ್ಪತ್ರೆಯ ಸಮೀಪದಲ್ಲೇ ಬಾಡಿಗೆಗೆ ಕೊಂಡ ಮನೆಗೆ ಕರೆದೊಯ್ಯುತ್ತಿದ್ದರು. ಆದರೆ ಅವಳಿಗೆ ಬೇರೆ ಜನರ ಸೋಂಕು ತಗುಲದಂತಹ ಯುಕ್ತ ವಿಹಾರ ಸ್ಥಳಗಳೇ ಕಾಣಸಿಗಲಿಲ್ಲ. ಕೊನೆಗೆ ಒಂದು ದಿನ ಸ್ವರಾಜ್ ಲಂಡನ್ ಮೃಗಾಲಯವನ್ನು ಪತ್ತೆ ಹಚ್ಚಿದ. ರೆಜೆಂಟ್ಸ್ ಪಾರ್ಕಿನಿಂದ ಟ್ಯಾಕ್ಸಿ ಪ್ರಯಾಣದ ಸ್ವಲ್ಪವೇ ದೂರದಲ್ಲಿತ್ತು. ಹಿಂದೆಲ್ಲಾ ತನ್ನ ವ್ಯಾಪಾರದ ನಿಮಿತ್ತ ಲಂಡನ್‌ಗೆ ಅನೇಕ ಸಲ ಬಂದಿದ್ದರೂ ಆ ಮೃಗಾಲಯಕ್ಕೆ ಭೇಟಿ ಕೊಡುವ ಪ್ರಮೇಯವೇ ಬಂದಿರಲಿಲ್ಲ.

ಈಗ ಅದೇ ಮೃಗಾಲಯವನ್ನು ಮತ್ತೆ ಮತ್ತೆ ಭೇಟಿ ಮಾಡತೊಡಗಿದರು. ಅಂಬಿಕಾಳು ಆಸ್ಪತ್ರೆಯ ಗಡಿ ದಾಟಿದ ಕೂಡಲೇ ಹೊರಗೆ ತಿರುಗಾಡಲು ಇಷ್ಟಪಡುತ್ತಿದ್ದಳು. ಕೆಲವು ಸಲ ಅವಳಿಗೆ ಬಹಳ ಆಯಾಸವಾದಾಗ ಸ್ವರಾಜ್ ಅವಳನ್ನು ತಳ್ಳುವ ಗಾಡಿಯಲ್ಲಿ ಕೂರಿಸಿಕೊಂಡು ಹೋಗುತ್ತಿದ್ದನು. ಅವಳು ಗೆಲುವಾಗಿದ್ದ ದಿನಗಳು ಸಾಮಾನ್ಯ ಮಕ್ಕಳಂತೆ ಅಲ್ಲೆಲ್ಲಾ ಓಡುತ್ತಿದ್ದಳು. ಆದರೆ ಒಂದೆರಡು ಗಂಟೆಗಳು ಮಾತ್ರ.

ಮೃಗಾಲಯದ ಪ್ರಾಣಿಗಳು ಅಂಬಿಕಾಳನ್ನು ಆಕರ್ಷಿಸಿದುವು. ಮಂಗಗಳ ಚೇಷ್ಟೆ ನೋಡಿ ಸಂತೋಷದಿಂದ ಕೂಗಿಕೊಳ್ಳುತ್ತಿದ್ದಳು. ಬಣ್ಣಬಣ್ಣದ ಪಕ್ಷಿಗಳನ್ನು ನೋಡಿ ಮೈಮರೆಯುತ್ತಿದ್ದಳು. ಸಿಂಹ ಹುಲಿಗಳಿಗೆ ಮಾರುಹೋಗುತ್ತಿದ್ದಳು.

ಪ್ರಾಣಿಗಳತ್ತ ನೆಮ್ಮದಿ: ಮೃಗಾಲಯದಲ್ಲೆಲ್ಲಾ ಅಂಬಿಕಾಳಿಗೆ ಬಹಳ ಇಷ್ಟವಾದದ್ದೆಂದರೆ ಮಕ್ಕಳ ವಿಭಾಗ. ಅಲ್ಲಿ ಅವಳು ಕುದುರೆ ಮರಿಗಳನ್ನು ಮೊಲಗಳನ್ನು ಮತ್ತು ಮೇಕೆಗಳನ್ನು ಮುಟ್ಟಬಹುದಿತ್ತು. ಅದು ಪ್ರಪಂಚದಲ್ಲೇ ಮೊತ್ತ ಮೊದಲ ಮಕ್ಕಳಿಗೆಂದೇ ಮಾಡಿದ ಮೃಗಾಲಯ. ೧೯೩೮ ರಲ್ಲಿ ಅಮೆರಿಕದ ರಾಯಭಾರಿಯ ಮಕ್ಕಳಾದ ರಾಬರ್ಟ್ ಮತ್ತು ಎಡ್ವರ್ಡ್ ಕೆನೆಡಿಯವರು ಉದ್ಘಾಟಿಸಿದ್ದರು. ಈಚೆಗೆ ಅದರ ಅಭಿವೃದ್ಧಿ ಅಷ್ಟಾಗಿ ಆಗಿರಲಿಲ್ಲವಾದರೂ ಅಂಬಿಕಾಳು ಮೃಗಾಲಯಕ್ಕೆ ಬರುತ್ತಿದ್ದಂತೆಯೇ ನೇರವಾಗಿ ಮಕ್ಕಳ ವಿಭಾಗದ ಕಡೆಯೇ ಓಡುತ್ತಿದ್ದಳು.

೧೯೬೭ ನೇ ವರ್ಷ ಮುಗಿಯುತ್ತಿದ್ದಂತೆಯೇ ಅಂಬಿಕಾಳು ಹೆಚ್ಚು ಕಾಲ ಆಸ್ಪತ್ರೆಯಲ್ಲೇ ಕಳೆಯಬೇಕಾಯಿತು. ಅರುಣಾಳು ಅಂಬಿಕಾಳ ಪಕ್ಕದಲ್ಲೇ ಯಾವಾಗಲೂ ಕುಳಿತಿರುತ್ತಿದ್ದಳು. ರಾತ್ರಿ

ಹೊತ್ತು ಸ್ವರಾಜ್ ಅಂಬಿಕಳಿಗೆ ನಿದ್ರೆ ಬರದಿದ್ದಾಗ ಅವಳೊಂದಿಗೆ ಮಾತನಾಡುತ್ತಾ ಇಡೀ ರಾತ್ರಿ ಕಳೆಯುತ್ತಿದ್ದನು. ಅವಳಿಗೆ ಅಕಸ್ಮಾತ್ ನಿದ್ದೆ ಬಂದಲ್ಲಿ ಹಾಗೆಯೇ ಕುರ್ಚಿಯಲ್ಲಿ ಒರಗಿಕೊಂಡು ತೂಕಡಿಸುತ್ತಿದ್ದ.

ದಿನ ಕಳೆಯುತ್ತಿದ್ದಂತೆ ಅವಳ ಸ್ಥಿತಿ ಬಿಗಡಾಯಿಸಿತು. ಒಂದು ರಾತ್ರಿ, "ಅಪ್ಪ, ನಾನು ಯಾವಾಗ ಮನೆಗೆ ಹೋಗುವುದು ?" ದುಃಖದಿಂದ ಅಂಬಿಕಾ ಕೇಳಿದಳು.

ಇನ್ನೂ ಪರೀಕ್ಷೆಯ ಹಂತದಲ್ಲೇ ಇರುವ ಒಂದು ಹೊಸ ಔಷಧವನ್ನು ಕಡೆಯದಾಗಿ ಪ್ರಯತ್ನಿಸೋಣವೇ ? ಎಂದು ವೈದ್ಯರು ಕೇಳಿದರು. "ಈ ಔಷಧ ಪರಿಣಾಮ ಬೀರುವುದೆಂಬ ಭರವಸೆಯಿಲ್ಲ. ಆದರೆ ಪ್ರಯತ್ನವಂತೂ ಮಾಡೋಣ" ಎಂದರು.

ಖಂಡಿತ ಮಾಡೋಣ. ನಾನು ಭರವಸೆಯನ್ನಂತೂ ಬಿಡುವುದಿಲ್ಲ" ಸ್ವರಾಜ್ ಹೇಳಿದ.

ಹೊಸ ಔಷಧವನ್ನು ಚುಚ್ಚಿ ಅಂಬಿಕಾಳನ್ನು ಉಳಿಸುವ ಕೊನೆಯ ಪ್ರಯತ್ನವನ್ನು ಮಾಡಿದಾಗ ಅರುಣ ಮತ್ತು ವೈದ್ಯರ ಒಂದು ತಂಡ ಅಂಬಿಕಾಳ ಪಕ್ಕದಲ್ಲಿದ್ದರು.

ಕೊಠಡಿಯ ಹೊರಗೆ ಸ್ವರಾಜ್ ಪ್ರಾರ್ಥನೆ ಮಾಡುತ್ತಿದ್ದ. ಆದರೆ ಕೆಲವು ಗಂಟೆಗಳ ಅನಂತರ ಅಂಬಿಕಾಳು ಶಾಂತವಾಗಿ ಪ್ರಾಣ ತ್ಯಾಗ ಮಾಡಿದಳು. ಅಂದು ೧೯೬೮ನೇ ಏಪ್ರಿಲ್ ೧೯ನೇ ದಿನವಾಗಿತ್ತು. ಅವಳು ಐದು ವರ್ಷವನ್ನೂ ದಾಟಿರಲಿಲ್ಲ.

ಅವಳ ಸಾವಿನ ದುಃಖದಿಂದ ಪಾಲ್ ದಂಪತಿಗಳು ಬಿಡುಗಡೆಹೊಂದಲಿಲ್ಲ. "ಅವಳು ನಮ್ಮ ಜೊತೆ ಇರಬೇಕಿತ್ತು. ನಮಗೆ ದಿಕ್ಕು ಕಾಣದಂತಾಗಿದೆ." ಹಲುಬಿದರು ಸ್ವರಾಜ್ ದಂಪತಿಗಳು. ಭಾರತಕ್ಕೆ ಹಿಂತಿರುಗಿ ತನ್ನ ಇತರ ಕರುಳಿನ ಕುಡಿಗಳೊಂದಿಗೆ ಇರಲು ಪ್ರಯತ್ನಿಸಿದರೂ ಅಂಬಿಕಾಳನ್ನು ಬಿಟ್ಟು ಇರಲಾಗಲೇ ಇಲ್ಲ. ತಮ್ಮ ಮೂರು ಮಕ್ಕಳೊಂದಿಗೆ ಸ್ವರಾಜ್ ಮತ್ತು ಅರುಣ ಲಂಡನ್ನಿನಲ್ಲಿ ತಾವು ವಾಸವಾಗಿದ್ದ ಮನೆಗೇ ಮತ್ತೆ ಬಂದರು. ಅಂಬಿಕಾಳ ಕೊನೆಯ ದಿನಗಳನ್ನು ಅವಳ ಜೊತೆಯಲ್ಲಿ ಕಳೆದ ಮನೆಗೆ ಹಿಂತಿರುಗಿದ್ದರಿಂದ ಅವಳ ಸಮೀಪವೇ ಬಂದಂತಾಯಿತು.

ಇಷ್ಟರಲ್ಲಿ, ಬದುಕು ಸಾಗಿಸಲೇಬೇಕಲ್ಲ. ಸ್ವರಾಜ್ ಹಂಟಿಂಗ್‌ಡನ್‌ನಲ್ಲಿ ಸುರುಳಿಯಾಗಿ ಬೆಸೆದ ನಳಿಗೆಗಳನ್ನು ಮಾಡುವ ಉದ್ಯಮವನ್ನು ಪ್ರಾರಂಭಿಸಿದ. ಉಕ್ಕಿನ ಮತ್ತು ತಾಂತ್ರಿಕ ಕಂಪೆನಿಗಳನ್ನು ಕಟ್ಟಲಾರಂಭಿಸಿದ. ಕ್ರಮೇಣವಾಗಿ ಅವನ ವ್ಯಾಪಾರೋದ್ಯಮ ಪ್ರಪಂಚದಾದ್ಯಂತ ವಿಸ್ತರಿಸಿತು. ಪ್ರತಿ ಕಾರ್ಖಾನೆಯನ್ನು ಒಂದಲ್ಲ ಒಂದು ವಿಧದಲ್ಲಿ ಅಂಬಿಕಾಳಿಗೆ ಸಮರ್ಪಿಸುತ್ತಿದ್ದ. ಲಂಡನ್ನಿನಲ್ಲಿ ತಾವು ವಾಸವಾಗಿದ್ದ ಮಹಡಿ ಮನೆಗಳ ಇಡೀ ಕಟ್ಟಡವನ್ನೇ ಖರೀದಿಸಿ ಅದಕ್ಕೆ 'ಅಂಬಿಕಾ ನಿವಾಸ' ಎಂದು ಹೆಸರಿಟ್ಟ. ಕೆಪೆರೊ ಉಕ್ಕಿನ ಒಕ್ಕೂಟದ ಅಧ್ಯಕ್ಷನಾಗಿ ಸ್ವರಾಜ್ ಇಡೀ ಬ್ರಿಟನ್ನಿನಲ್ಲೇ ಅತ್ಯಂತ ದೊಡ್ಡ ಶ್ರೀಮಂತನಾದ. ಇಷ್ಟಾದರೂ ಅವನ ಮನಸ್ಸು ತಣಿಸಲಾರದಷ್ಟು ಕ್ಷುಬ್ಧಗೊಂಡಿತ್ತು. ಮಗಳ ನೆನಪು ನಿರಂತರವೂ ಉಳಿಯುವಂತೆ ಏನಾದರೂ ಮಾಡಬೇಕೆಂದು ಅವನ ಮನಸ್ಸು ಪ್ರೇರೇಪಿಸುತ್ತಿತ್ತು. ಅವಳ

ಗೌರವಾರ್ಥ ಏನಾದರೊಂದನ್ನು ಮಾಡುವ ಸರಿಯಾದ ಅವಕಾಶ ಕೈತಪ್ಪಿಹೋಗುತ್ತಿತ್ತು.

೧೯೯೩ರ ಒಂದು ಸಂಜೆ ಸ್ವರಾಜ್ ದೂರದರ್ಶನದ ಸಮಾಚಾರವನ್ನು ಕೇಳುತ್ತಿದ್ದಾಗ ೧೮೩೮ರಲ್ಲಿ ಪ್ರಾರಂಭವಾದ ಲಂಡನ್ನಿನ ಮೃಗಾಲಯು ಎರಡು ದಶಲಕ್ಷ ಪೌಂಡ್‌ಗಳ ಸಾಲವನ್ನು ಹೊತ್ತಿದ್ದು ಮುಚ್ಚುವ ಹಂತದಲ್ಲಿದೆಯೆಂಬ ಸುದ್ದಿಯು ಕಿವಿಗೆ ಬಿತ್ತು.

ಮೃಗಾಲಯಕ್ಕೆ ಹೋಗುವುದಿರಲಿ, ಅದರ ಬಗ್ಗೆಯೇ ಎಷ್ಟೋ ವರ್ಷಗಳಿಂದ ಯೋಚಿಸಿಯೇ ಇರಲಿಲ್ಲ. ತಕ್ಷಣವೇ ಅಂಬಿಕಾಳಿಗೆ ಒಂದು ಮಹೋನ್ನತ ಗೌರವವನ್ನು ಅರ್ಪಿಸುವ ಒಂದು ಸದವಕಾಶವನ್ನು ಕಂಡುಕೊಂಡನು. ಅಂದೇ ಸಂಜೆ ಸ್ವರಾಜ್ ಆ ಮೃಗಾಲಯದ ನಿರ್ದೇಶಕರಿಗೆ ತನ್ನ ಸಹಕಾರವನ್ನು ವ್ಯಕ್ತಪಡಿಸುವ ಒಂದು ಪತ್ರವನ್ನು ಬರೆದ. ಕೆಲವೇ ದಿನಗಳಲ್ಲಿ ಅವನ ಬೇಕರ್ ಸ್ಟ್ರೀಟ್ ಕಛೇರಿಗೆ ಮೃಗಾಲಯದ ಅಧಿಕಾರಿಗಳು ಬಂದರು.


ಮೂವತ್ತು ವರ್ಷಗಳ ಹಿಂದೆ ರಿಜೆಂಟ್ ಪಾರ್ಕಿನಲ್ಲಿ ಅಂಬಿಕಾಳೊಂದಿಗೆ ಕಳೆದ ಕ್ಷಣಗಳು ಸ್ವರಾಜ್ ಮನಸ್ಸಿನಲ್ಲಿ ಸುಳಿದವು. ಆ ಕಥೆಯನ್ನು ಹೇಳಿ ಸ್ವರಾಜ್ ನುಡಿದನು, "ಮಕ್ಕಳ ಒಂದು ಹೊಸ ಮೃಗಾಲಯುವನ್ನು ಕಟ್ಟಲು ನಾನು ಒಂದು ದಶಲಕ್ಷ ಪೌಂಡ್‌ಗಳನ್ನು ಕೊಡುತ್ತೇನೆ." ಅಂಬಿಕಾಪಾಲ್ ಸ್ಮರಣಾರ್ಥ ಮೃಗಾಲಯದ ಪ್ರಪಂಚದಲ್ಲೇ ಅತ್ಯುತ್ತಮ ಮೃಗಾಲಯುವಾಗಬೇಕೆಂಬ ಒಂದೇ ಒಂದು ಕಠಿಣವನ್ನು ಮಾತ್ರ ಸ್ವರಾಜ್ ಹಾಕಿದನು.

ಮೃಗಾಲಯುದ ಪ್ರತಿನಿಧಿಗಳು ವಿನೂತನ ಯೋಜನೆಗಳಿಗಾಗಿ ಐರೋಪ್ಯ ದೇಶವನ್ನೆಲ್ಲಾ ಸುತ್ತಾಡಿದರು. ಹೊಸ ಮೃಗಾಲಯವು ಒಂದು ತೋಟದ ವಾತಾವರಣವನ್ನು ಹೊಂದಿರಬೇಕೆಂದು ನಿಶ್ಚಯಿಸಲಾಯಿತು. ಮಕ್ಕಳು ಪ್ರಾಣಿಗಳನ್ನು ಮುಟ್ಟುವಂತಿರಬೇಕು. ಅದರಲ್ಲಿ ಸಾಕು ಪ್ರಾಣಿಗಳೇ ಅಲ್ಲದೆ ಒಂಟೆಗಳೂ, ಲಾಮಾಗಳೂ ಹಿಮಸಾರಂಗಗಳೂ ಇರಬೇಕೆಂದು ಯೋಚಿಸಲಾಯಿತು. ಅಲ್ಲಲ್ಲಿ ಕಲ್ಲು ಮತ್ತು ಮರಗಳಿಂದ ಕೆತ್ತಲ್ಪಟ್ಟ ಪ್ರಾಣಿಗಳನ್ನೂ ಪ್ರಾಣಿಗಳ ಚಿತ್ರ ಮತ್ತು ಅವು ಕೂಗಿಕೊಳ್ಳುವ ಶಬ್ದ ಬರುವಂತಹ ಒತ್ತುಗುಂಡಿಗಳನ್ನು ಅಳವಡಿಸಬೇಕೆಂದು ತೀರ್ಮಾನಿಸಲಾಯಿತು.

ಮಕ್ಕಳ ಮೃಗಾಲಯು ಪ್ರಾರಂಭವಾದ ಗಳಿಗೆಯಿಂದಲೇ ಜಯಭೇರಿ ಮೊಳಗಿಸಿತು. ಪ್ರಾಣಿಗಳ ಸಮೀಪ ಹೋಗಲು ಮಕ್ಕಳಿಗೆ ಅವಕಾಶಮಾಡಿಕೊಡುವುದು, ಮುಟ್ಟುವುದು, ಮೊಲಗಳು, ಮೇಕೆಗಳು, ಹಸುಗಳು, ಹಂದಿಗಳು, ಇಲಿಗಳಿಂದ ಹಿಡಿದು ಸಣ್ಣ ಜಾತಿಯ ಕಾಂಗರೂಗಳವರೆಗಿನ ಪ್ರಾಣಿಗಳು, ಅಂಟು ಕೀಟಗಳು, ದೈತ್ಯ ಜೇಡಗಳು ಈ ರೀತಿಯ ವೈವಿಧ್ಯಮಯವಾದ ಪ್ರಾಣಿಸಂಕಲನಗಳನ್ನು ಹೊಂದಿರುವುದು ಆ ಮೃಗಾಲಯದ ವೈಶಿಷ್ಟ್ಯವಾಯಿತು. ಇವರಿಂದ ಅಲ್ಲಿಗೆ ಭೇಟಿಕೊಡುವ ಜನಗಳ ಸಂಖ್ಯೆ ಪ್ರತಿ ತಿಂಗಳೂ ಸರಾಸರಿ ೧೬ ದಶಾಂಶದಂತೆ ಹೆಚ್ಚುತ್ತಾ ಹೋಯಿತು.

ಇತ್ತೀಚೆಗೆ ಬ್ರಿಟಿಷ್ ಹೌಸ್ ಆಫ್ ಲಾರ್ಡ್ಸ್‌ನಲ್ಲಿ ಜೀವಾವಧಿ ಮಾತ್ರದ ಶ್ರೀಮಂತ ಪದವಿಯನ್ನು ಗಳಿಸಿರುವ ಸ್ವರಾಜ್ ಈಗ ಮೃಗಾಲಯಕ್ಕೆ ನಿಯಮಿತವಾಗಿ ಭೇಟಿಕೊಡುವ ವ್ಯಕ್ತಿ. "ಇದು ನನಗೆ ಚೈತನ್ಯದಾಯಕ ಸ್ಥಳವಾಗಿದೆ' ಎನ್ನುವ ಸ್ವರಾಜ್‌ಗೆ ಕೆಲವು ವೇಳೆ ಪ್ರಾರ್ಥನೆಯನ್ನು ಸಲ್ಲಿಸುವ ಸ್ಥಳವೂ ಆಗಿದೆ–ತನ್ನ ಮಗಳ ಪ್ರತಿಮೆಯ ಬಳಿ ನಿಂತು ತಾನು ನೆಟ್ಟ ಫಲಕವನ್ನು ಓದುವ ಮಕ್ಕಳನ್ನು ತದೇಕಚಿತ್ತನಾಗಿ ನೋಡುತ್ತಾ ನಿಲ್ಲುವನು. ಶ್ರೀಮಂತ ಪಾಲ್ ತಾನು ಯಾರೆಂದು ತಿಳಿಸದೆಯೇ ಅಲ್ಲಿ ಸುತ್ತಾಡುವನು.

ಕಳೆದ ಚಳಿಗಾಲದ ಒಂದು ಬೆಳಗ್ಗೆ ಸ್ವರಾಜ್ ಏನೋ ಒಂದು ಬದಲಾವಣೆಯನ್ನು ಗಮನಿಸುತ್ತಾ ಪ್ರತಿಮೆಯ ಬಳಿ ಬಂದಾಗ ಹೊಸ ಫಲಕವು ಕಂಡು ಬಂತು. ಅದು ಹೀಗಿತ್ತು, "ಅಂಬಿಕಾ ನೀನು ಎಲ್ಲೇ ಇರು, ಹೇಗಾದರೂ ಇರು ಆದರೆ ಒಂದನ್ನು ಮಾತ್ರ ನೆನಪಿಟ್ಟುಕೊ. ಇಲ್ಲೊಬ್ಬ ತಂದೆ, ತಾಯಿ, ಅಣ್ಣ ತಮ್ಮಂದಿರು, ಅಕ್ಕಂದಿರು, ಅವರ ಮಕ್ಕಳು, ಗೆಳೆಯ ಗೆಳತಿಯರು, ಕೆಲವರು ನಿನ್ನನ್ನು ನೋಡಿರುವರು, ಕೆಲವರು ನಿನ್ನ ಛಾಯಾಚಿತ್ರವನ್ನು ಮಾತ್ರ ನೋಡಿರುವವರು ಎಲ್ಲರೂ ನಿನ್ನನ್ನು ಪ್ರೀತಿಸುವರು."



—ಸ್ವಾತಂತ್ರ್ಯದ ನಂತರ ಭಾರತದ ಜನಸಂಖ್ಯೆಯ ಏರಿಕೆಯು ಸುಮಾರು ೩೩೦ ದಶಲಕ್ಷದಷ್ಟು ಹೆಚ್ಚಾಗಿದೆ. ವಾರ್ಷಿಕ ಏರಿಕೆಯನ್ನು ಲೆಕ್ಕಾಚಾರ ಹಾಕಿದರೆ, ಆಸ್ಟ್ರೇಲಿಯಾದ ಜನಸಂಖ್ಯೆಗೆ ಸಮನಾದಷ್ಟು ಎಂದರೆ ಸುಮಾರು ೧೪ ದಶಲಕ್ಷದಷ್ಟು ಹೆಚ್ಚಾಗುತ್ತಿದೆ.

ಸಮಸ್ಯೆಗಳ ಸುಳಿಯಲ್ಲಿ ಮಹಿಳೆ

ಡಾ|| ಎ. ಎಸ್. ರಾಘವಕುಮಾರಿ
ಪ್ರವಾಚಕಿ, ಶಿಕ್ಷಣಶಾಸ್ತ್ರ ವಿಭಾಗ
ಸಿ.ಎಚ್. ೭೪, ೩ನೇ ಮುಖ್ಯ ರಸ್ತೆ
ಈಜುಕೊಳದ ರಸ್ತೆ ಸಮೀಪ, ಸರಸ್ವತಿಪುರ
ಮೈಸೂರು-೫೭೦ ೦೦೯

'ಹೆಣ್ಣು ಕುಟುಂಬದ ಕಣ್ಣು' ಎಂಬ ಹೇಳಿಕೆ ಸರ್ವವಿದಿತವಾದುದು. ಒಬ್ಬ ವ್ಯಕ್ತಿಯು ಕಣ್ಣಿಗೆ ಏನಾದರೂ ತೊಂದರೆ, ಸಮಸ್ಯೆ ಒದಗಿಬಂದರೆ ಅದಕ್ಕೆ ತಕ್ಷಣ ಕಣ್ಣಿನ ತಜ್ಞರ ಸಲಹೆಗಾಗಿ ಓಡುತ್ತಾರೆ ನಮ್ಮ ಜನ. ಆದರೆ ಕುಟುಂಬಕ್ಕೇ ಕಣ್ಣಾಗಿರುವ ಹೆಣ್ಣಿಗೆ ಅರ್ಥಾತ್ ಮಹಿಳೆಗೆ ಏನಾದರೂ ನೋವು, ಸಮಸ್ಯೆ, ಕಷ್ಟಗಳು ಬಂದರೆ ಅಷ್ಟೇ ಮುತುವರ್ಜಿಯಿಂದ ಕುಟುಂಬದ ಹಿರಿಯರಾಗಲಿ ಕಿರಿಯರಾಗಲಿ ಇದರ ಕಡೆಗೆ ಅಷ್ಟಾಗಿ ಗಮನ ಹರಿಸದಿರುವುದು ಸಾಧಾರಣವಾಗಿ ನಮ್ಮ ಕುಟುಂಬಗಳಲ್ಲಿ ಕಂಡುಬರುತ್ತದೆ. ಇದಕ್ಕೆ ಕಾರಣ ಅವರ ಉಪೇಕ್ಷೆ ಅಲಕ್ಷ್ಯಗಳೇ ಹೊರತು ಮತ್ತೇನೂ ಅಲ್ಲ. ತೀರಾ ವಿಧಿಯಿಲ್ಲದಿದ್ದಾಗ ಕಣ್ಣು ಬಿಡುತ್ತಾರೆ. ಸಂಪ್ರದಾಯ ಸಂಸ್ಕೃತಿಗಳಿಗೆ ತೌರಾಗಿರುವ ಭಾರತದಲ್ಲಿ ಜನಿಸಿದವಳು ತಾನು ಎಂದು ನಿರೂಪಿಸಲೆಂದೇ ಏನೋ ಇಂದೂ ಹೆಣ್ಣು ಪ್ರೀತಿ-ವಿಶ್ವಾಸಗಳಿಗೆ ಹೆಚ್ಚಿನ ಸ್ಥಾನ ಕೊಟ್ಟಿರುವುದೇ ಇದಕ್ಕೆ ಕಾರಣವಾಗಿರಬಹುದು. ತನ್ನ ನೋವು, ಸಂತೋಷ, ಆಸೆಗಳನ್ನು ಒಂದು ಕಡೆಗಿಟ್ಟು ತನ್ನ ಕರ್ತವ್ಯ, ಹೊಣೆಗಾರಿಕೆಗಳಿಗೆ ಪ್ರಥಮ ಆದ್ಯತೆ ಕೊಟ್ಟು ಬಹುಮುಖ ಪಾತ್ರಗಳನ್ನು ಆಕೆ ನಿರ್ವಹಿಸುತ್ತಿದ್ದಾಳೆ. ಯೋಜನೆ, ಸಂಘಟನೆ, ಪರೀಕ್ಷೆ ಸಮೀಕ್ಷೆಗಳನ್ನು ಮೌನವಾಗಿ ನಡೆಸುತ್ತ ಎಲ್ಲರ ಗಮನವನ್ನು ಸೆಳೆಯುತ್ತಿದ್ದಾಳೆ. ಇಷ್ಟಾದರೂ ಆಕೆ ತನಗಾಗಿ ಇಲ್ಲವೆ ತನ್ನ ಸ್ವಂತಕ್ಕೆಂದು ಮಾಡಿಕೊಳ್ಳುತ್ತಿರುವ ಕೆಲಸಗಳು ಕೇವಲ ಎಣಿಕೆ ಮಾತ್ರದಲ್ಲಿವೆ. ಸಂಕಟವಾದಾಗ ಕಣ್ಣೀರು ಹಾಕುವುದಕ್ಕಾಗಲಿ, ತನ್ನ ಮನದ ಅಳಲನ್ನು ಹೇಳಿಕೊಳ್ಳುವುದಕ್ಕಾಗಲಿ ಸ್ವಾತಂತ್ರ, ವಿರಾಮಗಳಿಲ್ಲದ ಆಕೆಗೆ ಸಮಸ್ಯೆಗಳು ಇಲ್ಲ ಎನ್ನಲಾಗುತ್ತದೆಯೇ? ಸೀಮಿತವಾದ ಪಾತ್ರಗಳನ್ನು ನಿರ್ವಹಿಸುತ್ತಿರುವವರೇ ಸಮಸ್ಯೆ, ಸಮಸ್ಯೆ ಎಂದು ಹಲುಬುತ್ತಿರುವಾಗ ಅನೇಕಾನೇಕ ಪಾತ್ರಗಳನ್ನು ವಿವಿಧ ವ್ಯಕ್ತಿಗಳಿಗಾಗಿ ನಿರ್ವಹಿಸುತ್ತಿರುವ ಮಹಿಳೆಗೆ ವಿಧವಿಧವಾದ ಸಮಸ್ಯೆಗಳು ಬರುವುದು ಸಹಜ. ಅನಾಯಾಸವಾಗಿ ಬರುವುವು ಕೆಲವಾದರೆ ಉದ್ದೇಶಪೂರ್ವಕವಾಗಿ ಸೃಷ್ಟಿಯಾಗುವಂಥವುಗಳು ಉಳಿದವು. ಆದರೂ 'ಮಾತು ಬೆಳ್ಳಿ ಮೌನ ಬಂಗಾರ' ಎಂಬ ತತ್ತ್ವವನ್ನು

ಇಟ್ಟುಕೊಂಡಿರುವ ಹೆಣ್ಣು ಮುಂದುವರೆಯುತ್ತಲೇ ಇದ್ದಾಳೆ.

ಸಮಸ್ಯೆಗಳ ಸುಳಿಯಲ್ಲಿ ಸಿಲುಕಿಹಾಕಿಕೊಂಡಿರುವ ಮಹಿಳೆಯ ವಿಚಾರದಲ್ಲಿ ಈ ಮುಂದಿನ ಅಂಶಗಳನ್ನು ಕಾರಣಗಳಾಗಿ ನೀಡಬಹುದು :

ಕುಟುಂಬದ ವ್ಯಕ್ತಿಗಳ ನಡುವೆ ನಿಕಟ ಸಂಬಂಧಗಳು ಇಲ್ಲದಿರುವಿಕೆ, ಸಾಮಾಜಿಕ ಅಭದ್ರತೆ, ಆರ್ಥಿಕ ಅಭದ್ರತೆ, ಮೂಢ ನಂಬಿಕೆಗಳು, ಯಾವುದೇ ವ್ಯಕ್ತಿ, ಕೆಲಸ, ವಸ್ತು ಮುಂತಾದವುಗಳ ಬಗ್ಗೆ ಆಸಕ್ತಿ ಇಲ್ಲದಿರುವಿಕೆ, ಆಪಹೊಂದಾಣಿಕೆ, ಜವಾಬ್ದಾರಿ ತೆಗೆದುಕೊಳ್ಳಲು ಹಿಂಜರಿಕೆ, ವಾಸ್ತವಿಕತೆಯನ್ನು ಒಪ್ಪದಿರುವಿಕೆ, ಅನಿಸಿಕೆಗಳನ್ನು ಅದುಮಿಟ್ಟುಕೊಳ್ಳುವುದು, ಅಪಾರ್ಥಮಾಡಿಕೊಳ್ಳುವುದು, ಇತರರ ಇಲ್ಲವೆ ಸಂಬಂಧವಿಲ್ಲದವರ ಮಾತಿಗೆ ಹೆಚ್ಚಾಗಿ ಮನ್ನಣೆ ಕೊಡುವುದು, ಮುಚ್ಚು ಮರೆಯಿಲ್ಲದೆ ವ್ಯವಹಾರ ನಡೆಸುವುದು, ವಿನಾಕಾರಣ ವಾದಮಾಡುವುದು, ಪೂರ್ವಾಗ್ರಹ, ಸುಳ್ಳನ್ನು ನಿಜವೆಂದು ನಂಬಿಸುವುದು, ಆತ್ಮವಿಶ್ವಾಸವಿಲ್ಲದೆ ಕೆಲಸ ಮಾಡುವುದು, ಸಂಕುಚಿತ ಮನೋಭಾವ—ಮೊದಲಾದವು.

ಕುಟುಂಬದ ಎಲ್ಲ ಹೊಣೆಗಾರಿಕೆಯನ್ನು ಒಬ್ಬರೇ ವಹಿಸಿಕೊಂಡು ಮಾಡುತ್ತಿದ್ದರೆ ಉಳಿದವರು ವೃಥಾಕಾಲಹರಣ ಮಾಡುವುದು ಇಲ್ಲವೆ ವಿಮರ್ಶೆ, ಟೀಕೆಗಳು ಮಾಡುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಹೆಣ್ಣು ಎಂದರೆ ಗಂಡು ಹೇಳಿದ ಮಾತಿಗೆ—ಗಂಡು ಅಂದರೆ ತಂದೆ, ಸೋದರ, ಮಾವ ಇಲ್ಲವೆ ಕೈಹಿಡಿದ ವ್ಯಕ್ತಿ—ಎದುರಾಡದೆ, ಮನೆಯ ಗುಟ್ಟನ್ನು ರಟ್ಟು ಮಾಡದೆ, ಹಿರಿಯರಾಗಲಿ, ಬಂಧುಗಳಾಗಲಿ, ಕಿರಿಯರಾಗಲಿ, ಏನು ಹೇಳಿದರೂ ಕೆಲಸಗಳನ್ನು ಮಾಡಬೇಕು, ಮಾಡುತ್ತಾಳೆ ಎಂದು ನಮ್ಮ ಸಂಸ್ಕೃತಿ ಭಾವಿಸಿದೆ. ಆದರೆ ಬದಲಾಗುತ್ತಿರುವ ಸಮಾಜಕ್ಕೆ ಅನುಗುಣವಾಗಿ ಈ ಭಾವನೆಯಲ್ಲೂ ಬದಲಾವಣೆ ಕಂಡು ಬರುತ್ತದೆ. ಇಂದಿನ ವೈಜ್ಞಾನಿಕ ಹಾಗೂ ತಂತ್ರಜ್ಞಾನದ ಯುಗದಲ್ಲಿ ಈ ಪ್ರಾಚೀನ ನಂಬಿಕೆ, ಮನೋಭಾವಗಳು ಹೆಣ್ಣು ಇಲ್ಲವೆ ಮಹಿಳೆಗೆ ಮಾತ್ರ ಅನ್ವಯವಾಗಬೇಕಾದಿಲ್ಲ. ಹಿಂದಿನ ಕಾಲದಲ್ಲಿ ಹೆಚ್ಚಿನ ವಿದ್ಯೆಯನ್ನು ಹೆಣ್ಣು ಪಡೆಯದಿದ್ದರೂ ಆಕೆ ಮನೆಯ ಚೌಕಟ್ಟಿನಲ್ಲಿ ಹಾಗೂ ಹೊಲ ಗದ್ದೆಗಳಲ್ಲಿ ಕೆಲಸ ಮಾಡುತ್ತಿದ್ದಳು. ಅಂದರೆ, ಆಕೆಯ ಪಾತ್ರಗಳಿಗೆ ಒಂದು ಮಿತಿ ಇತ್ತು. ಆದರೆ ಇಂದು 'ಸ್ವಯಂ ಕೃತ ಅಪರಾಧ' ಎಂಬಂತೆ ಆಕೆಯ ಪಾತ್ರಗಳು, ಕಾಲ ಬದಲಾಗುತ್ತಿದ್ದರೂ, ದ್ವಿಗುಣವಾಗುತ್ತಲೇ ಇವೆ. ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು, ಹಿರಿಯರಿಗೆ ವಿಧೇಯಳಾಗಿದ್ದು, ವಿವಾಹಿತೆ ಆಗಿದ್ದರೆ ಅತ್ತೆ, ಮಾವ, ಗಂಡ ಇವರುಗಳ ಸಮ್ಮತಿ ಪಡೆದು ಅವಶ್ಯಕತೆ ಇರುವುದರಿಂದ ಉದ್ಯೋಗಕ್ಕೆ ಹೋಗುತ್ತಿದ್ದಾಳೆ. ಆದರೆ ಕ್ರಮಬದ್ಧವಾಗಿ ಕೆಲಸ ಮಾಡುವುದರಿಂದಲೋ, ಇತರರಿಗೆ ಹೆಚ್ಚು ತೊಂದರೆ ಕೊಡಬಾರದೆಂಬ ಭಾವನೆಯಿಂದಲೋ ತನಗೆ ಅತ್ಯಂತ ನಿಕಟವಾಗಿರುವವರ ಹಾಗೂ ಸನ್ನಿಹಿತರಾಗಿರುವವರ ಕೆಲಸಗಳನ್ನು ತಾನೇ ಮಾಡಬೇಕೆಂಬ ಹುಮ್ಮಸ್ಸಿನಿಂದಲೋ ವಿವಿಧ ರೀತಿಯ ಕೆಲಸಗಳನ್ನು ಮಾಡಲು ಈಕೆ ಮುಂದೆ ಬರುತ್ತಿದ್ದಾಳೆ. ಬಯಸಿ

ಒಪ್ಪಿಕೊಂಡವು ಕೆಲವಾದರೆ ಒತ್ತಡದಿಂದಲೋ ನಿರೀಕ್ಷೆಯಿಂದಲೋ, ಅಭಿಮಾನದಿಂದಲೋ ಕೆಲಸಗಳು ಗಂಟಾಗುತ್ತವೆ. ಇವು ಸಮಸ್ಯೆಗಳಿಗೆ ನೆಲೆಯಾಗುವಂಥವು. ಹೀಗಾಗಿ ಆಕೆಗೆ ವಿರಾಮವೇ ಇಲ್ಲದಂತೆ ಆಗುತ್ತಿದೆ. ಇದನ್ನು ಎಲ್ಲ ಕುಟುಂಬಗಳಲ್ಲೂ ಕಾಣಬಹುದು.

ಪಾತ್ರಗಳು

ಮಹಿಳೆಯೊಬ್ಬಳು ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಈ ಮುಂದೆ ಸೂಚಿಸಿರುವ ಪಾತ್ರಗಳನ್ನು ನಿರ್ವಹಿಸಬೇಕಾಗಿದೆ:

ಗೃಹನಿರ್ವಾಹಕಿಯಾಗಿ, ಮಗಳಾಗಿ, ಸೊಸೆಯಾಗಿ, ಮಡದಿಯಾಗಿ, ತಾಯಿಯಾಗಿ, ಉದ್ಯೋಗಸ್ಥೆಯಾಗಿ, ಸಮಾಜ ಸೇವಕಿಯಾಗಿ, ಅತ್ತೆಯಾಗಿ, ಸ್ನೇಹಿತೆಯಾಗಿ, ಸಲಹಾದಾರಳಾಗಿ, ಕರ್ತವ್ಯಪಾಲಕಿಯಾಗಿ, ವಿಮರ್ಶಕಿಯಾಗಿ, ಹಿತೈಷಿಯಾಗಿ, ನಿರ್ದೇಶಕಿಯಾಗಿ, ಸ್ಫೂರ್ತಿದಾಯಕಿಯಾಗಿ, ನಿಯಂತ್ರಕಿಯಾಗಿ, ಸಾಮಾಜಿಕ ಬದಲಾವಣೆಯ ಪ್ರತಿರೂಪವಾಗಿ, ಅವಕಾಶವಾದಿಯಾಗಿ, ಸಂಘಟಕಳಾಗಿ, ಯೋಜಕಿಯಾಗಿ, ಮಾರ್ಗದರ್ಶಿಯಾಗಿ, ಬೋಧಕಿಯಾಗಿ, ಪ್ರೇರಕಿಯಾಗಿ, ಪ್ರೇಕ್ಷಕಿಯಾಗಿ, ಸಂಶೋಧಕಿಯಾಗಿ, ಮೌಲ್ಯಮಾಪಕಿಯಾಗಿ, ನಿರ್ಣಾಯಕಳಾಗಿ—ಮೊದಲಾದವು. ಇದಲ್ಲದೆ ಆಕೆ ಸಂಪ್ರದಾಯಸ್ಥರ ಕುಟುಂಬಕ್ಕೆ ಸೇರಿದ್ದರೆ ಅದಕ್ಕೆ ಪೂರಕವಾದ ಕೆಲಸಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾಳೆ. ಆದರೆ ಹಿರಿಯರು ಸಂಪ್ರದಾಯಸ್ಥರಾಗಿದ್ದು ಕಿರಿಯರು ಆಧುನಿಕ ಮೌಲ್ಯಗಳಿಗೆ ಮರುಳಾಗಿದ್ದಲ್ಲಿ ಆಕೆ ತೂಗುದೀಪದಂತೆ ಕೆಲಸ ಮಾಡಬೇಕಾಗುತ್ತದೆ. "ತಾಳಕ್ಕೆ ತಕ್ಕಂತೆ ಕುಣಿಯಬೇಕು" ಎಂದು ನಾಟ್ಯಾಚಾರ್ಯರೊಬ್ಬರು ಹೇಳಿರುವಂತೆ ಆಕೆ ಎರಡು ಶ್ರುತಿಗಳಿಗೂ ದನಿಗೂಡಿಸಬೇಕಾಗುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ಹೆಣ್ಣು ಯಾವ ಪರಿಸರದಲ್ಲಿದ್ದರೂ ಸರಿ ಆಕೆ ಸಮಸ್ಯೆಗಳಿಗೆ ಬಾಹಿರವಾಗಿ ಇರಲಾಗದು.

ಬದಲಾಗುತ್ತಿರುವ ಸಮಾಜಕ್ಕೆ ಅನುಗುಣವಾಗಿ ಮಹಿಳೆ ವಿವಿಧ ಪಾತ್ರಗಳನ್ನು ನಿರ್ವಹಿಸಬೇಕಾಗಿರುವುದರಿಂದ ಆಕೆಯಲ್ಲಿ ಇರಬೇಕಾದ ಇಲ್ಲವೆ ಆಕೆ ಬೆಳೆಸಿಕೊಳ್ಳಬೇಕಾಗಿರುವ ಗುಣಲಕ್ಷಣಗಳು ಇವು:

—ಸನ್ನಿವೇಶ ಮತ್ತು ಜನರನ್ನು ಸಹನೆಯಿಂದ ಅವಲೋಕಿಸುವುದು.

—ಸಾಧ್ಯವಾದಷ್ಟು ಮಟ್ಟಿಗೆ ಹೆಚ್ಚು ಮಂದಿಯೊಡನೆ ಉತ್ತಮ ಸಾಮಾಜಿಕ ಸಂಬಂಧಗಳನ್ನು ಬೆಳೆಸಿಕೊಳ್ಳುವುದು.

—ವಿವಿಧ ಸನ್ನಿವೇಶಗಳಲ್ಲಿ ಉಪಯೋಗಕ್ಕೆ ಬರುವಂಥ ಜ್ಞಾನ, ಕೌಶಲ ಮತ್ತು ಸಾಮರ್ಥ್ಯಗಳನ್ನು ರೂಢಿಸಿಕೊಳ್ಳುವುದು.

—ದೃಢ ಆತ್ಮವಿಶ್ವಾಸ ಮೂಡಿಸಿಕೊಳ್ಳುವುದು.

—ವ್ಯಕ್ತಿ, ವಸ್ತು, ಸಂಸ್ಥೆ ಇಲ್ಲವೆ ಕೆಲವು ಸಾಮಾಜಿಕ ಅಂಶಗಳಿಗೆ ಸಂಬಂಧಿಸಿದಂತೆ ಸುದೃಢ ಮನೋಭಾವಗಳನ್ನು ಬೆಳೆಸಿಕೊಳ್ಳುವುದು.

—ಪರಿಸ್ಥಿತಿ ಇಲ್ಲವೆ ಸಂದರ್ಭಗಳಿಗೆ ತಕ್ಕಂತೆ ಹೊಂದಾಣಿಕೆ ಮಾಡಿಕೊಳ್ಳುವುದು.

—ಕ್ರಮಬದ್ಧವಾಗಿ ಕೆಲಸ ಮಾಡುವ ಅಭ್ಯಾಸ ರೂಢಿಸಿಕೊಳ್ಳುವುದು.

—ಮೂಢ ನಂಬಿಕೆಗಳಿಗೆ ಬಲಿಯಾಗದಿರುವುದು.

—ಉತ್ತಮ ಗ್ರಹಿಕೆ ಮತ್ತು ವಿಶಾಲ ಮನೋಭಾವಗಳನ್ನು ಬೆಳೆಸಿಕೊಳ್ಳುವುದು.

—ಯೋಜನೆ, ಅರ್ಥಮಾಡಿಕೊಳ್ಳುವಿಕೆ, ವಿಶ್ಲೇಷಣೆ ಮತ್ತು ಪರೀಕ್ಷೆಗಳಿಲ್ಲದೆ ಕೆಲಸವನ್ನು ಒಪ್ಪಿಕೊಳ್ಳದಿರುವುದು.

—ಸ್ವತಂತ್ರವಾಗಿ ಯುಕ್ತ ನಿರ್ಣಯಗಳನ್ನು ತೆಗೆದುಕೊಳ್ಳುವುದು.

—ಅವಶ್ಯಕತೆ ಇದ್ದಲ್ಲಿ ಮಾತ್ರ ಮಾರ್ಗದರ್ಶನ ನೀಡುವುದು.

—ಜನ, ಸನಿವೇಶ, ಸಂದರ್ಭ ಮತ್ತು ವಸ್ತುಗಳ ಮೌಲ್ಯಮಾಪನ ಮಾಡುವುದು.

—ಗಳಿಸಿದ ಅನುಭವ, ರೂಪಿಸಿಕೊಂಡಿರುವ ತತ್ವಗಳು ಮತ್ತು ಮೌಲ್ಯಗಳಿಗೆ ಅನುಗುಣವಾಗಿ ವರ್ತಿಸುವುದು.

ಇವೇ ಮೊದಲಾದ ಗುಣಸಾಮರ್ಥ್ಯಗಳನ್ನು ಬೆಳೆಸಿಕೊಳ್ಳದೆ ಕೆಲಸಕ್ಕೆ ಕೈ ಹಾಕಿದಾಗ ಎದುರಾಗುವ ಅಂಶಗಳನ್ನೇ 'ಸಮಸ್ಯೆಗಳು' ಎಂದು ತಜ್ಞರು ಹೇಳುವರು. ಸಂದರ್ಭ, ಪರಿಸ್ಥಿತಿ, ಇಲ್ಲವೇ ಸನ್ನಿವೇಶದಲ್ಲಿರುವ ಅಥವಾ ಬರಬಹುದಾದ ಘಟನೆಗಳ ಬಗ್ಗೆ ವಿಚಾರಮಾಡದೆ ಆತುರದಿಂದ ಕೆಲಸಮಾಡಲು ಆರಂಭಿಸಿದ ವ್ಯಕ್ತಿ ಎದುರಿಸುವ ಅಂಶವೇ 'ಸಮಸ್ಯೆ.'

ಸಮಸ್ಯೆಗಳ ವಿಧಗಳು ಮತ್ತು ಕಾರಣಗಳು

ಮಹಿಳೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಎರಡು ಬಗೆಗಳಾಗಿ ವಿಂಗಡಿಸಬಹುದು— ೧) ಗೃಹಿಣಿ ಎಂದೆನಿಸುವವಳ ಸಮಸ್ಯೆಗಳು, ೨) ಗೃಹಿಣಿ ಹಾಗೂ ಉದ್ಯೋಗಸ್ಥೆ ಎಂದೆನಿಸುವವಳ ಸಮಸ್ಯೆಗಳು. ಒಂದೊಂದರಲ್ಲೂ ಕೆಲವು ಉಪಪ್ರಭೇದಗಳನ್ನು ಗುರುತಿಸಬಹುದು. ಮೊದಲನೆಯದರಲ್ಲಿ ಗೃಹಿಣಿ ಎಂದಾಗ ವಿವಾಹಿತಳಾಗಿದ್ದು ಕೇವಲ ಮನೆಗೆ ಸಂಬಂಧಿಸಿದ ಕೌಟುಂಬಿಕ ಸಮಸ್ಯೆಗಳು ಎದುರುಗೊಂಡಾಗ ಆಕೆ ಅವನ್ನು ಎಷ್ಟರ ಮಟ್ಟಿಗೆ ನಿಭಾಯಿಸುತ್ತಾಳೆ ಎಂಬುದು ಇಲ್ಲಿಯ ವಿಚಾರ. ಉದ್ಯೋಗಸ್ಥೆಯೂ ಗೃಹಿಣಿಯೂ ಆಗಿರುವಂಥ ಮಹಿಳೆ ತನ್ನ ಉದ್ಯೋಗ ಕ್ಷೇತ್ರದಲ್ಲಿ ಎದುರಾಗುವ ಸಮಸ್ಯೆಗಳನ್ನು ಎದುರಿಸುವ ಜೊತೆಗೆ ತನ್ನ ಕೌಟುಂಬಿಕ ಸಮಸ್ಯೆಗಳನ್ನೂ ಎದುರಿಸಬೇಕಾಗುತ್ತದೆ. ಈ ಎರಡೂ ಕ್ಷೇತ್ರಗಳಲ್ಲಿಯೂ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಆಕೆಯ ಜಾಣ್ಮೆ ಸಾಮರ್ಥ್ಯಗಳು ಪ್ರಕಟಗೊಂಡು ಸಮಸ್ಯೆಗಳು ಸುಧಾರಣೆಗೊಳ್ಳುವ ಸಂದರ್ಭಗಳು ಇಲ್ಲದಿಲ್ಲ. ಉದ್ಯೋಗಕ್ಷೇತ್ರವಾಗಲಿ ಕೌಟುಂಬಿಕ ಕ್ಷೇತ್ರವಾಗಲಿ ಗೋಚರವಾಗುವುದು ಸಾಮಾಜಿಕ ಪರಿಸರ. ಈ ಎರಡೂ ಕ್ಷೇತ್ರಗಳ ಸಮಸ್ಯೆಗಳನ್ನು ಸಾಮಾಜಿಕ ಪರಿಸರದ ಮೂಸೆಯಲ್ಲಿಟ್ಟು ಪುಟವಿಟ್ಟಾಗ ಮಾತ್ರ ಲಭಿಸುವ ಪರಿಹಾರಗಳು ಸರ್ವಸಮ್ಮತವೂ ಆಗುವ ಸನ್ನಿವೇಶಗಳು ಹೆಚ್ಚು. ಕೌಟುಂಬಿಕ ಸಮಸ್ಯೆಗಳ ನೆಲಗಟ್ಟಿನಲ್ಲಿಯೇ ಆಕೆಯ ದೈಹಿಕ ಸಮಸ್ಯೆಗಳೂ ಪ್ರಕಟವಾಗುವುದು ಸಹಜವೇ. ಏಕೆಂದರೆ ಕುಟುಂಬದ ಕೆಲಸಗಳನ್ನು ಭಾಗಶಃವಾದರೂ ಪೂರ್ಣಮಾಡಿಕೊಂಡು ಉದ್ಯೋಗಕ್ಷೇತ್ರದ ಕೆಲಸಗಳನ್ನು ಗಮನಿಸಿ

ಕೊಳ್ಳುವುದೆಂದರೆ ಆಕೆಯ ದೇಹಾರೋಗ್ಯದ ಮೇಲೆ ಪ್ರಭಾವ ಬೀರಿದಂತೆಯೇ. ಇದಲ್ಲದೇ ಮಹಿಳೆಗೆ ವಿಶೇಷವೆನಿಸಿದ ವೈಯಕ್ತಿಕ ಸಮಸ್ಯೆಗಳೂ ತಮ್ಮ ತಮ್ಮ ಪಾತ್ರವನ್ನು ನಡೆಸದೆ ಬಿಡವು. ಹೀಗಾಗಿ ಆಕೆಗೆ ಎದುರಾಗುವ ಸಮಸ್ಯೆಗಳು ಕೆಲವು ಆಂತರಿಕ, ಕೆಲವು ಬಾಹ್ಯ ಎಂಬ ವರ್ಗಗಳಿಗೂ ಸೇರುತ್ತವೆ.

ಇವು ತಾತ್ಕಾಲಿಕಗಳು ಆಗಿರಬಹುದು ಇಲ್ಲವೆ ಧೀರ್ಘಕಾಲಿಕಗಳಾಗಿರಬಹುದು. ಉದಾಹರಣೆಗೆ ಮನೆಯ ವಾತಾವರಣದಲ್ಲಿ ಕುಟುಂಬದ ಸದಸ್ಯರ ನಡುವೆ ಸಾಮರಸ್ಯವಿಲ್ಲದಿದ್ದಾಗ ಉಂಟಾಗುವ ಸಮಸ್ಯೆಯು ಪರಿಯಿದು. ಕುಟುಂಬದ ಸದಸ್ಯರ ನಡುವೆ ಅನ್ಯೋನ್ಯತೆ, ಸಹಕಾರ ಮನೋಭಾವ, ಉತ್ತಮ ಸಂಬಂಧಗಳನ್ನು ನೋಡಿ ಹೊಟ್ಟೆಕಿಚ್ಚು ಇಲ್ಲವೆ ಅಸೂಯೆಗಳಿಂದ ಹೊರಗಿನವರು—ಅಂದರೆ, ಸ್ನೇಹಿತರೆಂಬ ಮುಖವಾಡ ಹಾಕಿಕೊಂಡವರು ಆಗಿರಬಹುದು, ಇಲ್ಲವೆ ನೆರೆಹೊರೆಯವರಾಗಿರಬಹುದು—ಬಂದು ಹೇಳುವ ಚಾಡಿ ಮಾತುಗಳಿಂದ ಉಂಟಾಗುವ ಸಮಸ್ಯೆ, ಸೊಸೆಯು ನಡವಳಿಕೆಯನ್ನು ಕುರಿತು ಅತ್ತೆ ಹೇಳಿಕೊಳ್ಳುವುದು, ಅತ್ತೆ ತನ್ನನ್ನು ನಡೆಸಿಕೊಳ್ಳುವ ಬಗ್ಗೆ ಸೊಸೆ ಹೇಳಿಕೊಳ್ಳುವುದು: ಮಗಳನ್ನು ಕುರಿತು ಇಲ್ಲದ ಸಲ್ಲದ ವಿಷಯಗಳನ್ನು ಹೆಣೆದು ಬಣ್ಣಹಾಕಿ ತಂದೆ ತಾಯಂದಿರ ಮನಸ್ಸನ್ನು ಕೆಡಿಸುವುದು—ಮುಂತಾದವುಗಳಿಂದಲೂ ಇಂಥ ಪರಿಸ್ಥಿತಿಗೆ ದಾರಿಯಾಗುತ್ತದೆ. ಈ ಸಮಸ್ಯೆಗಳಿಗೆ ಪೂರಕವಾಗಿರುವ ಕೆಲವು ಸನ್ನಿವೇಶಗಳು ಹೀಗಿವೆ: ಕುಟುಂಬದ ಸದಸ್ಯರು ಪರಸ್ಪರ ಅರ್ಥಮಾಡಿಕೊಳ್ಳದಿದ್ದಾಗ: ಉದ್ಯೋಗಸ್ಥ ಮಹಿಳೆಯೊಡನೆ ಹೊಂದಿಕೊಳ್ಳಲಾಗದ—ಅಂದರೆ, ಆಕೆ ಕೆಲಸಮಾಡುವ ಪರಿ, ವ್ಯವಹರಿಸುವ ರೀತಿ, ಮುಂತಾದವುಗಳು—ಕುಟುಂಬದ ಸದಸ್ಯರ ಅಸಾಮರ್ಥ್ಯ: ಬೆಳಗಿನಿಂದಲೂ ದುಡಿದು ಬೇಸತ್ತು ಬಸವಳಿದು ಮನೆಗೆ ಬಂದರೆ ಆಕೆಯನ್ನು ಸಂಶಯಗಣ್ಣಿನಿಂದ ನೋಡುವುದು ಇಲ್ಲವೆ ಮಾತಾಡದೆ ಮುಖ ತಿರುಗಿಸಿಕೊಳ್ಳುವುದು: ವಾಸ್ತವಾಂಶಗಳನ್ನು ತಿಳಿಸಿದರೂ ನಂಬದಿರುವುದು: ಅವಾಚ್ಯಗಳನ್ನು ಬಳಸಿ ನೆಮ್ಮದಿಯ ಪರಿಸರವನ್ನು ಕಲುಷಿತಗೊಳಿಸುವುದು: ಕುಟುಂಬದ ಅವ್ಯವಸ್ಥೆ: ಯೋಜನೆಗೆ ವಿರುದ್ಧವಾಗಿ ಕೆಲಸಮಾಡಿ ಮುಗಿಸುವುದು: ಕೆಲವು ಸಾಮಾಜಿಕ ಅಂಶಗಳ ಬಗ್ಗೆ ಕುಟುಂಬದ ಸದಸ್ಯರು ಬೆಳಸಿಕೊಂಡಿರುವ ಅದೃಢಮನೋಭಾವಗಳು: ಹೊಂದಾಣಿಕೆಯ ಕೊರತೆ ಮೊದಲಾದವು. ಇವುಗಳಿಂದ ಸಾಮಾಜಿಕ ಸಮಸ್ಯೆಗಳು ತಲೆದೋರುವುವು.

ಇನ್ನೊಂದು ಬಗೆಯ ಸಮಸ್ಯೆಗೆ ಪೂರಕವಾಗಿರುವ ಅಂಶಗಳಿವು: ಕುಟುಂಬದ ಪರಿಸರದಲ್ಲಿ ಒಬ್ಬ ವ್ಯಕ್ತಿ ಇಲ್ಲವೆ ಇಬ್ಬರು ಇಂಥ ಸನ್ನಿವೇಶಗಳನ್ನು ಸೃಷ್ಟಿಸಬಹುದು. ಉದಾಹರಣೆಗೆ ವಯಸ್ಸಿಗೆ ಬಂದ ಹುಡುಗ ಇಲ್ಲವೆ ಹುಡುಗಿ ಆರೋಗ್ಯ ಸರಿಯಿಲ್ಲವೆಂಬ ಕುಂಟುನೆಪ ಹೇಳಿ ಶಾಲೆಗೆ ಹೋಗದಿರುವುದು, ಕೆಲವು ಶಾಲಾ ವಿಷಯಗಳನ್ನು ಕಲಿಯುವುದರಲ್ಲಿ ತಾನು ಹಿಂದುಳಿದಿರುವೆ ಎಂಬ ಹುಸಿಕಲ್ಪನೆ, ಆರೋಗ್ಯ ಅಷ್ಟು ಸರಿಯಿಲ್ಲವಾದ್ದರಿಂದ ನಾನು ಓಡಾಡಲು ಅಸಮರ್ಥ: ತನ್ನ ಬೌದ್ಧಿಕ ಮತ್ತು ದೈಹಿಕ ಸಾಮರ್ಥ್ಯಗಳನ್ನು ಯಾವ ರೀತಿ

ಬಳಸಿಕೊಳ್ಳಬಹುದು ಎಂಬುದಕ್ಕೆ ಯುಕ್ತ ತರಬೇತಿ ದೊರೆತಿಲ್ಲವೆಂಬ ಧೋರಣೆ: ಯುಕ್ತ ಮಾರ್ಗದರ್ಶನದ ಅಭಾವದಿಂದಾಗಿ ಎಲ್ಲವೂ ಸ್ಥಗಿತ ಎಂಬ ಕಲ್ಪನೆ—ಇವೇ ಮೊದಲಾದವು. ಈ ಸನ್ನಿವೇಶಗಳು ಭೌತಿಕ ಸಮಸ್ಯೆಗಳಿಗೆ ನಾಂದಿ ಮಾಡಿಕೊಡುತ್ತವೆ. ಜೊತೆಗೆ ದೈಹಿಕ ಕಾರಣಗಳೆನಿಸುವ ದೀರ್ಘ ಕಾಲಿಕ ನರಳುವಿಕೆ, ಅಂಟುಜಾಡ್ಯಗಳೂ ಈ ಗುಂಪಿಗೆ ಸೇರುತ್ತವೆ.

ಸಮಸ್ಯೆಗಳಿಗೆ ಪ್ರೇರಕವಾಗಿರುವ ಸನ್ನಿವೇಶಗಳನ್ನು ಈ ರೀತಿ ವಿಶ್ಲೇಷಿಸಬಹುದು: ಹಿಡಿದ ಕೆಲಸವೊಂದನ್ನು ಪೂರ್ಣಮಾಡಲಾಗದೆ ಆರಂಭದಲ್ಲಿ ಇಲ್ಲವೆ ಆರಂಭವಾದ ಮೇಲೆ ವಿಘ್ನಗಳು ಬರುವ ಸನ್ನಿವೇಶ; ಹೇಗೂ ಕೆಲಸ ಮಾಡುತ್ತಿದ್ದಾಳಲ್ಲ ಮತ್ತಷ್ಟು ಕೆಲಸಮಾಡಲಿ ಎಂಬ ಭಾವನೆಯನ್ನು ಬೆಳೆಸಿಕೊಳ್ಳುವ ಸನ್ನಿವೇಶ; ಹೆಚ್ಚಿನ ಹೊರೆಯೆಂದೆನಿಸುವ ಕೆಲಸಗಳನ್ನು ನಿರ್ವಹಿಸಲು ಆಕೆಗೆ ಹೇಳುವ ಇಲ್ಲವೆ ಅವಳಿಂದ ನಿರೀಕ್ಷಿಸುವ ಸನ್ನಿವೇಶ; ಕೆಲಸ ಮಾಡಲು ಹೊರಟಾಗ ಕುಟುಂಬದ ಸದಸ್ಯರು ಸಹಕಾರ ನೀಡದಿರುವ ಸನ್ನಿವೇಶ; ಇಬ್ಬರು ವ್ಯಕ್ತಿಗಳ ನಡುವೆ ಅಪಾರ್ಥಗಳು ತಲೆದೋರುವಂಥ ಸನ್ನಿವೇಶ; ಅನಿಸಿಕೆ ಇಲ್ಲವೆ ಭಾವನೆಗಳನ್ನು ವ್ಯಕ್ತಪಡಿಸಲು ಸ್ವಾತಂತ್ರ ಇಲ್ಲದಿರುವಂಥ ಸನ್ನಿವೇಶ; ಕಠಿಣವಾದ ಕೆಲಸವನ್ನು ಒಂಟಿಯಾಗಿ ಮಾಡಲು ಬೇಸರವಾಗಿದ್ದರೂ ಇತರರ ಸಹಾಯವನ್ನು ಸಂಕೋಚದಿಂದ ಕೇಳಲಾಗದಿರುವಂಥ ಸನ್ನಿವೇಶ; ಮಾತಿನಲ್ಲಿ ದರ್ಪತೋರಿಸುವುದರಿಂದ, ಮನೆಯ ಯಜಮಾನನಾಗಿ ಪ್ರಯುಕ್ತವಾಗಿರುವ ಅಧಿಕಾರದಿಂದ, ಅತಿಯಾದ ವಿಶ್ಲೇಷಣೆ ಮಾಡುವುದು, ಸಂಶಯಾಸ್ಪದವಾದ ರೀತಿಯಲ್ಲಿ ವರ್ತಿಸುವುದು, ಹೆಚ್ಚಿನ ಅನಗತ್ಯ ಪ್ರಶ್ನೆಗಳನ್ನು ಕೇಳುವುದು ಮೊದಲಾದವು; ಇಂಥ ಸನ್ನಿವೇಶಗಳು ಉದ್ಯೋಗಸ್ಥ ಮಹಿಳೆಗೆ ಎದುರಾಗುವ ಸಮಸ್ಯೆಗಳಿಗೆ ಅವಕಾಶ ಮಾಡಿಕೊಡುತ್ತವೆ.

ಪರಿಹಾರ

ಅನುಭವ, ತರಬೇತಿ, ಆತ್ಮವಿಶ್ವಾಸ, ಅವಲೋಕನ, ಅರಿವು, ಸಮಯಪ್ರಜ್ಞೆ, ಕಾರ್ಯನಿಷ್ಠೆ, ಸಹಾಯಮನೋಭಾವ, ಯುಕ್ತಾಯುಕ್ತ ವಿವೇಚನೆ, ಧೃತಿ, ಉತ್ತಮ ಮನೋಭಾವ ಮುಂತಾದವುಗಳಿಂದಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನಮಾಡಬಹುದು. ಪರಿಸ್ಥಿತಿ ಏನೆಂಬುದನ್ನು ವಿಚಾರಮಾಡಿ ಅಕ್ರಮ, ಅನ್ಯಾಯ, ಅವ್ಯವಹಾರಗಳಲ್ಲಿ ಸಿಲುಕಿರುವವರನ್ನು ಬಿಡಿಸಬಹುದು. ಮೌನವಾಗಿ ತಲೆದೂಗುತ್ತ ಹೇಳಿದ ಇಲ್ಲವೆ ನಿಗದಿತ ಕೆಲಸಗಳನ್ನು ಮಾಡುವುದಕ್ಕೆ ಮೊದಲು ಪರೀಕ್ಷೆ, ಅವಲೋಕನ, ಯೋಜನೆಗಳು ಇದ್ದಲ್ಲಿ ಶೇಕಡ ೫೦ರಷ್ಟಾದರೂ ಮಾನಸಿಕ ಸಮಸ್ಯೆಗಳಿಂದ ಮುಕ್ತಿ ಲಭಿಸಬಹುದು. ವಿನಾಕಾರಣ ಅರ್ಥರಹಿತ ವಾದವಿವಾದಗಳಲ್ಲಿ ತೊಡಗುವ ಬದಲು ಅರ್ಥಪೂರ್ಣ ಕೆಲಸಗಳನ್ನು ಮಾಡುವುದರಿಂದಲೂ ಪರಿಸ್ಥಿತಿ ಸುಧಾರಿಸುತ್ತದೆ. ಇವಲ್ಲದೆ ವಿವಿಧ ರೀತಿಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು, ಸ್ವತಂತ್ರವಾಗಿ ಯುಕ್ತ ನಿರ್ಣಯಗಳನ್ನು ತೆಗೆದುಕೊಳ್ಳುವುದು, ಅತಿಯಾದ ಇಲ್ಲವೆ ಕಠಿಣ ನಿರ್ಬಂಧಗಳನ್ನು

ಸಡಿಲಗೊಳಿಸಿಕೊಳ್ಳುವುದು, ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಆಸಕ್ತಿ ಬೆಳೆಸಿಕೊಳ್ಳುವುದು. ಮಿತಭಾಷಿಯಾಗುವುದು, ತನ್ನಲ್ಲಿ ಇಲ್ಲದಿರುವ ಹಾಗೂ ಯುಕ್ತವೆನಿಸುವ ಜ್ಞಾನ, ಕೌಶಲ, ಸಾಮರ್ಥ್ಯ ಮತ್ತು ಆಸಕ್ತಿಗಳನ್ನು—ಇತರರನ್ನು ಅನುಕರಿಸುವುದರಿಂದ-ಬೆಳೆಸಿಕೊಳ್ಳುವುದು, ದುಶ್ಚಟಗಳಿಗೆ ಸಿಲುಕದಿರುವುದು, ವಿಶಾಲ ಮನೋಭಾವವನ್ನು ಬೆಳೆಸಿಕೊಳ್ಳುವುದು —ಮೊದಲಾದವುಗಳಿಂದಲೂ ಈ ಎಲ್ಲ ರೀತಿಯ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವುದು ಸಾಧ್ಯ. ಕೆಲವೊಂದು ಸಮಸ್ಯೆಗಳಿಗೆ ಒಮ್ಮೆಲೇ ಪರಿಹಾರ ಲಭಿಸುವುದಾದರೆ ಉಳಿದವುಗಳಿಗೆ ಸತತ ಪ್ರಯತ್ನವೇ ಬೇಕಾಗಬಹುದು. 'ತಾಳಿದವನು ಬಾಳಿಯಾನು' ಎಂಬ ಹೇಳಿಕೆಯಂತೆ ಸಹನೆ, ವಿವೇಚನೆ, ಸಹಕಾರಗಳಿಂದ ಸಾಧಿಸಲಾಗದ ಅಂಶಗಳಿಲ್ಲ.

ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಲು ಈ ಮುಂದೆ ಸೂಚಿಸಿರುವ ಹಂತಗಳನ್ನು ಕುಟುಂಬದ ಪ್ರತಿಯೊಬ್ಬ ಸದಸ್ಯನೂ ಅನುಸರಿಸಬಹುದು :

೧) ಮೌನವಾಗಿ ಪರಿಸರದ ಅಧ್ಯಯನ.

೨) ಸಮಸ್ಯೆಗಳನ್ನು ಪತ್ತೆ ಹಚ್ಚಿ ಪಟ್ಟಿ ಮಾಡುವುದು.

೩) ಅವುಗಳ ಸ್ವರೂಪದ ಪರೀಕ್ಷೆ.

೪) ಅವಶ್ಯಕತೆ ಇದ್ದಲ್ಲಿ ಅವುಗಳ ವರ್ಗೀಕರಣ.

೫) ಒತ್ತಡ ಬೀರುವ ಅಂಶಗಳ ನಿರ್ಮೂಲನ.

೬) ಸಹಕಾರ ಮತ್ತು ಬೆಂಬಲಗಳನ್ನು ಕುಟುಂಬದ ಇತರ ಸದಸ್ಯರಿಗೆ ನೀಡುವುದು.

೭) ಕರ್ತವ್ಯ ಮತ್ತು ಹೊಣೆಗಾರಿಕೆಗಳನ್ನು ಅರ್ಥಮಾಡಿಕೊಳ್ಳುವುದು.

೮) ನಿರ್ವಹಿಸಬೇಕಾಗಿರುವ ಪಾತ್ರಗಳ ಬಗ್ಗೆ ಅರಿವು ಬೆಳೆಸಿಕೊಳ್ಳುವುದು.

೯) ಅಗತ್ಯವಿದ್ದಲ್ಲಿ ಕುಟುಂಬದ ಇತರ ಸದಸ್ಯರ ಮನೋಭಾವಗಳನ್ನು ಬದಲಾಯಿಸುವುದು.

೧೦) ಆದ್ಯತೆಯ ಆಧಾರದ ಮೇಲೆ ಪರಿಹಾರ ಕಂಡುಕೊಳ್ಳುವುದು.

ಶಿಕ್ಷಣದ ಕೊಡುಗೆ

'ಸ್ತ್ರೀಣಾಂ ಅಶಿಕ್ಷಿತಪಟುತ್ವಂ' ಎಂಬ ಹೇಳಿಕೆಯಲ್ಲಿ ಹೆಣ್ಣಿಗೆ ತರಬೇತಿಯ ಅವಶ್ಯಕತೆ ಇಲ್ಲವೆಂಬುದು ಸ್ಪಷ್ಟವಾಗಿದೆ. ಆದರೆ ನೆಹರೂ, ಡಾ|| ರಾಧಾಕೃಷ್ಣನ್ ಮುಂತಾದ ತಜ್ಞರೂ, ಈ ದಿಶೆಯಲ್ಲಿ ಕಾರ್ಯೋನ್ಮುಖವಾಗಿರುವ ಕೆಲವೊಂದು ಸಲಹಾಸಮಿತಿಗಳೂ ಮಹಿಳಾ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟಿವೆ. ಎತ್ತಿನಗಾಡಿ ಇಲ್ಲವೆ ಕುದುರೆ ಗಾಡಿಗೆ ಎರಡು ಚಕ್ರಗಳು ಹೇಗೆ ಅವಶ್ಯವೋ ಹಾಗೆಯೇ ಜೀವನವೆಂಬ ಗಾಡಿಗೆ ಹೆಣ್ಣು ಗಂಡುಗಳೆಂಬ ಇಬ್ಬರು ವ್ಯಕ್ತಿಗಳು ಅನಿವಾರ್ಯ. ಜೀವನರಥ ಸುಗಮವಾಗಿ ಸಾಗಬೇಕಾದರೆ ಇವರಿಬ್ಬರ ನಡುವೆ ಸಹಕಾರ, ಹೊಂದಾಣಿಕೆ, ಐಕಮತ್ಯ, ವಿವೇಚನೆ, ವೈಚಾರಿಕತೆ ಮುಂತಾದವುಗಳು ಇರಬೇಕು. ಒಂದು

ವೇಳೆ ಇವರಿಬ್ಬರಲ್ಲಿ ಒಬ್ಬರು ತಪ್ಪು ಮಾಡಿದರೆ ಅದನ್ನು ಇನ್ನೊಬ್ಬರು ಕ್ಷಮಿಸುವುದು ಮಾತ್ರವಲ್ಲ ಮರೆಯಲೂ ಬೇಕು. ಇದು ಶಿಕ್ಷಣದ ಪ್ರಭಾವ. ಆತ್ಮವಿಶ್ಲೇಷಣೆ, ಸ್ವನಿಯಂತ್ರಣ, ಕ್ರಮಬದ್ಧವಾಗಿ ಕೆಲಸ ಮಾಡುವುದು. ಉದ್ವೇಗ, ಆತಂಕ, ಘರ್ಷಣೆ, ದ್ವಂದ್ವ ಮತ್ತು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು, ಯಾವುದೇ ಕೆಲಸವಾಗಿರಲಿ ವೀಕ್ಷಣೆ, ಯೋಜನೆ, ಸಂಘಟನೆಗಳ ಬಳಿಕವೇ ಅದನ್ನು ಆರಂಭಿಸುವುದು, ನಾವೆಲ್ಲ ಒಂದೇ ಎಂಬ ಮನೋಭಾವವನ್ನು ಬೆಳೆಸಿಕೊಳ್ಳುವುದು, ಕೈಹಾಕಿದ ಕೆಲಸಕ್ಕೆ ಇರುವ ಇಲ್ಲವೆ ಬರುವ ಅಡ್ಡಿ ಅಡಚಣೆಗಳಿಗೆ ನಿವಾರಣೆಗಳನ್ನು ಹುಡುಕುವುದು, — ಮುಂತಾದವುಗಳೆಲ್ಲ ಶಿಕ್ಷಣದಿಂದ ಲಭ್ಯವಾದವುಗಳೇ. ಮಹಿಳೆ ಉನ್ನತಮಟ್ಟದ ಶಿಕ್ಷಣವನ್ನು ಪಡೆದಂತೆ ಆಕೆಯ ಗ್ರಹಿಕೆ ಮತ್ತು ಮನೋಭಾವಗಳೂ ಉತ್ತಮವಾಗುವುವು. ಇದರ ಪರಿಣಾಮವಾಗಿ ವಿವಿಧ ಕ್ಷೇತ್ರಗಳಲ್ಲಿ ಆಕೆಯ ಹೊಂದಾಣಿಕೆಗಳೂ ಉತ್ತಮಗೊಳ್ಳುತ್ತವೆ.

ಉಪ ಸಂಹಾರ

ಸಹನೆಗೆ, ಕ್ಷಮೆಗೆ ಇರುವ ಇನ್ನೊಂದು ಹೆಸರು ಹೆಣ್ಣು. ತನ್ನ ಕುಟುಂಬದವರ ಮನವರಿತು, ಪರಿಸ್ಥಿತಿ ಹಾಗೂ ಸಮಯಕ್ಕೆ ತಕ್ಕಂತೆ ವರ್ತಿಸುತ್ತ ಕಾರ್ಯೋನ್ಮುಖಳಾಗುವಳು. ತನಗೇ ಎಷ್ಟೇ ತೊಂದರೆ, ನೋವು, ಸಮಸ್ಯೆಗಳಿದ್ದರೂ ಅವುಗಳನ್ನು ನುಂಗಿಕೊಂಡು, ಮಮತೆ, ಸೌಜನ್ಯ ಸಹಕಾರಗಳಿಂದ ತನ್ನವರಿಗೆ ದಾರಿ ತೋರುವಳು. ಪತಿರಾಯರ ಆಕಾಂಕ್ಷೆ, ವೃದ್ಧರ ಅಪೇಕ್ಷೆ ಇಲ್ಲವೆ ನಿರೀಕ್ಷೆ, ಕಿರಿಯರ ಕನಸುಗಳನ್ನು ಅರಿತು ಅವರವರ ಕಾರ್ಯಗಳಿಗೆ ಅನುಕೂಲ ಸಿಂಧುವಾಗಿರುವವಳೇ ಹೆಣ್ಣು. ಮಹಿಳೆ ಇಲ್ಲವೆ ಹೆಣ್ಣಿನ ಸಮಸ್ಯೆಗಳ ಪರಿಹಾರಕ್ಕೆ ಅವಕಾಶವಿಲ್ಲದಿದ್ದರೆ ಕುಟುಂಬ, ರಾಜ್ಯ, ಹಾಗೂ ರಾಷ್ಟ್ರಗಳ ಅಭಿವೃದ್ಧಿ ದುಸ್ಸಾಧ್ಯ. ಆದ್ದರಿಂದ ಪ್ರತಿಯೊಬ್ಬ ಮಹಿಳೆಯೂ ಈ ತತ್ತ್ವಗಳನ್ನು ಮನವರಿಕೆ ಮಾಡಿಕೊಂಡು ಅತ್ಯಗತ್ಯವಾದ ಗುಣಲಕ್ಷಣಗಳನ್ನು ಬೆಳೆಸಿಕೊಂಡು ತನ್ನ ಪಾತ್ರಗಳನ್ನು ಯಾವಾಗ, ಏಕೆ ಮತ್ತು ಹೇಗೆ ನಿರ್ವಹಿಸಬೇಕೆಂಬುದನ್ನು ಅರ್ಥಮಾಡಿಕೊಂಡು ವರ್ತಿಸಿದರೆ, ಲೇಸಪ್ಪ ಮಹಿಳೆ ಮನೆಯೊಳಗಿದ್ದರೆ ಆ ಮನೆ ಆ ಮನೆಯೇ ಸ್ವರ್ಗ ಸದೃಶವಾಗುತ್ತದೆ. ಪ್ರತಿಯೊಂದು ಕೆಲಸ, ಯೋಜನೆ, ವಸ್ತು, ಕಟ್ಟಡಗಳಿಗೆ ಹೇಗೆ ಮಿತಿ ಇದೆಯೋ ಹಾಗೆಯೇ ಹೆಣ್ಣಿನ ಸಹನೆ, ತಾಳ್ಮೆಗೆ ಇಲ್ಲವೆ ಮಾಡುವ ಕೆಲಸಗಳಿಗೂ ಇತಿಮಿತಿಗಳುಂಟು.

ಕುಟುಂಬದ ಸದಸ್ಯರ ಬೆಂಬಲ, ಮಮತೆ, ಸಹಕಾರಗಳಿಂದ ಬಂಧಿತಳಾದ ಇಲ್ಲವೆ ಕೃತಕ ಅನುಕೂಲಗಳಿಗೆ ಈಡಾದ ಹೆಣ್ಣಿಗೆ ಸಮಸ್ಯೆಗಳು ಇರಲು ಸಾಧ್ಯವೇ, ಕೆಲವು ಸಮಸ್ಯೆಗಳು ತಾತ್ಕಾಲಿಕವಾಗಿ ಬಂದುಹೋಗಬಹುದು, ಮತ್ತೆ ಕೆಲವು ಒಂದು ಕ್ಷಣಮಾತ್ರದಲ್ಲಿ ಅದೃಶ್ಯವಾಗಬಹುದು. ಆದರೆ ಮಹಿಳೆ ಕಠಿಣವಾದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ದೃಢಪ್ರಯತ್ನಿಸಿದ್ದೇ ಆದರೆ ಸಮಸ್ಯೆಗಳಿಗೆ ಪರಿಹಾರ ಶತಸಿದ್ಧ.

ಮಹಿಳೆಯ ಸಮಸ್ಯೆಗಳು ಎಂದಾಕ್ಷಣ ಅವು ಆಕೆಗೆ ಮಾತ್ರ ಸಂಬಂಧಪಟ್ಟವೆ ಕುಟುಂಬದ ಇತರ ಸದಸ್ಯರಿಗೆ ಇವು ಸಂಬಂಧಪಟ್ಟಿಲ್ಲ ಎನ್ನುವುದು ಸರಿಯಲ್ಲ. ತಲೆಮಾರುಗಳಿಂದ ಬಂದಿರುವ ಆಸ್ತಿಯನ್ನು ಕುಟುಂಬದ ಸದಸ್ಯರ ನಡುವೆ ಹಂಚಿದಾಗ ಪಾಲು ತೆಗೆದುಕೊಂಡವರಿಗೆ ಎಷ್ಟು ಸಂತೋಷವಾಗುತ್ತದೆಯೋ, ಹಂಚಿದವರಿಗೆ ಹೇಗೆ ನೆಮ್ಮದಿ ಸಿಗುತ್ತದೆಯೋ ಹಾಗೆಯೇ ಮಹಿಳೆಯ ಜವಾಬ್ದಾರಿ, ಸಮಸ್ಯೆ, ಕರ್ತವ್ಯ ಮತ್ತು ಪಾತ್ರಗಳನ್ನು ಕುಟುಂಬದ ಇತರ ಸದಸ್ಯರು ಹಂಚಿಕೊಂಡು ಧ್ಯೇಯ ಸಾಧನೆಗಾಗಿ ಅರ್ಥಾತ್ ಸಮಸ್ಯೆಗಳ ಪರಿಹಾರಕ್ಕಾಗಿ ಸಾಮೂಹಿಕವಾಗಿ ಕೆಲಸ ಮಾಡಿದಾಗ ಆಕೆಗೆ ಹೆಚ್ಚಿನ ಮಟ್ಟದಲ್ಲಿ ಸಂತೋಷ ಮಾತ್ರವಲ್ಲ ತೃಪ್ತಿಯೂ ಸಿಗುತ್ತದೆ. ಇದು ಚಿರಂತನವಾದುದು.



—ಭಾರತದ ಜನಸಂಖ್ಯೆಯು ಆಫ್ರಿಕಾ ಖಂಡದ ಎಲ್ಲಾ ರಾಜ್ಯಗಳೂ ಹಾಗೂ ಲ್ಯಾಟಿನ್ ಅಮೆರಿಕಾದ ಒಟ್ಟು ಜನಸಂಖ್ಯೆಗೆ ಸಮನಾಗಿದೆ. ಹೀಗೆ ಒಂದೇ ಸಮನೆ ಏರುತ್ತಿರುವ ಭಾರತವು ಕ್ರಿ. ಶ. ೨೦೦೦ದ ಹೊತ್ತಿಗೆ ೧೦೦೦ ದಶಲಕ್ಷ ಜನರಿಂದ ತುಂಬಿರುತ್ತದೆ ಎಂದು ವಿಶ್ವಸಂಸ್ಥೆಯ ತಜ್ಞರ ಅಭಿಪ್ರಾಯ.

ಅರಿವಳಿಕೆ ಶಾಸ್ತ್ರ

ಡಾ|| ಅರುಣ ಸಿ. ರಮೇಶ್
೨೬೮, ೧೬ನೆಯ ಅಡ್ಡರಸ್ತೆ
ಸದಾಶಿವನಗರ, ಬೆಂಗಳೂರು-೮೦

ಅರಿವಳಿಕೆ ಶಾಸ್ತ್ರ—ಇಂದು

೧೯ನೇ ಶತಮಾನದ ಮಧ್ಯಭಾಗದಲ್ಲಿ ಈಥರ್ ಎಂಬ ವಸ್ತುವಿನ ಅನ್ವೇಷಣೆಯೊಂದಿಗೆ ಆಧುನಿಕ ಅರಿವಳಿಕೆ ಶಾಸ್ತ್ರ ಪ್ರಾರಂಭವಾಯಿತು. ಇಂದು ಶಸ್ತ್ರಚಿಕಿತ್ಸೆಯನ್ನು ಸುರಕ್ಷಿತವಾಗಿ ಮಾಡಲು ಹಲವು ರೀತಿ ಸುಧಾರಣೆಯಾಗಿದೆ. ಅರಿವಳಿಕೆಯೆಂದರೆ "ವೇದನಾರಹಿತ" (ಅರಿವನ್ನು ಅಳಿಸುವುದು –ಅರ್ಥಾತ್ ವೇದನೆಯ ಅರಿವು ಇಲ್ಲದಂತೆ ಮಾಡುವುದು ಎಂದರ್ಥ) ಆದರೆ ಅರಿವಳಿಕೆ ಶಾಸ್ತ್ರದ ಅನುಷ್ಠಾನ ಅರಿವಳಿಕೆಯನ್ನು ನೀಡುವುದಕ್ಕಿಂತ ಹೆಚ್ಚಿನದನ್ನು ಬಯಸುತ್ತದೆ. ಅದು ಶಸ್ತ್ರಚಿಕಿತ್ಸೆಯಾಗುವಾಗ ನಂತರದ ರೋಗಿಯ ಶುಶ್ರೂಷೆ ಮತ್ತು ಶಿಶು ವೈದ್ಯಶಾಸ್ತ್ರ, ಹೃದ್ರೋಗಶಾಸ್ತ್ರ, ಪ್ರಸೂತಿಶಾಸ್ತ್ರ ಮತ್ತು ತೀವ್ರ ಚಿಕಿತ್ಸಾ ಶಾಸ್ತ್ರದ ಕುರಿತಾದ ವಿಶೇಷ ಜ್ಞಾನವನ್ನು ಸಹ ಒಳಗೊಳ್ಳುತ್ತದೆ.

ಅರಿವಳಿಕೆ ತಜ್ಞರು

ಶಸ್ತ್ರಚಿಕಿತ್ಸಾ ವಿಧಾನಗಳು ಹೆಚ್ಚು ಹೆಚ್ಚು ಸಂಕೀರ್ಣವಾಗುತ್ತಿದ್ದಂತೆ ವೃದ್ಧರು, ನವಜಾತ ಶಿಶು ಮತ್ತು ಇನ್ನಿತರ ಹೆಚ್ಚು ಅಪಾಯಕಾರಿ ದೇಹಸ್ಥಿತಿಯಿಂದ ರೋಗಿಗಳ ಮೇಲೆ ಶಸ್ತ್ರ ಚಿಕಿತ್ಸೆಗಳನ್ನು ಮಾಡುವ ಅವಶ್ಯಕತೆ ಹೆಚ್ಚುತ್ತಿದೆ. ಶಸ್ತ್ರಚಿಕಿತ್ಸಾ ಕಾಲದಲ್ಲಿ ಅತ್ಯಾವಶ್ಯಕ ಜೀವ ಪ್ರಕ್ರಿಯೆಗಳನ್ನು ನಿಯಂತ್ರಿಸುವ ಓರ್ವ ವೈದ್ಯರ ಅವಶ್ಯಕತೆ ಹೆಚ್ಚಾಗುತ್ತದೆ. ಈ ವಿಶೇಷ ಅವಶ್ಯಕತೆಯನ್ನು ಪೂರೈಸುವವರೇ ಇಂದಿನ ಅರಿವಳಿಕೆ ತಜ್ಞರು. ಸುರಕ್ಷಿತ ಹಾಗೂ ವೇದನಾರಹಿತ ಶಸ್ತ್ರಚಿಕಿತ್ಸೆಗೆ ಅನುವುಮಾಡಿಕೊಡಲು ಇಡೀ ದೇಹವನ್ನು ಅಥವಾ ದೇಹದ ಒಂದು ಭಾಗವನ್ನು ನಿಶ್ಚೇತನಗೊಳಿಸಲು ಆಧುನಿಕ ತಂತ್ರಜ್ಞಾನವನ್ನು ಬಳಸುವ ಓರ್ವ ವೈದ್ಯರು. ಶಸ್ತ್ರಚಿಕಿತ್ಸಾ ವಿಧಾನ, ನಿಮ್ಮ ಆರೋಗ್ಯದ ಚರಿತ್ರೆ ಮತ್ತು ನಿಮ್ಮ ವೈಯಕ್ತಿಕ ಇಚ್ಛೆಗಳನ್ನೆಲ್ಲ ಕೂಲಂಕಸವಾಗಿ ಯೋಚಿಸಿ, ನಿಮಗೆ ಸೂಕ್ತ ಅರಿವಳಿಕೆ ಯಾವುದೆಂಬುದರ ಬಗ್ಗೆ ಅವರು ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತಾರೆ.

ಅರಿವಳಿಕೆ ತಜ್ಞರ ಪಾತ್ರ

ಭಾರತದಲ್ಲಿ ಪ್ರತಿವರ್ಷವೂ ಅಧಿಕ ಪ್ರಮಾಣದಲ್ಲಿ ಶಸ್ತ್ರಚಿಕಿತ್ಸೆಗಳು ನಡೆಯುತ್ತಿದ್ದು, ಈ ಸಂಖ್ಯೆ ಹೆಚ್ಚುತ್ತಲೇ ಇದೆ. ಹಿಂದೆ ಅಪರೂಪಕ್ಕೆ ನಡೆಯುತ್ತಿದ್ದ ಹೊಸ ಹೊಸ ಶಸ್ತ್ರಚಿಕಿತ್ಸೆಗಳು ಇಂದು ಅನೇಕ ಆಸ್ಪತ್ರೆಗಳಲ್ಲಿ ದಿನ ನಿತ್ಯವೂ ನಡೆಯುತ್ತಿವೆ.

ಅಧಿಕ ಸಂಕೀರ್ಣ ಶಸ್ತ್ರಚಿಕಿತ್ಸಾ ವಿಧಾನಗಳೆಂದರೆ ಬಹಳಷ್ಟು ಸಲ ರೋಗಿಯನ್ನು ದೀರ್ಘಕಾಲ ಅರಿವಳಿಕೆಗೆ ಒಳಪಡಿಸಬೇಕಾಗುತ್ತದೆ. ಇವೆಲ್ಲಾ ಕಾರಣಗಳಿಂದ ಅರಿವಳಿಕೆ ತಜ್ಞರು ಶಸ್ತ್ರಚಿಕಿತ್ಸಾ ಕೂಟದ ಒಂದು ಪ್ರಮುಖ ಅಂಗವಾಗಿದ್ದಾರೆ.

ಶಸ್ತ್ರಚಿಕಿತ್ಸಾ ಪೂರ್ವ ಭೇಟಿ

ಶಸ್ತ್ರಚಿಕಿತ್ಸೆಯ ಮುನ್ನ ಅರಿವಳಿಕೆ ತಜ್ಞರು ನಿಮ್ಮ ಕೊಠಡಿಯಲ್ಲೇ ನಿಮ್ಮನ್ನು ಭೇಟಿಮಾಡಬಹುದು. ನಿಮ್ಮ ಅರಿವಳಿಕೆಯ ಬಗ್ಗೆ ಪ್ರಶ್ನಿಸಲು ಈ ಅವಕಾಶವನ್ನು ಉಪಯೋಗಿಸಿಕೊಳ್ಳಿ. ಈ ಅರಿವಳಿಕೆ ತಜ್ಞರು ನಿಮ್ಮ ಆರೋಗ್ಯದ ಬಗ್ಗೆ ಹಾಗೂ ನೀವು ಈ ಹಿಂದೆ ಒಳಗಾಗಿರಬಹುದಾದಂತಹ ಶಸ್ತ್ರಚಿಕಿತ್ಸೆಯ ಬಗ್ಗೆ ನಿಮ್ಮನ್ನು ಪ್ರಶ್ನಿಸಬಹುದು.

ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ

ಶಸ್ತ್ರಚಿಕಿತ್ಸೆಯ ಕಾಲದಲ್ಲಿ ನೀವು ಭಯಪಡದಂತೆ ನಿಮಗೆ ನೋವು ತಿಳಿಯದಂತೆ ನೋಡಿಕೊಳ್ಳುವ ಜವಾಬ್ದಾರಿ ಅರಿವಳಿಕೆ ತಜ್ಞರದು, ಜೊತೆಗೆ ಅವರು ನಿಮ್ಮ ಅತ್ಯಾವಶ್ಯಕ ಜೀವ ಪ್ರಕ್ರಿಯೆಗಳನ್ನು ನಿಯಂತ್ರಿಸುವರು.

ಶಸ್ತ್ರಚಿಕಿತ್ಸೆಯ ಅನಂತರ

ಶಸ್ತ್ರಚಿಕಿತ್ಸಾನಂತರ, ನೀವು ಸ್ವಸ್ಥಿತಿಗೆ ಮರಳುವಂತೆ ನೋಡಿಕೊಳ್ಳುವ ಜವಾಬ್ದಾರಿ ಅರಿವಳಿಕೆ ತಜ್ಞರದು. ಇಲ್ಲಿ ವಿಶೇಷ ಪರಿಣತಿಯುಳ್ಳ ದಾದಿಯರು ನಿಮ್ಮ ರಕ್ತದ ಒತ್ತಡ ಪರೀಕ್ಷಿಸಿ ಉಸಿರಾಟವನ್ನು ಗಮನಿಸುತ್ತಾರೆ.

ಅರಿವಳಿಕಾ ವಸ್ತುವಿನ ಆಯ್ಕೆ

ಶಸ್ತ್ರ ವೈದ್ಯರ ಬಳಿ ಚರ್ಚಿಸಿದ ನಂತರ ನಿಮಗೆ ನೀಡುವ ಅರಿವಳಿಕೆ ವಸ್ತುವಿನ ಆಯ್ಕೆ ಹಾಗೂ ಅದನ್ನು ನೀಡುವ ಬಗ್ಗೆ ನಿರ್ಧಾರವಾಗುತ್ತದೆ. ನಿಮ್ಮ ಹಿಂದಿನ ವೈದ್ಯಕೀಯ ಹಾಗೂ ಶಸ್ತ್ರ ಚಿಕಿತ್ಸೆಯ ಚರಿತ್ರೆ, ನಿಮ್ಮ ಈಗಿನ ಆರೋಗ್ಯದ ಸ್ಥಿತಿ ಹಾಗೂ ಶಸ್ತ್ರಚಿಕಿತ್ಸೆಯ ಗುಣಲಕ್ಷಣ ಇವುಗಳ ಆಧಾರದ ಮೇಲೆ ಅರಿವಳಿಕೆ ತಜ್ಞರು ಸೂಕ್ತವಾದ ಅರಿವಳಿಕೆ ವಿಧಾನವನ್ನು ನಿರ್ಧರಿಸುತ್ತಾರೆ.

ಶಸ್ತ್ರಚಿಕಿತ್ಸಾ ತಜ್ಞರು

ಶಸ್ತ್ರ ಚಿಕಿತ್ಸೆಗೆ ಹೊಂದುವಂತೆ ಒಂದು ನಿರ್ದಿಷ್ಟ ಅರಿವಳಿಕೆ ವಸ್ತುವನ್ನು ನೀಡುವಂತೆ ಶಸ್ತ್ರ ಚಿಕಿತ್ಸಾ ತಜ್ಞರು ಸೂಚಿಸಬಹುದು. ಕೆಲವು ವಿಧಾನಗಳಿಗೆ ಸಾಮಾನ್ಯ ಅಥವಾ ಸ್ಥಳೀಯ ಅರಿವಳಿಕೆಯ ನಡುವೆ ಆಯ್ಕೆ ಇರಬಹುದು. ಶಸ್ತ್ರ ಚಿಕಿತ್ಸಾ ತಜ್ಞರು ಅರಿವಳಿಕೆ ತಜ್ಞರೊಡನೆ ಈ ವಿವಿಧ ಆಯ್ಕೆಗಳ ಬಗ್ಗೆ ವಿವರವಾಗಿ ಚರ್ಚಿಸುತ್ತಾರೆ.

ರೋಗಿ

ಶಸ್ತ್ರ ಚಿಕಿತ್ಸಾ ಪೂರ್ವದ ಭೇಟಿಯ ಕಾಲದಲ್ಲಿ ಅರಿವಳಿಕೆ ತಜ್ಞರು ರೋಗಿಗೆ ನೀಡಬಹುದಾದ ವಿಭಿನ್ನ ಅರಿವಳಿಕೆಯ ಬಗ್ಗೆ ಚರ್ಚಿಸುತ್ತಾರೆ. ಆಯ್ಕೆಗೆ ಅವಕಾಶ ಇದ್ದಲ್ಲಿ ಅವರು ರೋಗಿಯ ಅಭಿಪ್ರಾಯವನ್ನು ಕೇಳಬಹುದು. ಅರಿವಳಿಕೆ ತಜ್ಞರು ಪ್ರತಿಯೊಂದು ಅರಿವಳಿಕೆಯ ಸಾಪೇಕ್ಷ ಪ್ರಯೋಜನ ಹಾಗೂ ಇತಿಮಿತಿಗಳ ಬಗ್ಗೆ ರೋಗಿಯೊಂದಿಗೆ ಸಮಾಲೋಚಿಸುವರು.

ಅರಿವಳಿಕೆಯ ವಿಧಾನಗಳು—ಒಂದು ಪಕ್ಷಿನೋಟ

ಸಾಮಾನ್ಯ ಹಾಗೂ ಸ್ಥಳೀಯ ಎಂಬ ಎರಡು ಅರಿವಳಿಕೆ ವಿಧಾನಗಳಿವೆ. ಇಡೀ ಶರೀರವನ್ನು ನಿಶ್ಚೇತನಗೊಳಿಸುವ ಸಾಮಾನ್ಯ ಅರಿವಳಿಕೆಯನ್ನು ಚುಚ್ಚುಮದ್ದು, ಆಮ್ಲ ಜನಕ ಮತ್ತು ಅರಿವಳಿಕೆ ವಸ್ತುವಿನ ಮಿಶ್ರಣದ ಮೂಲಕ ನೀಡಬಹುದು. ಸ್ಥಳೀಯ ಅರಿವಳಿಕೆ ದೇಹದ ಒಂದು ಭಾಗವನ್ನು ಮಾತ್ರ ನಿಶ್ಚೇತನಗೊಳಿಸುತ್ತದೆ. ಅದನ್ನು ಬೆನ್ನುಹುರಿಯ ಬಳಿ ಚುಚ್ಚುಮದ್ದಾಗಿ ಅಥವಾ ಕೈ, ಕಾಲು, ಶರೀರದ ಇತರ ಭಾಗಗಳ ನರಗಳ ಮಾರ್ಗದಲ್ಲಿಯೂ ಚುಚ್ಚುಮದ್ದಾಗಿ ನೀಡಬಹುದು.

ಸಾಮಾನ್ಯ ಅರಿವಳಿಕೆ

ಸುದೀರ್ಘ ಮರೆವು ಮತ್ತು ಅತ್ಯಾವಶ್ಯಕ ಜೀವ ಪ್ರಕ್ರಿಯೆಗಳನ್ನು ನಿಯಂತ್ರಿಸುವ ಅವಶ್ಯಕತೆಯಿರುವ ಶಸ್ತ್ರ ಚಿಕಿತ್ಸಾ ವಿಧಾನಗಳಿಗೆ ಸಾಮಾನ್ಯ ಅರಿವಳಿಕೆಯನ್ನು ಉಪಯೋಗಿಸಬೇಕಾಗುತ್ತದೆ. ರೋಗಿಯ ಮೆದುಳನ್ನು ಒಳಗೊಂಡಂತೆ ಇಡೀ ಶರೀರವನ್ನು ನಿಶ್ಚೇತನಗೊಳಿಸುವುದರಿಂದ ನೋವುಂಟಾಗುವುದಿಲ್ಲ. ಶಸ್ತ್ರ ಚಿಕಿತ್ಸೆ ಅಥವಾ ನಂತರದ ಕಾಲದ ಬಗ್ಗೆ ರೋಗಿಗೆ ಸ್ಮರಣೆಯಿರುವುದಿಲ್ಲ. ಸಾಮಾನ್ಯ ಅರಿವಳಿಕೆಯನ್ನು ರಕ್ತನಾಳದೊಳಗೆ ಅರಿವಳಿಕೆ ದ್ರವವನ್ನು ಚುಚ್ಚುಮದ್ದಾಗಿ ಒಂದು ಯಂತ್ರದಿಂದ ಅನಿಲದ ರೂಪದಲ್ಲಿ ಮುಖವಾಡ ಅಥವಾ ನಳಿಕೆಯ ಮೂಲಕವೂ ನೀಡಬಹುದು.

ಬೆನ್ನುಹುರಿ ಅರಿವಳಿಕೆ

ಬೆನ್ನು ಹುರಿಯಲ್ಲಿ ಅರಿವಳಿಕೆ ದ್ರವವನ್ನು ಚುಚ್ಚುಮದ್ದಾಗಿ ನೀಡಿದರೆ ದೇಹದ ಕೆಳಭಾಗ ನಿಶ್ಚೇತನಗೊಳ್ಳುತ್ತದೆ. ಈ ರೀತಿಯ ಅರಿವಳಿಕೆ ಉದರ, ಕಾಲುಗಳ ಶಸ್ತ್ರಚಿಕಿತ್ಸೆಗೆ, ಅವಶ್ಯವಿದ್ದಲ್ಲಿ ಹೆರಿಗೆಗೆ ಸಹಕಾರಿಯಾಗುತ್ತದೆ. ಈ ಅರಿವಳಿಕೆಯ ಒಂದು ಪ್ರಯೋಜನವೆಂದರೆ ರೋಗಿ ಎಚ್ಚರವಾಗಿದ್ದು ವೈದ್ಯರ ಸೂಚನೆಗಳಿಗೆ ಸ್ಪಂದಿಸಬಹುದು. ಶಸ್ತ್ರ ಚಿಕಿತ್ಸಾ ಕಾಲದಲ್ಲಿ ರೋಗಿ ಆರಾಮವಾಗಿರುವಂತೆ ಮತ್ತು ಬರುವ ಔಷಧಗಳನ್ನು ನೀಡಬಹುದು.

ನೋವು ತಡೆ

ಕೈಕಾಲು ಹಾಗೂ ದೇಹದ ಇನ್ನಿತರೆ ಭಾಗಗಳಲ್ಲಿನ ನರಗಳ ಸುತ್ತ ಅರಿವಳಿಕೆ ವಸ್ತುವಿನ ಚುಚ್ಚುಮದ್ದು ನೀಡಿ ನೋವನ್ನು ತಡೆಯಬಹುದು. ಇದು ಹಲ್ಲು ನೋವನ್ನು ತಡೆಯಲು ದಂತವೈದ್ಯರು ನೀಡುವ ಚುಚ್ಚುಮದ್ದಿನಂತೆ ಬೆನ್ನುಹುರಿ ಅರಿವಳಿಕೆಯ ಎಲ್ಲ ಉಪಯೋಗಗಳು ಇಲ್ಲಿ ಒಂದು ಭಾಗವನ್ನು ಮಾತ್ರ ನಿಶ್ಚೇತನಗೊಳಿಸುವ ಅಧಿಕ ಉಪಯೋಗವೂ ಇದೆ. ಇದನ್ನು ದೇಹದ ಯಾವ ಭಾಗದಲ್ಲಾದರೂ ಉಪಯೋಗಿಸಬಹುದು.

ಐ. ವಿ. ಅರಿವಳಿಕೆ

ಇದರಲ್ಲಿ ೪ ವಿಧಗಳಿವೆ :

ಬಾರ್ಬಿಟುರೇಟ್ಸ್—ಶೀಘ್ರ ಕೆಲಸ ಮಾಡುತ್ತದೆ. ಬೇಗ ಪ್ರಜ್ಞೆ ಮರಳುತ್ತದೆ.

ನಾರ್ಕೋಟಿಕ್ಸ್—ನೋವು ಶಮನಕಾರಿಗಳು, ಇನ್ನಿತರ ನಿದ್ರೆ ಬರುವ ವಸ್ತುಗಳೊಡನೆ ಉಪಯೋಗಿಸಲ್ಪಡುತ್ತದೆ.

ಸೆಡೆಟಿವ್ಸ್—ಇತರ ಅರಿವಳಿಕೆ ವಸ್ತುಗಳ ಗತಿಯನ್ನು ಶೀಘ್ರಗೊಳಿಸುತ್ತದೆ.

ಡಿಸೋಸಿಯೆಟಿವ್ ಏಜೆಂಟ್ಸ್—ಇನ್ನಿತರ ವಸ್ತುಗಳೊಡನೆ ಬಳಸಬಹುದು.

ಅನಿಲ ಅರಿವಳಿಕೆ ವಸ್ತುಗಳನ್ನು ನೀಡುವ ಬಗೆ

ಇವನ್ನು ಐ.ವಿ. ಅರಿವಳಿಕೆ ವಸ್ತುವಿನೊಡನೆ ಉಪಯೋಗಿಸುತ್ತಾರೆ. ಇದನ್ನು ಉಸಿರಿನೊಂದಿಗೆ ತೆಗೆದುಕೊಳ್ಳುವುದರಿಂದ ಬೇಗ ಕೆಲಸ ಮಾಡುತ್ತದೆ. ಶರೀರವು ಇವನ್ನು ಬೇಗ ಹೊರಹಾಕುವುದರಿಂದ ಶಸ್ತ್ರಚಿಕಿತ್ಸೆಯ ಬಳಿಕ ಬಹಳ ಕಾಲ ಇವುಗಳ ಪ್ರಭಾವವಿರುವುದಿಲ್ಲ. ಇವು ಐ. ವಿ. ಅರಿವಳಿಕೆಯನ್ನು ಹೆಚ್ಚು ಸುಗಮವನ್ನಾಗಿ ಮಾಡುತ್ತವೆ. ಇದನ್ನು ಬಾಯಿ ಹಾಗೂ ಮೂಗನ್ನು ಮುಚ್ಚುವ ಮುಖವಾಡದ ಮೂಲಕ ನೀಡಲಾಗುತ್ತದೆ. ಈ ಮುಖವಾಡ ಒಂದು ಯಂತ್ರದ ಮೂಲಕ ಅರಿವಳಿಕೆ ವಸ್ತು ಹಾಗೂ ಆಮ್ಲಜನಕದ ಸೂಕ್ತ ಮಿಶ್ರಣವನ್ನು ರವಾನಿಸುತ್ತದೆ. ಶರೀರದಿಂದ ಹೊರ ಬಂದ ಇಂಗಾಲದ ಡೈ ಆಕ್ಸೈಡ್‌ನ್ನು ಹೊರ ಹಾಕುತ್ತದೆ.

ಕೆಲವೊಮ್ಮೆ ಅನಿಲ ಅರಿವಳಿಕೆ ವಸ್ತುವನ್ನು ನಳಿಕೆಯ ಮೂಲಕ ನೀಡಲಾಗುತ್ತದೆ. ಜಠರದ ವಸ್ತುಗಳು ಶ್ವಾಸಕೋಶ ಸೇರದಂತೆ ಈ ನಳಿಕೆ ತಡೆಯುತ್ತದೆ. ನಂತರ ಸ್ವಲ್ಪ ಗಂಟಲು ನೋವು ಬರಬಹುದು.

ಸ್ಥಳೀಯ ಅರಿವಳಿಕೆ

ಇದನ್ನು ದೇಹದ ಕೆಲವು ವಿಶಿಷ್ಟ ಭಾಗಗಳನ್ನು ನಿಶ್ಚೇತನಗೊಳಿಸಲು ಉಪಯೋಗಿಸಲಾಗುತ್ತದೆ. ನೋವು ತಿಳಿಯದಿದ್ದರೂ, ನಿಮಗಿಷ್ಟವಿದ್ದಲ್ಲಿ ಎಚ್ಚರವಾಗಿರಬಹುದು. ರೋಗಿ ವೈದ್ಯರ ಕೆಲವು ಸೂಚನೆಗಳಿಗೆ ಪ್ರತಿಸ್ಪಂದಿಸಬೇಕಾದ ಆವಶ್ಯಕತೆಯಿದ್ದಲ್ಲಿ ಈ ಅರಿವಳಿಕೆ ಉಪಯುಕ್ತ. ಉದಾಹರಣೆಗೆ: ಹೆರಿಗೆ ಸಮಯದಲ್ಲಿ ತಾಯಿ ಮಗುವಿನ ಜನನಕ್ಕೆ ನೆರವು ನೀಡಬೇಕಾದಾಗ ಈ ಅರಿವಳಿಕೆ ಉಪಯೋಗಕ್ಕೆ ಬರುತ್ತದೆ. ಸ್ಥಳೀಯ ಅರಿವಳಿಕೆ ನೀಡಿದಾಗ ನಿದ್ರೆಯ ಔಷಧಿ ನೀಡಿ ಆರಾಮವಾಗಿ ಇರುವಂತೆ ಮಾಡಬಹುದು.

ಬೆನ್ನುಹುರಿ ಅರಿವಳಿಕೆ

ಮೆದುಳಬಳ್ಳಿ ದೇಹದ ವಿಭಿನ್ನ ಭಾಗಗಳಿಂದ ಬರುವ ನೋವಿನ ಸ್ಪಂದನಗಳ ನಿಲ್ದಾಣವಿದ್ದಂತೆ. ಇದರ ಸುತ್ತಲಿನ ದ್ರವ ಚೀಲದಲ್ಲಿ ಅರಿವಳಿಕೆ ಮದ್ದನ್ನು ಚುಚ್ಚಿದಾಗ ಈ ನೋವಿನ ಸ್ಪಂದನಗಳನ್ನು ಮೆದುಳು ಮುಟ್ಟದಂತೆ ತಡೆಯಬಹುದು. ಇದನ್ನು ಕೆಳ ಉದರದ ಶಸ್ತ್ರಚಿಕಿತ್ಸೆಗೆ ಉಪಯೋಗಿಸಬಹುದು. ಇದನ್ನು ನೀಡುವುದರಿಂದ ಎಚ್ಚರ ತಪ್ಪುವುದಿಲ್ಲ. ಈ ಚುಚ್ಚುಮದ್ದು ನೀಡುವಾಗ ರೋಗಿ ಒಂದು ಬದಿಗೆ ತಿರುಗಿ ಮಲಗಬೇಕು. ಈ ಜುಚ್ಚುಮದ್ದಿನ ನೋವು ತಿಳಿಯದಂತೆ ಒಂದು ಸ್ಥಳೀಯ ಅರಿವಳಿಕೆ ಚುಚ್ಚುಮದ್ದನ್ನು ಮೊದಲು ನೀಡಲಾಗುತ್ತದೆ.

ಎಪಿಡ್ಯೂರಲ್ ಕಾಡಲ್ ಅರಿವಳಿಕೆ

ಇದನ್ನು ಕೆಲವೊಮ್ಮೆ ಬೆನ್ನುಹುರಿ ಅರಿವಳಿಕೆ ಬದಲು ಉಪಯೋಗಿಸಬಹುದು.

ಮೆದುಳು ಬಳ್ಳಿಯ ಹೊರ ಕವಚ ಡ್ಯೂರಾದ ಮೇಲಿನ ಜಾಗದಲ್ಲಿ ಮದ್ದನ್ನು ಚುಚ್ಚಲಾಗುತ್ತದೆ. ಬರಿಯ ನೋವನ್ನು ತಡೆಗಟ್ಟಿ ಮಾಂಸಖಂಡದ ಚಲನೆ ಇರುವಂತೆ ಔಷಧ ನಿಯಂತ್ರಿಸಬಹುದು. ಒಂದು ಪ್ಲಾಸ್ಟಿಕ್ ನಳಿಕೆಯ ಮೂಲಕ ಸುದೀರ್ಘ ಅರಿವಳಿಕೆ ನೀಡಬಹುದು.

ಶಸ್ತ್ರ ಚಿಕಿತ್ಸಾ ಮುನ್ನಾದಿನ

ಅನೇಕ ಶಸ್ತ್ರ ಚಿಕಿತ್ಸೆಗಳಿಗೆ ರೋಗಿ ಒಂದು ದಿನ ಮುಂಚಿತವಾಗಿ ಆಸ್ಪತ್ರೆಗೆ ದಾಖಲಾಗಬೇಕಾಗುತ್ತದೆ. ಇಲ್ಲಿ ವಿಶಿಷ್ಟ ಪರೀಕ್ಷೆ ಮಾಡಲಾಗುವುದು. ಅರಿವಳಿಕೆ ಹಾಗೂ ಶಸ್ತ್ರ ಚಿಕಿತ್ಸಾ ತಜ್ಞರು ರೋಗಿಯ ಆರೋಗ್ಯದ ಪ್ರಸಕ್ತ ಸ್ಥಿತಿಯ ಬಗ್ಗೆ ತಿಳಿದು ನೀಡಬಹುದಾದಂತಹ ಅರಿವಳಿಕೆ ವಸ್ತುವಿನ ಬಗ್ಗೆ ನಿರ್ಧರಿಸಲು ಸಹಾಯವಾಗುತ್ತದೆ.

ಇ. ಕೆ. ಜಿ

ಹೃದಯದ ಸ್ಥಿತಿ ತಿಳಿಯಲು-ಸಾಮಾನ್ಯವಾಗಿ ೪೦ ವರ್ಷ ದಾಟಿದ ಅಥವಾ ಹೃದಯದ ತೊಂದರೆ ಇರುವ ರೋಗಿಗಳಿಗೆ ಇ.ಕೆ.ಜಿ ಪರೀಕ್ಷೆ ಬೇಕಾಗುತ್ತದೆ. ಅರಿವಳಿಕೆ ತಜ್ಞರು ಮತ್ತು ಶಸ್ತ್ರ ಚಿಕಿತ್ಸಾ ತಜ್ಞರು ರೋಗಿಯು ಶಸ್ತ್ರ ಚಿಕಿತ್ಸೆಗೆ ಅರ್ಹರಾಗಿದ್ದಾರೆಂಬುದನ್ನು ದೃಢೀಕರಿಸಿಕೊಳ್ಳಬೇಕಾಗುತ್ತದೆ.

ಕ್ಷ-ಕಿರಣ

ಎದೆಯ ಕ್ಷ-ಕಿರಣ ವಿಶಿಷ್ಟವಾಗಿ ವಯಸ್ಸಾದವರಿಗೆ ಶ್ವಾಸಕೋಶದ ಬಗ್ಗೆ ತಿಳಿಯಲು ಇದು ಬೇಕಾಗುತ್ತದೆ. ರೋಗಿಯ ಶ್ವಾಸಕೋಶದ ಸ್ಥಿತಿ ಯೋಗ್ಯವಾಗಿದೆಯೆ ಎಂಬುದು ಇದರಿಂದ ತಿಳಿಯುತ್ತದೆ.

ಖಾಲಿ ಹೊಟ್ಟೆ

ರೋಗಿ ಏನನ್ನು ತಿನ್ನಕೂಡದು. ಧೂಮಪಾನ ಮಾಡಬಾರದು. ನೀರನ್ನು ಸಹ ಕುಡಿಯಕೂಡದು. (ಶಸ್ತ್ರ ಚಿಕಿತ್ಸೆಯ ಹಿಂದಿನ ದಿನದ ಮಧ್ಯರಾತ್ರಿಯಿಂದ) ಇವು ರೋಗಿಯ ಶರೀರವನ್ನು ಶಸ್ತ್ರ ಚಿಕಿತ್ಸೆ ಹಾಗೂ ಅರಿವಳಿಕೆಗೆ ಸಜ್ಜುಗೊಳಿಸಲು ಅವಶ್ಯಕ. ರೋಗಿ ಏನಾದರೂ ಕುಡಿದಿದ್ದರೆ ಅಥವಾ ತಿಂದಿದ್ದರೆ ಶಸ್ತ್ರ ಚಿಕಿತ್ಸೆ ರದ್ದಾಗಬಹುದು.

ಔಷಧೋಪಚಾರ

ಶಸ್ತ್ರ ಚಿಕಿತ್ಸೆಯ ಹಿಂದಿನ ರಾತ್ರಿ ಚನ್ನಾಗಿ ನಿದ್ರಿಸಿ ವಿಶ್ರಾಂತಿ ಪಡೆಯಲೆಂದು ಕೆಲವು ಔಷಧಿಗಳನ್ನು ರೋಗಿಗೆ ಕೊಡಬಹುದು. ಆಸ್ಪಿರಿನ್‌ನಂತಹ ಯಾವುದಾದರೂ ಮಾತ್ರೆಗಳನ್ನು ರೋಗಿ ಹಿಂದೆ ತೆಗೆದುಕೊಳ್ಳುತ್ತಿದ್ದರೆ ವಿಷಯವನ್ನು ಚಿಕಿತ್ಸಾ ತಜ್ಞರಿಗೆ ತಿಳಿಸಬೇಕು.

ವೈದ್ಯಕೀಯ ಚರಿತ್ರೆ

ರೋಗಿಯ ಹತ್ತಿರದ ಸಂಬಂಧಿಕರಿಗಿರುವ ಕಾಯಿಲೆಗಳ ಬಗ್ಗೆ ಉದಾ: ಸಕ್ಕರೆ ಕಾಯಿಲೆ, ರಕ್ತದೊತ್ತಡ ಮುಂತಾದವು ಇದ್ದಲ್ಲಿ ಇವು ರೋಗಿಗೆ ನೀಡುವ ಅರಿವಳಿಕೆ ವಸ್ತುವನ್ನು ನಿರ್ಧರಿಸುತ್ತವೆ. ರೋಗಿ ಈ ಹಿಂದೆ ಒಳಗಾಗಿರಬಹುದಾದ ಶಸ್ತ್ರಚಿಕಿತ್ಸೆ ಮತ್ತು ಅದರ ತೊಂದರೆ, ಹಿಂದೆ ನೀಡಿದ್ದ ಅರಿವಳಿಕೆ ಮತ್ತು ಅದರಿಂದ ಆದ ಪರಿಣಾಮ, ರೋಗಿ ತೆಗೆದುಕೊಳ್ಳುತ್ತಿರುವ ಔಷಧಿ ಮುಂತಾದ ವಿಷಯಗಳ ಬಗ್ಗೆ ವಿವರ ಅಗತ್ಯವಾಗಿರುತ್ತದೆ.

ಶಸ್ತ್ರಚಿಕಿತ್ಸಾಪೂರ್ವ

ರೋಗಿಗೆ ಸ್ನಾನಮಾಡಿಸಿ ಗಾಯಹಾಕುವೆಡೆ ಕೂದಲು ತೆಗೆಯಲಾಗುವುದು. ಆರಾಮವಾಗಿರಲು ನಿದ್ರೆಯ ಔಷಧಿ ನೀಡಬಹುದು. ಶಸ್ತ್ರಚಿಕಿತ್ಸೆಗೆ ಅರ್ಧಗಂಟೆ ಮೊದಲು ರೋಗಿಯನ್ನು ಕೊಠಡಿಗೆ ಕರೆದೊಯ್ಯಲಾಗುವುದು.

ಶಸ್ತ್ರಚಿಕಿತ್ಸಾ ವೇಳೆ

ಸ್ಥಳೀಯ ಅರಿವಳಿಕೆ ನೀಡಬೇಕಾದರೆ ಅನುಕೂಲಕರ ಸ್ಥಿತಿಯಲ್ಲಿ ಮಲಗಿಸುತ್ತಾರೆ. ಚುಚ್ಚುಮದ್ದು ನೀಡಿದ ಕೆಲವು ನಿಮಿಷಗಳ ಬಳಿಕ ಆ ಸ್ಥಳ ಮರಗಟ್ಟಲಾರಂಭಿಸುತ್ತದೆ. ಸಾಮಾನ್ಯ ಅರಿವಳಿಕೆಗೆ ಮಂಚದ ಮೇಲೆ ಮಲಗಿಸಿ ಮುಖವಾಡ ಹಾಕುತ್ತಾರೆ. ರಕ್ತನಾಳದಲ್ಲಿ ದ್ರವನೀಡುತ್ತಾರೆ. ಅರಿವಳಿಕೆ ನೀಡಿದೊಡನೆ ರೋಗಿಗೆ ನಿದ್ರೆ ಬರಲಾರಂಭಿಸುತ್ತದೆ. ಅರಿವಳಿಕೆ ನೀಡುವುದರೊಂದಿಗೆ ಅರಿವಳಿಕೆ ತಜ್ಞರು ರೋಗಿಯ ಹೃದಯದ ಕೆಲಸ, ಉಸಿರಾಟ, ಅದರ ಪ್ರಮುಖ ಪ್ರಕ್ರಿಯೆಗಳನ್ನು ನಿಯಂತ್ರಿಸುತ್ತಾರೆ. ಶರೀರಕ್ಕೆ ದ್ರವ ಬೇಕಾದಾಗ ಅದನ್ನು ನೀಡುತ್ತಾರೆ.

ಪುನಶ್ಚೇತನ ಕೊಠಡಿ

ಇಲ್ಲಿ ಅರಿವಳಿಕೆ ತಜ್ಞರು ವಿಶಿಷ್ಟ ಜವಾಬ್ದಾರಿಯುಳ್ಳ ವೈದ್ಯರಾಗಿರುತ್ತಾರೆ. ಶಸ್ತ್ರಚಿಕಿತ್ಸೆಯ ಕಾಲದಲ್ಲಿ ರೋಗಿ ಕಳೆದುಕೊಂಡ ದ್ರವವನ್ನು ಮತ್ತೆ ನೀಡುವುದು, ಶ್ವಾಸನಾಳ ಸ್ವಚ್ಛವಾಗಿದ್ದು ಉಸಿರಾಟ ಸುಗಮವಾಗಿರುವಂತೆ ನೋಡಿಕೊಳ್ಳುವುದು. ನೋವಿದ್ದರೆ ಔಷಧಿಕೊಡುವುದು ಇತ್ಯಾದಿ ಕೆಲಸಗಳನ್ನು ನಿರ್ವಹಿಸುತ್ತಾರೆ.

ಅರಿವಳಿಕೆ ತಜ್ಞರ ಇತರ ಸೇವೆಗಳು

ಅರಿವಳಿಕೆ ತಜ್ಞರು ಆಸ್ಪತ್ರೆಯ ಶಸ್ತ್ರಚಿಕಿತ್ಸಾ ಕೂಟದ ಪ್ರಮುಖ ಸದಸ್ಯರು. ವೈದ್ಯರಾಗಿ ಅವರು ಶಸ್ತ್ರಚಿಕಿತ್ಸೆ ಹಾಗೂ ತದನಂತರದ ಕಾಲದಲ್ಲಿ ರೋಗಿ ಶುಶ್ರೂಷೆಗೆ ಜವಾಬ್ದಾರರು. ಜೊತೆಗೆ ಇಂದಿನ ಅರಿವಳಿಕೆ ತಜ್ಞರು ಅನೇಕ ವೈದಕೀಯ ವಿಭಾಗಗಳಲ್ಲಿ ಪರಿಣತರು. ತೀವ್ರ ಶುಶ್ರೂಷಘಟಕ, ಸುಟ್ಟಗಾಯ ಕೇಂದ್ರಗಳು, ಅರ್ಬುದ ಕೇಂದ್ರಗಳು ಇಲ್ಲಿ ನೋವು ನಿವಾರಿತ ವಿಶೇಷ ತಜ್ಞರ ನೆರವಿನ ಅವಶ್ಯಕತೆಯನ್ನು ಅರಿವಳಿಕೆ ತಜ್ಞರು ಪೂರೈಸುತ್ತಾರೆ. ಶ್ವಾಸಕೋಶದ ತೊಂದರೆಗಳಾದ ಅಸ್ತಮಾ, ಎಂಫೈಸಿಮಾಗಳನ್ನು ನೋಡಿಕೊಳ್ಳುತ್ತಾರೆ. ರೋಗಿಗಳಿಗೆ ತುರ್ತು ಅರಿವಳಿಕೆ ನೀಡಬೇಕಾದಾಗ ಅದು ಅರಿವಳಿಕೆ ತಜ್ಞರಿಗೆ ಒಂದು ಅನನ್ಯ ಸವಾಲಾಗಿರುತ್ತದೆ.

ಮರಳಿ ಮನೆಗೆ

ಅರಿವಳಿಕೆ ಕ್ಷೇತ್ರದಲ್ಲಿನ ಹೊಸಪ್ರಗತಿ ಬಹಳಮಟ್ಟಿಗೆ ಇಂದಿನ ಶಸ್ತ್ರಚಿಕಿತ್ಸೆಯನ್ನು ಸುರಕ್ಷಿತವಾಗಿಸಿದೆ. ವೇದನಾರಹಿತ ಶಸ್ತ್ರಚಿಕಿತ್ಸೆಗೆ ಔಷಧ ನೀಡಲು ಹಾಗೂ ನಂತರ ರೋಗಿ ಪುನಶ್ಚೇತನದ ಮೇಲ್ವಿಚಾರಣೆ ನಡೆಸಲು ವಿಶಿಷ್ಟವಾಗಿ ತರಬೇತಿ ಪಡೆದ ಒಬ್ಬರೇ ವೈದ್ಯರೆಂದರೆ ಅರಿವಳಿಕೆ ತಜ್ಞರು. ಶಸ್ತ್ರಚಿಕಿತ್ಸೆ ಕೂಟದ ಇತರ ಸದಸ್ಯರೊಂದಿಗೆ ನಿಮ್ಮ ಆಸ್ಪತ್ರೆಯ ವಾಸ ಸುರಕ್ಷಿತ ಹಾಗೂ ಸುಖಕರ ಮಾಡಲು ಅರಿವಳಿಕೆ ತಜ್ಞರಿದ್ದಾರೆ.

ಚುನಾವಣೆ ಮತ್ತು ಭರವಸೆಗಳು

ಡಾ|| ಟಿ. ಶ್ರೀವೆಂಕಟರಮಣ
ಪ್ರಾಧ್ಯಾಪಕರು, ಸಂಖ್ಯಾಶಾಸ್ತ್ರ ವಿಭಾಗ
ಬೆಂಗಳೂರು ವಿಶ್ವವಿದ್ಯಾನಿಲಯ
ಜ್ಞಾನಭಾರತಿ, ಬೆಂಗಳೂರು-೫೬೦ ೦೫೬

ಮನೆಮನೆಯಲಿ ಮನಮನದಲಿ ತುಂಬಿದ ಈ ರಾಡಿ
ಹೆಸರಿಲ್ಲದ ಹೆಸರಿದೆ ಅದು ಆಶ್ವಾಸನೆಗಳ ಮೋಡಿ
ಕೆಲಸವ ಮಾಡಿ—ಇಲ್ಲ ಡ್ಯಾಡಿ
ಮಾತನ್ನಾಡಿ—ಎಲ್ಲ ರೆಡಿ !

ನಮ್ಮ ಮನೆ ಮಿನಿ ಭಾರತ, ಇರುವವರು ನಾವು ಒಟ್ಟು ಏಳು ಮಂದಿ—ನಾನು, ನನ್ನಾಕೆ, ನಾಲ್ವರು ಚಿರಂಜೀವಿಗಳು ಮತ್ತು ಅತ್ತೆಯವರು. ನಮ್ಮಲ್ಲಿ ಪೂರ್ಣ ಪ್ರಜಾಪ್ರಭುತ್ವ. ವರ್ಷಕ್ಕೊಮ್ಮೆ ಪ್ರತಿ ಯುಗಾದಿಯಂದು ಚುನಾವಣೆ. ಅತ್ತೆಯವರು ಪಕ್ಷಾತೀತೆ ಮತ್ತು ಸಾರ್ವಕಾಲಿಕ ಅಧ್ಯಕ್ಷೆ; ಚುನಾವಣೆಯಲ್ಲಿ ಮತದಾನ ಮಾಡದವರು ಮತ್ತು ಸ್ಪರ್ಧಿಸಲಾಗದವರು. ಉಳಿದವರದ್ದು ಬೇರೆ ಬೇರೆ ಪಕ್ಷ, ಪ್ರತಿಯೊಂದೂ ಒಂಟಿ ಸದಸ್ಯರದ್ದು. ಚುನಾವಣೆಯಲ್ಲಿ ಹೆಚ್ಚೆಂದರೆ ಇಬ್ಬರು ಸ್ಪರ್ಧಿಸಬೇಕೆಂಬ ನಿಯಮ. ಗೆದ್ದವರಿಗೆ ಪ್ರಧಾನಿ ಪಟ್ಟ ಮತ್ತು ವಿತ್ತಖಾತೆಯೂ ಸೇರಿದಂತೆ ಎಲ್ಲ ಮುಖ್ಯ ಅಧಿಕಾರಗಳು; ಸೋತವರಿಗೆ ಕೆಲಸಕ್ಕೆ ಬಾರದ ಚಾಕರಿಖಾತೆಗಳು. ಉದಾಹರಣೆಗೆ, ಊಟದ ತಟ್ಟೆ ಮತ್ತು ಅಡುಗೆಯ ಪಾತ್ರೆಗಳನ್ನು ತೊಳೆಯುವುದು, ಮನೆಯ ಮೂಲೆಯಲ್ಲಿರುವ ಖಾಸಗಿ ಜಾಗಗಳ ಸ್ವಚ್ಛತೆ, ನಿಗದಿತ ಹೊತ್ತಕ್ಕೆ ನಿಗದಿತ ಗುಣಮಟ್ಟದ ತರಕಾರಿಗಳನ್ನು ನಿಗದಿತ ಸಮಯಕ್ಕೆ ತರುವುದು—ಇವೆಲ್ಲ ಈ ವ್ಯಕ್ತಿಯ ಜವಾಬ್ದಾರಿ. ಹೀಗಾಗಿ ಒಂದು ರೀತಿಯ ಅವಮಾನ, ಜೊತೆಗೆ ಚಾಕರಿ ಮಾಡಬೇಕಾದ ಕಡ್ಡಾಯ—ಅದರಿಂದ ತಪ್ಪಿಸಿಕೊಳ್ಳುವಂತಿಲ್ಲ! ಆದ್ದರಿಂದ ಎಲ್ಲರ ಕಣ್ಣು ಪ್ರಧಾನಿ ಪಟ್ಟದ ಮೇಲೆಯೇ.

ಕಳೆದ ವರ್ಷ ನಾನೇ ಪ್ರಧಾನಿ; ಅದು ಅವಿರೋಧ ಆಯ್ಕೆ, ಒಡತಿ ಹೆರಿಗೆಗೆಂದು ತವರಿಗೆ ಹೋಗಿದ್ದರಿಂದ. ಮರಳಿ ಬರುತ್ತ ಅವಳು, ಕಿರಿಯನೊಬ್ಬನನ್ನು ಎತ್ತಿಕೊಂಡೇನೋ ಬಂದಳು, ಆದರೆ ಜೊತೆಗೆ ಈ ಬಾರಿ ತೀವ್ರಸ್ಪರ್ಧೆಯೂ ಏರ್ಪಡುವಂತಾಯಿತು. ಪ್ರಧಾನಿ ಹುದ್ದೆಯ ಆಕರ್ಷಣೆಗಿಂತಲೂ, ಸೋತು ನಗಣ್ಯ ಕೆಲಸಗಳನ್ನು ನಿಭಾಯಿಸುವುದು ನನಗೆ ಬೇಕಿರಲಿಲ್ಲ. ಹೀಗಾಗಿ ನಾನು ಬುದ್ಧಿಯೋಡಿಸಿ ಸಮಕಾಲೀನ ರಾಜಕೀಯ ಚಾಣಾಕ್ಷತನದಿಂದ ಚುನಾವಣಾ ತಂತ್ರ ರೂಪಿಸಿದೆ. ಪ್ರತಿ ಮತದಾನಿಯನ್ನೂ ಪ್ರತ್ಯೇಕ, ಪ್ರತ್ಯೇಕವಾಗಿ

ಕೆಂಡು ಮಾತಾಡಿಸಿದೆ. ನೀತಿ ನಿಯಮಗಳ ಸುಗಮ ಮುಂದುವರಿಕೆಯ ದೃಷ್ಟಿಯಿಂದ ಪ್ರಧಾನಿಯ ಬದಲಾವಣೆ ಯಾಕೆ ಹಿತವಲ್ಲವೆಂದು ಪರಿಪರಿಯಾಗಿ ವಿವರಿಸಿದೆ. 'ಮಮ್ಮಿಗೆ ಇನ್ನೂ ವಿಶ್ರಾಂತಿ ಆಗತ್ಯ' ಎಂದೂ ನುಡಿದೆ. ಜೊತೆಗೆ ಅಧಿಕಾರರೂಢನಾಗಿದ್ದ ನಾನು ಪ್ರತಿ ಮೋಟಗನಿಗೆ ಗುಟ್ಟಾಗಿ ಆಮಿಷಗಳನ್ನೊಡ್ಡಿದೆ. ಹಿರಿಯಳಿಗೆ ಸ್ವಯಂಚಾಲಿತ ವಾಹನ ಕೊಡಿಸುವೆನೆಂದೆ, ಎರಡನೆಯವಳಿಗೆ ಸುಂದರ ಕೈಗಡಿಯಾರ ನಿಡುವೆನೆಂದೆ ಮತ್ತು ಕುಮಾರ ಕಂಠೀರವನಿಗೆ ಸೈಕಲಿನ ವಾಗ್ದಾನ ಮಾಡಿದೆ. ಇದರ ಪ್ರತಿಕ್ರಿಯೆ ನನಗೆ ಅನುಕೂಲವಾಗುವಂತೆ ತೋರಿತು. ಜೊತೆಗೆ ಪಕ್ಕದ ಮನೆಯ ಅನಿತಾಳಿಂದ ದೊಡ್ಡವಳಿಗೆ, ಮೇಲಿನ ಮನೆಯ ಸುಮಾಳಿಂದ ಎರಡನೆಯವಳಿಗೆ ಮತ್ತು ಕ್ರಿಕೆಟಿನ ಗೌತಮನಿಂದ ಕುಮಾರನಿಗೆ ತಿಳಿಯ ಹೇಳಿ ಪ್ರಭಾವ ಬೀರಿದೆ. ಇವರೆಲ್ಲ ನಮ್ಮವರ ಗಳಸ್ಯಕಂಠಸ್ಯರು. ಕೊನೆಯ, ವರ್ಷದೊಳಗಿನ ಪೋರನಿಗೆ ಹೇಳಲು ಯಾ ಹೇಳಿಸಲು ಆಸ್ಪದವಿರಲಿಲ್ಲ—ಅವನ ಮತ ನನಗೆ ದಕ್ಕುವುದು ಕಷ್ಟವಿತ್ತು! ನಾನು ನನ್ನವಳನ್ನೂ ಈ ನಿಟ್ಟಿನಲ್ಲಿ ಮಾತನಾಡಿಸದೆ ಬಿಡಲಿಲ್ಲ. ಮಗು ಚಿಕ್ಕದಾಗಿರುವುದರಿಂದ ಗುರುತರ ಜವಾಬ್ದಾರಿ ಅವಳಿಗೆ ಈ ವರ್ಷ ಹಿತಕರವಲ್ಲವೆಂದೆ. ಅಧ್ಯಕ್ಷೆಯ ಮೂಲಕ ಈ ಅಭಿಪ್ರಾಯ ಮೂಡುವಂತೆಯೂ ಯತ್ನಿಸಿದೆ. ಆದರೆ ಈ ಪ್ರಯತ್ನ ಫಲಿಸಿತೋ, ಇಲ್ಲವೋ ಎಂಬುದು ಸ್ಪಷ್ಟವಾಗಲಿಲ್ಲ, ಬಿಗಿಮಾತಿನ ಬಿಗುಮಾನದ ಆ ಬಿಗಿ ಪರಿಸರದಲ್ಲಿ. ನನ್ನಾಕೆ ಒಂದು ಬಾರಿ, "ಗುರುತರ ಜವಾಬ್ದಾರಿ ನನಗೆ ಬೇಡವೆಂದರೆ, ಚಾಕರಿ ಖಾತೆಗಳನ್ನೂ ನೀವೇ ಇಟ್ಟುಕೊಳ್ಳಿ; ಎಲ್ಲವೂ ನಿಮಗೆ!" ಎಂದು ತಿರುಗುಬಾಣ ಬೆಸೆದು ನನ್ನನ್ನು ದಂಗುಬಡಿಸಿದಳು. ಆಗ ನಾನು ಅವಾಕ್ಕಾಗಬೇಕಾಯಿತು. 'ನೋಡು, ನಿನಗೆ ಸರಿಕಂಡಂತೆ ಮಾಡು, ಮಾರಾಯಿತಿ!' ಎಂದಷ್ಟೇ ಹೇಳಿ ವ್ಯವಹಾರ ಮುಗಿಸಿದೆ.

ಧಾತೃ ಸಂವತ್ಸರ ಸವೆದು ಈಶ್ವರ ಹತ್ತಿರವಾಗುತ್ತ ಬಂತು. ಅಧಿಕಾರದಲ್ಲಿದ್ದ ನಾನು ಪಾಯಸ-ಪರಮಾನ್ನ, ವಡೆ-ಆಂಬೊಡೆ ಎಂದು ತಿಂಡಿ ತಿನಿಸುಗಳ ಸರಣಿಯನ್ನಿಳಿಸಿ ನನ್ನ ದಕ್ಷತೆ ತೋರಿಸಲೆತ್ನಿಸಿದೆ. ಆದರೆ ಮನೆಯ ವಾತಾವರಣ ಬಿಗಿಯಾಗುತ್ತ ಹೋಯಿತು. ಚುನಾವಣೆ ಅನಿವಾರ್ಯವೆಂದಾಯಿತು. ಎಲ್ಲರೂ ಗಂಭೀರರೇ, ಕಿರಿಯ ಕೊನೆಯವನನ್ನು ಹೊರತುಪಡಿಸಿ! ನಾನು ಚುನಾಯಿತನಾದಲ್ಲಿ ನೀಡಿದ ಭರವಸೆಗಳನ್ನು ಕೂಡಲೇ ಈಡೇರಿಸುವೆನೆಂದು ಮತ್ತೆ ಮತ್ತೆ ಗುಟ್ಟುಗುಟ್ಟಾಗಿ ಚಿರಂಜೀವಿಗಳಿಗೆ ತಿಳಿಸಿದೆ. ಕೊನೆಗೆ ಉಗಾದಿಯ ಆ ಮಂಗಳವಾರ ಬಂದೇ ಬಂತು. ಸಂಜೆ ಐದಕ್ಕೆ ಮತದಾನ, ಕಣ ಸಿದ್ಧವಾಯಿತು. ನಾಲ್ಕರ ಹೊತ್ತಿಗೆ ಎಲ್ಲಿಗೋ ಹೊರಹೋದ ದೊಡ್ಡಮಗಳು ಐದರ ವೇಳೆಗೆ ಮನೆಯಿಂದ ನಾಪತ್ತೆ. ಎರಡನೆಯವಳು ಮಧ್ಯಾಹ್ನ ಬಿಸಿಬೇಳೆ ಭಾತ್ ತಿಂದಿದ್ದು ಜಾಸ್ತಿಯಾಯಿತೆಂದು ಮಲಗಿದ್ದಳು. ನಿದ್ದೆಯೋ, ನಟನೆಯೋ ಗೊತ್ತಿಲ್ಲ; ಅಂತೂ ಬಹಳ ಕಷ್ಟಪಟ್ಟು ಅವಳನ್ನು ಎಬ್ಬಿಸಿದ್ದಾಯಿತು. ಆಟಕ್ಕೆಂದು ಹೋಗಿದ್ದ ಹಿರಿಯ ಕುಮಾರನೇನೋ ವೇಳೆಗೆ ಸರಿಯಾಗಿ ಕಾಣಿಸಿಕೊಂಡ. ಮತದಾನ ಮುಗಿಯಿತು.

ಸಂಜೆ ಆರಕ್ಕೆ ಮತಗಳ ಎಣಿಕೆ. ನನಗೆ ಕುತೂಹಲ; ಚಾಕರಿ ತಪ್ಪಿಸಿಕೊಳ್ಳುವ ತವಕ! ಬಿದ್ದ ಮತಗಳು ಒಟ್ಟು ನಾಲ್ಕು. ನನಗೆ ಒಂದು, ನನ್ನವಳಿಗೆ ಮೂರು!! ಅತ್ಯಂತ ಕಿರಿಯನ ಮತ ಕೇಳುವ ಪ್ರಸಂಗ ಬರಲಿಲ್ಲ. ನನಗೆ ಮುಖಭಂಗವಾಯಿತು.

ಅಧ್ಯಕ್ಷೆಯೇನೋ ಸಾಂತ್ವನದ ಮಾತಾಡಿದರು. 'ಜೀವನದಲ್ಲಿ ಸೋಲು, ಗೆಲುವು ಇದ್ದದ್ದೇ' ಎಂದರು. 'ಸುಖ, ದುಃಖಗಳಲ್ಲಿ ಸಮಚಿತ್ತನಾಗಿ, ಫಲಾಪೇಕ್ಷೆಯಿಲ್ಲದೆ ಕೆಲಸ ಮಾಡಬೇಕೆಂಬ' ಗೀತಾಚಾರ್ಯನ ಆಣತಿಯನ್ನು ನೆನಪಿಸಿದರು.

ಅಧಿಕಾರದ ವರ್ಗಾವಣೆ ಎರಡು ದಿವಸಗಳ ಬಳಿಕ ಶುಭ ಗುರುವಾರದಂದು ನಡೆಯಿತು, ಅಧ್ಯಕ್ಷೆಯ ಸಮಕ್ಷಮದಲ್ಲಿ. ನಾನು ಮೂರು ದಿನ ಮಧ್ಯದ ಕಿರಿಯರಿಬ್ಬರನ್ನು ವಿಚಾರಿಸಿದೆ. 'ನೀವು ಬಯಸಿದ್ದನ್ನು ಕೊಡುವೆ ಎಂದಿದ್ದರೂ ನನಗೆ ನೀವು ಯಾಕೆ ಮತ ನೀಡಲಿಲ್ಲ?' ಮೊದಲು ಅವರಿಂದ ಉತ್ತರ ಬರಲಿಲ್ಲ. ಬಹಳ ಒತ್ತಾಯದ ಬಳಿಕ, ನಾನು ಅಧಿಕಾರದಿಂದ ಇಳಿದಿದ್ದನ್ನು ನೆನಪಿಸಿಕೊಂಡು ಧೈರ್ಯ ತಳೆದ ಕುಮಾರ ಮೆತ್ತಗೆ ಉಸುರಿದ, 'ಅಮ್ಮ ಕೇಳಿದಳು—ಇಪ್ಪತ್ತು ವರ್ಷಗಳಲ್ಲಿ ಮಾಡಿದ ನೂರಾರು ವಾಗ್ದಾನಗಳಲ್ಲಿ ಅಷ್ಟು ಎಷ್ಟನ್ನು ನಿಭಾಯಿಸಿದ್ದಾರೆ? ಆದ್ದರಿಂದ ಯೋಚಿಸಿ ಮತ ನೀಡಿ.' ಆಗ ನನಗೆ ತಿಳಿಯಿತು—ನನ್ನ ಹೀನಾಯ ಸೋಲಿಗೆ ಕಾರಣ. ನಾನು ಹತಾಶನಾಗಿ ಹೊರನೋಡಿದೆ. ಅಲ್ಲಿ ಮನೆಯ ಸಾಕುನಾಯಿ ಹಿಟ್ಲರ್ ಬಾಲ ಅಲ್ಲಾಡಿಸುತ್ತ ನಿಂತಿತ್ತು. ಅದು ಕೂಡ 'ನಿಮಗೆ ಹೀಗೆಯೇ ಆಗಬೇಕು' ಎನ್ನುವಂತೆ ಅನಿಸಿತು. 'ಸರಿ, ನನ್ನ ಅದೃಷ್ಟವಿಷ್ಟೇ. ಮುಂದಿನ ದಾರಿ ಯೋಚಿಯೋಣ'ವೆಂದುಕೊಂಡೆ ನಾನು. ಪಾತ್ರಪರಡಿಗಳನ್ನು ಅತಿ ಕಡಿಮೆ ಶ್ರಮದಲ್ಲಿ ಶುಭ್ರವಾಗಿಸುವ ಪೌಡರಿನ ಬಗ್ಗೆ ಚಿಂತಿಸಿದೆ. ಅಂಥದ್ದೇನಾದರೂ ನಿಮಗೆ ತಿಳಿದಿದ್ದಲ್ಲಿ ಆದನ್ನು ನನಗೆ ದಯವಿಟ್ಟು ತಿಳಿಸುವಿರಾ? ದೂರವಾಣಿ ಸಂಖ್ಯೆ : ೩೪೧೦೦೦೦.

* * * * * *

ವಿಶಿಷ್ಟಾರ್ಥಗಳು

ಯುಗಾದಿ : ರಾಹು, ಕೇತು ಮುಂತಾದ ಗ್ರಹಗಳು ನೂತನ ಪದವಿಗಳನ್ನು ಆಕ್ರಮಿಸಿ ಜನರಿಗೆ ತಕರಾರು ಆರಂಭಿಸಲು ಹೊಸ ಅವಕಾಶ.

ಹಬ್ಬ : ಬೆಲೆಗಳ ಪರಿವೆಯಿಲ್ಲದೆ ಹಣ ಖರ್ಚು ಮಾಡಲೇಬೇಕಾದ ಸನ್ನಿವೇಶ.

ಪರೀಕ್ಷೆ : ಪಾಠಗಳನ್ನು ಅಧ್ಯಾಪಕರು ಸರಿಯಾಗಿ ಕಲಿಸಿದ್ದಾರೆಯೇ ಇಲ್ಲವೇ ಎಂದು ಒರೆಗೆ ಹಚ್ಚುವ ವಿಧಾನ.

ಹಮಾಲಾ : ಹಲ್ವ ತಯಾರಿಯಲ್ಲಿ ತುಪ್ಪ-ಸಕ್ಕರೆಗಳನ್ನು ಅದಲು ಬದಲಾಗಿ ಬೆರೆಸಿದಾಗ ಸಿಗುವ ವಸ್ತು.

ಬೊಫೋರ್ಸ್ : ಸಿನಿಮಾದಲ್ಲಿ ಇರುವಂತೆ ಯಾವ ಪಾತ್ರಧಾರಿಯೂ ಜಖಂ ಆಗದ ಫಿರಂಗಿ ಯುದ್ಧ.

ವಿಷುಪುರುಷ : ಸಿಕ್ಕಿದ್ದನ್ನು ಧರಿಸಿ, ಬಳಸಿಯಾ ನೋಡಿ, ಆ ವಸ್ತುಗಳ ಬೆಲೆ ಏರಿಕೆಗೆ ಕಾರಣನಾಗುವ ಪುರುಷ. ಈ ಬಾರಿಯ ಈಶ್ವರ ಸಂವತ್ಸರದಲ್ಲಿ ಸುದೈವವೆಂದರೆ ಈತ ಬರಿಯ ಕೌಪೀನಧಾರಿಯಾಗಿ, ಬರಿಗಾಲಿನಲ್ಲಿ ನಡಿಗೆಯಿಂದ ಮೇಲೆ ನೋಡುತ್ತ ಹೋಗುತ್ತಾನಂತೆ. ಆದ್ದರಿಂದ ಯಾವ ವಸ್ತುವಿಗೂ ಬೆಲೆ ಏರುವ ಸಾಧ್ಯತೆ ಇಲ್ಲ!

ಗಜರಕ್ಷಣೆ

ಎ. ಕೇಶವಮೂರ್ತಿ
೧೬೯೩/೪, ಐದನೆಯ ಅಡ್ಡ ರಸ್ತೆ
ಮೂರನೆಯ ಮುಖ್ಯ ರಸ್ತೆ
ಕೃಷ್ಣಮೂರ್ತಿಪುರ, ಮೈಸೂರು ೫೭೦ ೦೦೪

ಆಫ್ರಿಕಾದ ಆನೆ ಸಾಕ್ಷಾತ್ ಗಜರಾಜ್ಞಿ. ನಿಂತಾಗ ಎರಡು ಮೀಟರ್ ಎತ್ತರ. ಇನ್ನು ತೂಕ 'ಕೇವಲ' ನಾಲ್ಕು ಟನ್! ಸುತ್ತಲಿನ ಕುರುಚಲು ಕಾಡು ಘನೀಭವಿಸಿ ಈ ಗಜ ಗೋಪುರ ಎದ್ದಿತೋ ಎಂಬಂಥ ದೃಶ್ಯ. ಈ ಹೆಣ್ಣಾನೆಗೊಂದು ಭವ್ಯ ಪರಿವಾರ ಉಂಟು: ಹೆಣ್ಣಾನೆಗಳ ಹಿಂಡು, ಮರಿಗಂಡುಗಳ ಡಂಡು. ಇದರ ಸೊಂಡಿಲಿಗೇ ಅಂತುಕೊಂಡಿರುವ ಎಳೆ ಮರಿಯ ದಂಡು. ರಾಜ್ಞಿಯ ಮನದೊಳಗೇನೋ ಸಂದೇಹ, ಆತಂಕ. ಗುಂಯಿಗುಡುತ್ತ ಸುತ್ತುತ್ತ ಮುತ್ತುತ್ತ ಇರುವ ಕೀಟಗಳ ಪೀಡೆ ಝಾಡಿಸಲು ಮೊರ ವಿಸ್ತಾರದ ಕಿವಿಯ ಹಾಲೆಗಳನ್ನು ಬಡಿಯುತ್ತಾಳೆ, ಸೊಂಡಿಲನ್ನು ಹಿಗ್ಗಾಮುಗ್ಗಾ ಹೊಸೆಯುತ್ತಾಳೆ. ಆದರೆ 'ಆತಂಕ' ಬಂತೇ ಬಂತು: ಅರಿಯದ ಎಡೆಯಿಂದ ನೇರ ಚಿಮ್ಮಿ ಬಂದು ಈಕೆಯ ಪಿರ್ರೆಯನ್ನು ಕುತ್ತಿತೊಂದು ಅಲ್ಯೂಮಿನಿಯಮ್ ಪಿಚಕಾರಿ. ಆ ಕ್ಷಣ ಮಂಪರಕಾರಿ ದ್ರವ ಗಜರಾಜ್ಞಿಯ ಧಮನಿಸೇರಿ ದೇಹ ಸರ್ವತ್ರ ಪಸರಿಸಿತು.

ಅರಿಯದ ಎಡೆ? ಎತ್ತರದಲ್ಲಿ ವಿಶೇಷ ಸದ್ದು ಮಾಡದೆ ಹಾರುತ್ತಿರುವ ಹೆಲಿಕಾಪ್ಟರ್ ಅದು. ಅದರೊಳಗೆ ಕುಳಿತಿದ್ದಾರೆ ಗಜರಕ್ಷಕರು: ಆಫ್ರಿಕಾ ಖಂಡದ ಈ ಭಾಗದಲ್ಲಿ ತಲೆದೋರಿರುವ ಭೀಕರ ಬರಗಾಲದಲ್ಲಿ ಆನೆಗಳ ರಕ್ಷಣೆ ಹೇಗೆ ಸಾಧ್ಯ? ಮನುಷ್ಯರೇ ಬೆಂಕಿಗೆ ಬಿದ್ದ ಮಿಡತೆಗಳಂತೆ ಪಟಪಟನೆ ಮಡಿಯುತ್ತಿರುವಾಗ, ಅವರನ್ನು ರಕ್ಷಿಸಲು ಅಂತಾರಾಷ್ಟ್ರೀಯ ಸಹಕಾರ ಆಯೋಗಗಳು ವ್ಯವಸ್ಥಿತವಾಗಿ ಕ್ರಿಯಾತತ್ಪರವಾಗಿರುವಾಗ, ಆನೆಗಳಿಗೂ ಅವೇ ಸೌಲಭ್ಯಗಳನ್ನು ಒದಗಿಸಬೇಡವೇ? ಆನೆ ಮೂಕ ಪ್ರಾಣಿ ಎಂದ ಮಾತ್ರಕ್ಕೆ ಅದರ ವೇದನೆ ಸಂಕಟ ಮೂಕವೇ? ಎಂದೇ ಈ ಗಜರಕ್ಷಣಾ ಯೋಜನೆ. ಇದರ ಅಧಿಕೃತ ನಾಮಧೇಯ "ಆಪರೇಶನ್ ಎಲಿ-ವ್ಯಾಕ್ಯುಯೇಷನ್"— ಎಲಿಫೆಂಟ್‌ಗಳನ್ನು ಇವ್ಯಾಕ್ಯುಯೇಶನ್ ಮಾಡುವ ಆಪರೇಶನ್ (ಗಜಸ್ಥಳಾಂತರಣ ಕ್ರಿಯೆ.)

ವನ್ಯಮೃಗರಕ್ಷಕ ಕ್ಲೈವ್ ಕೊಯೆಟ್ಸೀ ಎಂಬ ಪರಿಣತ ದಯಾರ್ದ್ರ ಹೃದಯಿಯು

ಆಧಾರ: ೧೯೯೬ರ ಮೇ 'ರೀಡರ್ಸ್ ಡೈಜೆಸ್ಟ್' ಸಂಚಿಕೆಯಲ್ಲಿನ ಡೇವಿಡ್ ಹಿಗ್ಗ್ನ ಅವರ "ಎಲಿಫೆಂಟ್ ರೆಸ್ಕ್ಯೂ" ಲೇಖನ.

ಯೋಜನೆ ಇದು: ಜಾಗೃತ ಆನೆಗೆ ಮಂಪರು ತಾರಕ ಬಾಣ ಹೊಡೆದು, ನಿದ್ರೆ ಬರಿಸಿ, ಆಗಳಿಗೆ ಅದನ್ನು ಎಚ್ಚರಿಕೆಯಿಂದ ಅದರ ಒಡಲಿಗೆ ಗಾಸಿ ಆಗದಂತೆ ಕಟ್ಟಿ, ಅಲ್ಲೇ ಸಿದ್ಧವಾಗಿ ನಿಂತಿರುವ ಲಾರಿಬೋನಿನಲ್ಲಿ ಪೇರಿಸಿ, ಮುಂದೆ, ಸುರಕ್ಷಿತ ಅನುಕೂಲ ಪ್ರದೇಶಕ್ಕೆ ಸ್ಥಳಾಂತರಿಸುವುದು. ಈ ಯೋಜನೆಗೆ ಬ್ರಿಟಿಷ್ ಸಂಸ್ಥೆಯೊಂದರಿಂದ ಧನ ಸಹಾಯ ಕೂಡಿ ಬಂದಿತು! ಯಾವ ಉನ್ನತ ಸ್ವಯಸೇವಾ ಯೋಜನೆಯೂ ಹಣದ ಅಭಾವದಿಂದ ಕುಂಠಿತವಾಗುವುದಿಲ್ಲ ಎನ್ನುವ ಸುಪರಿಚಿತ ಅನುಭವೋಕ್ತಿಗೆ ಇದೂ ಒಂದು ನಿದರ್ಶನ.

೧೯೯೧, ೯೨ರ ಕರಾಳ ಬರಗಾಲ. ಝಿಂಬಾಬ್ವೇಯ ಆನೆಗಳಿಗೆ ಕೊನೆಗಾಲವೇ ಕವಿದಂತಿತ್ತು. ಅಲ್ಲಿಯ ರಾಷ್ಟ್ರೀಯ ರಕ್ಷಿತಾರಣ್ಯ ಪೂರ್ತಿ ಅರಕ್ಷಿತವಾಗಿತ್ತು : ಮಳೆಯಿಲ್ಲದೆ ಹಸುರಿಲ್ಲ, ಹಸುರಿಲ್ಲದೆ ಉಸಿರಿಲ್ಲ ಇಂಥ ಭೀಕರ ಪರಿಸ್ಥಿತಿ. ಗಜಸ್ಥಳಾಂತರಣ ಕ್ರಿಯೆಗೆ ಪ್ರೇರಣೆ—ಗಜೇಂದ್ರ ಮೋಕ್ಷದ ಪ್ರವರ್ತನೆಗೆ—ನಾಂದಿ ಈ ಮೂಕ ಪ್ರಾಣಿಗಳ ದಯನೀಯ ಆಕ್ರಂದನ. ಆಗ ಆ ದಟ್ಟ ಕಾಡಿನಲ್ಲಿ ಉಳಿದಿದ್ದುದು ಕೇವಲ ೧೦೦೦ ಆನೆಗಳು. ಇಲ್ಲಿ ಇವುಗಳಿಗೆ ನೆಲೆ ನಾಶವಾಗಿತ್ತು. ಆದರೆ ಅಂದಾಜು ೩೨೦ ಕಿ.ಮೀ. ದೂರದ ಹಸುರು ಕಂದರದಲ್ಲಿ ಬದುಕಿನ ನೆಲೆ ಚಿಮ್ಮುತ್ತಿತ್ತು—ಆನೆಗಳ ಆಗಮನಕ್ಕೆ ಅದು ಕಾತರವಾಗಿತ್ತೋ ಎಂಬಂತೆ. ಹೀಗೆ ಈ ೧೦೦೦ ಜೀವಂತ ಭಾರ ಮತ್ತು ಗಾತ್ರ ಕಾಯಗಳ ಸುರಕ್ಷಿತ ಸ್ಥಳಾಂತರಣವೇ ಈ ಕೈಂಕರ್ಯದ ಉದ್ದೇಶ.

ಹನುಮಂತ ಸಂಜೀವಿನೀ ಪರ್ವತ ಒಮ್ಮೆಗೇ ಹೊತ್ತು ತಂದ—ಇದು ಕವಿ ಕಲ್ಪನೆ, ಮಾನವನ ಅದಮ್ಯ ಆಶಯ. ಆದರೆ ವ್ಯವಹಾರದಲ್ಲಿ ಇದು ಸಾಧ್ಯವೇ? ಹೌದು, ಕ್ಲೈವ್ ಕೊಯೆಟ್ಸೀಯವರ ನಿಷ್ಠಾವಂತ ತಂಡ ೧೯೯೩ರ ವೇಳೆಗೆ ೫೦೦ಕ್ಕಿಂತಲೂ ಹೆಚ್ಚು ಜೀವಂತ ಸಂಜೀವಿನೀ ಪರ್ವತಗಳನ್ನು ಸ್ಥಳಾಂತರಿಸಿ ಮತ್ತೆಯೂ ಕಾರ್ಯಮಗ್ನವಾಗಿತ್ತು. ಇಲ್ಲಿ ದುಡಿಮೆಯೇ ಉಸಿರು, ಮರಣವೇ ಕೊನೆ. ೧೯೯೪ರ ಹೊತ್ತಿಗಾಗುವಾಗ ಗಜರಾಜ ರಾಜ್ಞಿಯರು ಸ್ವಪರಿವಾರ ಸಹಿತ ಸ್ವಸ್ಥಳಾಂತರಿತ ನೆಲೆಯಲ್ಲಿ ಸ್ವಂತಾರಣ್ಯದಲ್ಲಿಯಂತೆಯೇ ಸ್ವತಂತ್ರವಿಹಾರಿಗಳಾಗಿದ್ದರು.

ಪ್ರಪಂಚದ ಪ್ರತಿ ಏಳು ಜನರಲ್ಲಿ ಒಬ್ಬ ಭಾರತೀಯ.

ಪ್ರತಿ ಒಂದೂವರೆ ಸೆಕೆಂಡಿಗೆ ಭಾರತದಲ್ಲಿ ಒಂದು ಮಗು ಜನಿಸಿದರೆ, ಪ್ರತಿನಿತ್ಯ ೫೫,೦೦೦ಕ್ಕೂ ಹೆಚ್ಚು ಮಕ್ಕಳು ಬದುಕುತ್ತಿವೆ.

ಪುಸ್ತಕ ಪರಿಚಯ

"ಅಮೇರಿಕಾ–ನಾನು ಕಂಡಂತೆ"—ಗ್ರಂಥಕರ್ತರು: ಶ್ರೀ ವಿತ್ತೂರರು (ಎಂ. ವಿ. ಭಟ್); ಪ್ರಕಾಶಕರು: ಜನಜೀವನ ಸಾಹಿತ್ಯ ಸದನ, ಚಿಕ್ಕಬಾಣಾವರ, ಬೆಂಗಳೂರು–೫೬೦೦೯೦; ಬೆಲೆ: ರೂ. ೪೦; ಪುಟ: ೧೪೩.

ಶ್ರೀ ವಿತ್ತೂರರರು, 'ಅಮೇರಿಕಾ–ನಾನು ಕಂಡಂತೆ' ಪುಸ್ತಕದ 'ಮೊದಲ ಮಾತಿ'ನಲ್ಲಿ ಅಂದರೆ ಮುನ್ನುಡಿಯಲ್ಲಿ ನಮ್ಮ ದೇಶದ ಹಲವಾರು ಕುಂದುಕೊರತೆಗಳ ಮೇಲೆ ಬೆಳಕು ಚೆಲ್ಲಿ, ಅವಕ್ಕೆ ತಕ್ಕ ಪರಿಹಾರವನ್ನೂ ಸೂಚಿಸುವ ಪ್ರಯತ್ನ ಮಾಡಿದ್ದಾರೆ. ಸ್ವತಂತ್ರರಾಷ್ಟ್ರವೆನಿಸಿದ ಭಾರತ ಈ ೫೦ ವರ್ಷಗಳಲ್ಲಿ ಹೇಗೆ ಅವನತಿಯತ್ತ ಸಾಗಿದೆ, ಎಂಬುದನ್ನು ಸೋದಾಹರಣವಾಗಿ ತಿಳಿಸಿದ್ದಾರೆ. ಸಾಲಮೇಳ, ಬಡಜನರ ಉದ್ಧಾರಕ್ಕಾಗಿ ಸರ್ಕಾರ ನಡೆಸುವ ಕ್ರಮಗಳು ನಿಶ್ಚಲವಾದ ಹಲವಾರು ನಿದರ್ಶನಗಳನ್ನು ನೀಡಿದ್ದಾರೆ.

ಇನ್ನು ಗ್ರಂಥದ ಮುಖ್ಯ ಭಾಗದಲ್ಲಿ ಹೊರದೇಶವನ್ನು ಒಮ್ಮೆಯೂ ನೋಡದವರಿಗೆ, ಉತ್ತಮ ಮಾರ್ಗದರ್ಶನವಿದೆ. ವಿದೇಶ ಪ್ರಯಾಣಕ್ಕೆ ಹೊರಡುವ ಮುನ್ನ ಏನೇನೆಲ್ಲ ಕ್ರಮಗಳನ್ನು ಅನುಸರಿಸಬೇಕು, ವೀಸಾ, ಪಾಸ್‌ಪೋರ್ಟ್, ಪೊಲೀಸ್ ತಪಾಸಣೆ, ಇತ್ಯಾದಿ ಎಲ್ಲ ಕಾನೂನಿನ ಕ್ರಮಗಳನ್ನು ಅವುಗಳ ಇತಿಮಿತಿಗಳನ್ನು ತಿಳಿಸಿಕೊಟ್ಟು ಮಹದುಪಕಾರ ಮಾಡಿದ್ದಾರೆ.

ಅಮೇರಿಕದಲ್ಲಿ ನೋಡತಕ್ಕ ಹಲವಾರು ಸ್ಥಳಗಳ ಪರಿಚಯ, ಮಾರ್ಗ, ವಾಹನ ಸೌಕರ್ಯ ಜತೆಗೆ ಪ್ರಯಾಣಿಕರು ಅನುಸರಿಸಬೇಕಾದ, ಭಾರತೀಯರಾದ ನಮಗೆ ಪರಿಚಯವಿಲ್ಲದ ಹಲವಾರು ಕ್ರಮ, ನಿಯಮಾವಳಿಗಳನ್ನು ಕೂಡ, ತಮ್ಮ ಅನುಭವದ ಆಧಾರ ಕೊಟ್ಟು ವಿವರಿಸಿದ್ದಾರೆ.

ಅಲ್ಲಿನ ಜನಜೀವನದ ಒಳಿತು ಕೆಡಕುಗಳ ಬಗ್ಗೆಯೂ ಸಾಕಷ್ಟು ವಿವರಣೆ ಈ ಗ್ರಂಥದಲ್ಲಿದೆ. ನುಡಿದಂತೆ ನಡೆವ, ನಡೆದಂತೆ ನುಡಿವ ಸತ್ಯವಂತಿಕೆಯನ್ನು ಜನರ ಎಲ್ಲ ವ್ಯವಹಾರಗಳಲ್ಲೂ ಕಂಡು ಬರುವುದನ್ನು, ಸರಕಾರದ ಕಠಿಣ ಶಿಕ್ಷಾಕ್ರಮ, ಇತ್ಯಾದಿಗಳ ಹತ್ತು ಹಲವು ಸನ್ನಿವೇಶಗಳನ್ನು ತೋರಿಸಿದ್ದಾರೆ. ನಮ್ಮಲ್ಲಿನ 'ಜನ ಸೇವೆಯೇ ಜನಾರ್ಧನ ಸೇವೆ'–ಎಂಬ ಢೋಂಗಿ ಸೊಲ್ಲಿನ ಸ್ಥಾನದಲ್ಲಿ ಅದರ ನಿಜವಾದ ಅರ್ಥದಲ್ಲಿರುವ ಅಮೇರಿಕನರ ಆ ನಗುಮುಖ,

ಶಿಷ್ಟಾಚಾರ, ಸೇವಾತತ್ಪರತೆ, ಸಹಾಯಕ ಮನೋವೃತ್ತಿ, ನಮ್ಮ ಕರೆಗೆ ತಕ್ಷಣವೇ ಗಮನ ಹರಿಸುವುದು, ವ್ಯಾಪಾರಕ್ಕೆ ಹೋದಾಗ ನಗೆಯ ಸ್ವಾಗತ, ವ್ಯಾಪಾರ ಮುಗಿಸಿ ಹೊರ ಬಂದಾಗ ಧನ್ಯವಾದ ಇತ್ಯಾದಿಯಾಗಿ ಹಲವು ಉತ್ತಮ ಗುಣಗಳ ಪ್ರಶಂಸೆ ಇದೆ.

ಆದರ ಜತೆ, ಅಮೆರಿಕದಲ್ಲೇ ವಾಸ ಇದ್ದರೂ ಅವರ ಸದ್ಗುಣಗಳನ್ನು ಕಲಿಯದೆಯೇ ಇರುವ ಭಾರತೀಯರ ಅಂಗಡಿ ಹೋಟೆಲುಗಳಲ್ಲಿನ ಸೇವಾಕ್ರಮಗಳು ಭಾರತೀಯವೇ ಆಗಿವೆಯೆನ್ನದೆ ವಿಧಿಯಿಲ್ಲವೆಂದು ತಮ್ಮ ವ್ಯಸನವನ್ನೂ ವ್ಯಕ್ತಪಡಿಸಿದ್ದಾರೆ.

ಅಮೆರಿಕ ಭಾರತಗಳನ್ನು ತುಲನಾತ್ಮಕವಾಗಿ ವಿಮರ್ಶಿಸುತ್ತಾ ಹಲವು ವೈಶಿಷ್ಟ್ಯಗಳನ್ನು ವಿವರಿಸಿದ್ದಾರೆ. ಉದಾಹರಣೆಗೆ,– "ಅಮೆರಿಕದಲ್ಲಿ ಮೈಮುರಿದು ದುಡಿಯುವವರಿಗೆ ಇರುವಷ್ಟು ಮರ್ಯಾದೆ, ಗೌರವಗಳು ಬೇರೆ ಯಾರಿಗೂ ಇಲ್ಲ."

ಶ್ರೀ ಮಿತ್ತೂರರು ತಮ್ಮ 'ಮೊದಲ ಮಾತಿನಲ್ಲಿ' ಹೇಳಿಕೊಂಡಂತೆ ಭಾರತ ಮತ್ತು ಅಮೆರಿಕ, ಎರಡೂ ರಾಷ್ಟ್ರಗಳ ಸಾಮಾಜಿಕ ಮತ್ತು ರಾಜಕೀಯ ಕುಂದು ಕೊರತೆಗಳನ್ನು ಎತ್ತಿತೋರಿಸುವ ಪ್ರಯತ್ನ ಮಾಡಿದ್ದಾರೆ. ಒಂದೆಡೆ ಅಮೆರಿಕವನ್ನು ಅವರ ಶಿಸ್ತಿನ ವ್ಯವಹಾರ ಸ್ವಚ್ಛತೆಯನ್ನು ಮುಕ್ತಕಂಠದಿಂದ ಹೊಗಳುತ್ತಾ, ಇನ್ನೊಂದೆಡೆ ಅಷ್ಟೇ ಮುಕ್ತವಾಗಿ ಅಲ್ಲಿನ ಮುಕ್ತ ಲೈಂಗಿಕತೆ–ಯಾವುದೇ ಕಟ್ಟುಪಾಡುಗಳಿಲ್ಲದ–ನಿರ್ಲಜ್ಜತೆಯ ಬಗ್ಗೆ ಕಾದು ಕೆಂಪಾದ ಕಬ್ಬಿಣದ ಸಲಾಕೆಯಂಥ ಮಾತಿನ ಮೊನೆಯಿಂದ ಬರೆಯೆಳೆಯಲೂ ಹಿಂಜರಿದಿಲ್ಲ. ಬೀದಿ, ಪಾರ್ಕುಗಳೆನ್ನದೆ ವಯಸ್ಸಿನ ನಿರ್ಬಂಧ ಕೂಡ ಇಲ್ಲದೆ ಹದಿವಯಸ್ಸಿನವರಿಂದ ಮುದುಕರವರೆಗೂ ನಡೆವ ಸ್ವೈರವೃತ್ತಿಯನ್ನು ಕಂಡು ಭರ್ತೃಹರಿಯ ಮಾತಿನಲ್ಲಿ–ಮನುಷ್ಯರೂಪೇಣ ಮೃಗಾಶ್ಚರಂತಿ ಅರ್ಥಾತ್ ಮನುಷ್ಯ ರೂಪದ ಮೃಗಗಳು ಸಂಚರಿಸುತ್ತಿವೆ" ಎಂದು ಕುಟ್ಟೀಕರಿಸಿದ್ದಾರೆ.

ಇನ್ನು ಭಾರತದ ಬಗ್ಗೆ ಬರೆಯುತ್ತಾ ನಮ್ಮಲ್ಲಿ ಇದುವರೆಗೆ ಹಣ ಪೋಲಾದ ಮತ್ತು ಆಗುತ್ತಿರುವ ಹಲವು ಯೋಜನೆಗಳನ್ನು ಪ್ರಸ್ತಾಪಿಸಿದ್ದಾರೆ. ಅಶೋಕನ ಕಾಲದಲ್ಲಿ ಕೂಡ ದುಡಿಮೆ ಇಲ್ಲದ ಅಲಸಿ ಜೀವನಕ್ಕೆ ಪ್ರೋತ್ಸಾಹ ನೀಡಿದ್ದರಿಂದ ಭಾರತದ ಅವನತಿ ಹೇಗಾಯಿತೆಂಬ ಚಾರಿತ್ರಿಕ ಅನುಭವದ ಪಾಠವನ್ನು ನೆನಪಿಸುತ್ತಾ, ಪ್ರಸ್ತುತ ಸ್ವತಂತ್ರ ಭಾರತದ ಕೃಷಿಸಾಲ ಮನ್ನಾ, ಸಾಲಮೇಳ, ಅಧಿಕಾರಿವರ್ಗಗಳ ನಿರ್ಲಕ್ಷ್ಯ, ದುಡಿಮೆಯಿಲ್ಲದೆ ಶ್ರೀಮಂತರಾಗುವ ಪ್ರವೃತ್ತಿಗೆ ದೊರಕಿದ ಪ್ರೋತ್ಸಾಹ ಇತ್ಯಾದಿಯಾಗಿ ಭಾರತೀಯರ ನೈತಿಕ ಶಾರೀರಿಕ ಅವನತಿಯ ಹಲವು ಕಾರಣಗಳನ್ನು ಸ್ಪಷ್ಟವಾಗಿ, ಕೆಲವೆಡೆ, ವ್ಯಂಗ್ಯ, ನಗೆ ಚಟಾಕಿಗಳಿಂದ ರಂಜನೆಯುಂಟುಮಾಡುತ್ತಾ ಸತ್ಯವನ್ನು ಬಯಲು ಮಾಡಿದ್ದಾರೆ. ವಿದ್ಯಾರ್ಥಿಗಳು ನಕಲು ಹೊಡೆಯುವುದನ್ನು ಪ್ರೋತ್ಸಾಹಿಸುವ, ವೈದ್ಯಕೀಯ ನಾಪಾಸು ವಿದ್ಯಾರ್ಥಿಗಳಿಗೆ ಕೂಡ ಕೃಪಾಂಕಗಳನ್ನಿತ್ತು ಪದವಿ ನೀಡಿ, ಜನರ ಪ್ರಾಣ, ಆರೋಗ್ಯಗಳನ್ನು ಪಣಕ್ಕೆ ಒಡ್ಡುವ ನಮ್ಮ ಶಿಕ್ಷಣ ಇಲಾಖೆಯ

ಬೌದ್ಧಿಕ ದಿವಾಳಿತನವನ್ನೂ ತಿಳಿಸಲು ಮರೆತಿಲ್ಲ. ಒಂದು ರಾಜ್ಯದ ಮುಖ್ಯ ಮಂತ್ರಿಯಾದವರು ಇಂಥ ಕಾರ್ಯಗಳಿಗೆ ಆದ್ಯತೆ ನೀಡುವುದಾದರೆ ನಾವು ಎತ್ತ ಸಾಗಿದ್ದೇವೆ, ಎಂಥ ಪ್ರಪಾತದೊಳಕ್ಕೆ ನಮ್ಮನ್ನೇ ನಾವು ತಳ್ಳಿಕೊಳ್ಳುತ್ತಿದ್ದೇವೆ, ಎಂದು ಕಳಕಳಿಯಿಂದ ಪ್ರಶ್ನಿಸಿದ್ದಾರೆ.

ಇನ್ನೊಂದೆಡೆ ಅಮೆರಿಕದಲ್ಲಿ ಉನ್ನತಿಯ ಹಲವು ಸಾಧನೆಗಳಿದ್ದಾಗ್ಯೂ ಭಾರತದ ಪರಂಪರಾಗತ ಸಂಸ್ಕೃತಿಯು ಮುಂದೆ ಸೂರ್ಯನ ಮುಂದಿನ ಮೋಂಬತ್ತಿಯಂತೆ ಅಮೆರಿಕನ್ನರ ಆಂತರಿಕ ಸೌಂದರ್ಯ ಪ್ರೀತಿಕಳೆಯನ್ನು ಬೀರುತ್ತಿರುವುದೆಂದು ಬರೆದಿದ್ದಾರೆ. ಹೀಗಿದ್ದರೂ ನಾವು ಭಾರತೀಯರು ಅಮೆರಿಕಾದಿಂದ ಕಲಿಯಬೇಕಾದ್ದು ಬಹಳಷ್ಟಿದೆಯೆಂದು ಸಮರ್ಥನೀಯವಾಗಿ ಪ್ರತಿಪಾದಿಸಿದ್ದಾರೆ. ಶಿಸ್ತು, ನೈರ್ಮಲ್ಯಗಳ, ನಿರ್ವಂಚನೆಯ ಪಾಠ ಬಾಲ್ಯದಲ್ಲೇ ದೊರಕುವುದು, ಅಪರಾಧಿ ತಪ್ಪಿಸಿಕೊಳ್ಳಲು ಅಸಾಧ್ಯವಿರುವುದು, ಅಪರಾಧಕ್ಕೆ ತಕ್ಕ ಶಿಕ್ಷೆ ಅನುಭವಿಸಲೇಬೇಕಾದ ನ್ಯಾಯನಿಷ್ಠುರತೆ ಇತ್ಯಾದಿ ಹಲವು ವಿಚಾರಗಳಲ್ಲಿ ಅಮೆರಿಕನ್ನರಿಗೂ ನಮಗೂ ಇರುವ ವ್ಯತ್ಯಾಸವನ್ನು ತೋರಿಸುವ, ಒಟ್ಟಿನಲ್ಲಿ ಓದಲು ಅರ್ಹವಾದ ಪುಸ್ತಕವಿದು. ನಮ್ಮ ಜನರಿಗೆ, ರಾಜಕಾರಣಿಗಳಿಗೆ ಒಂದು ಕಿವಿಮಾತು ಹೇಳಿದ್ದಾರೆ—ಒಂದು ಹತ್ತು ವರ್ಷದ ಮಟ್ಟಿಗಾದರೂ, ಜಾತಿ, ಮತ, ದೇವರನ್ನು ಮನೆಯಿಂದ ಹೊರಗೆ ಬರಲು ಬಿಡದಿದ್ದರೆ ದೇಶಕ್ಕೆ ಒಳಿತಾದೀತೆಂದು, ನಮ್ಮ ರಾಜಕಾರಣಿಗಳ ಆಷಾಢಭೂತಿತನವನ್ನು ವಿವಸ್ತ್ರಗೊಳಿಸುತ್ತಾ, "ಜಾತ್ಯಾತೀತ, ಅತೀತ"ವೆಂದು ಹೇಳುತ್ತಾ ಜಾತಿಯ ಮೂಲಕವೇ ದೇಶದ ಉದ್ದಗಲವನ್ನೂ ಜಾತಿಯ ಅಳತೆಗೋಲಿಂದಲೇ ಅಳೆಯುತ್ತಾ ಬಂದಿದ್ದಾರೆಂಬ ವಿಚಾರವನ್ನೂ ತಿಳಿಸಿದ್ದಾರೆ. ಭಾಷೆ ಸುಂದರವಾಗಿದೆ. ಮಾರ್ಮಿಕವಾಗಿದೆ, ಆದರೆ ಕೆಲವು ಪದಪ್ರಯೋಗಗಳು ಹವ್ಯಕರ ಮನೆಮಾತಿನಲ್ಲಿ ಮಾತ್ರ ಕಂಡುಬರುವಂಥವುಗಳಾದ್ದರಿಂದ ಇತರರಿಗೆ ಸ್ವಲ್ಪ ಅಸ್ಪಷ್ಟವೆನಿಸಲೂಬಹುದು. ಉದಾಹರಣೆಗೆ 'ಕರೆಮಣಿ' ಅರ್ಥಾತ್ ಕರೆಗಂಟೆ. ಕಾಲಿಂಗ್ ಬೆಲ್; ಕಣ್ಣೆತ್ತದಷ್ಟು–ಅಂದರೆ ದೃಷ್ಟಿಗೆ ಗೋಚರವಾಗುವುದಕ್ಕಿಂತಲೂ ಮುಂದಕ್ಕೆ ಅಥವಾ ದಿಗಂತಕ್ಕಿಂತಲೂ ಆಚೆಗೆ. ಪುಸ್ತಕವು ಉದ್ದಕ್ಕೂ ಓದಿಸಿಕೊಂಡು ಹೋಗುತ್ತದೆ. ಮಾತು ಮೊನಚಾಗಿದೆ. ಚಾವಟಿ ಏಟಿನಂತೆ ಬಿರುಸೂ ಆಗಿದೆ. ಪುಸ್ತಕದಲ್ಲಿ ಉದ್ದಕ್ಕೂ ಭಾರತ, ಅಮೇರಿಕಾಗಳ ತುಲನೆ ನಡೆದಿದೆ. ಆದ್ದರಿಂದ ಗ್ರಂಥದ, ಅಮೆರಿಕ–ನಾನು ಕಂಡಂತೆ ಈ ಹೆಸರು ಅಪೂರ್ಣವಾದಂತೆನಿಸುತ್ತದೆ.

ಎದ್ದು ಕಾಣುವ ಇನ್ನೊಂದು ಅಂಶವೆಂದರೆ ಅಧ್ಯಯನ ಮಾಡತಕ್ಕವರಿಗೆ ಕೂಡ ಅನುಕೂಲವಾಗುತ್ತಿರಬಹುದಾದ 'ನಿಬಂಧತೆ'ಯ ಕೊರತೆ; ವಿಚಾರ ಸರಣಿಯಲ್ಲಿ ಸುವ್ಯವಸ್ಥೆ ಇನ್ನೂ ಸಮರ್ಪಕವಾಗಿರುತ್ತಿದ್ದರೆ ಹೆಚ್ಚು ಪ್ರಭಾವಶಾಲಿಯಾಗಿ ಮನಮುಟ್ಟುತ್ತಿತ್ತು ಎಂಬ ಅಭಿಪ್ರಾಯ ಮೂಡುತ್ತದೆ. ಕೊನೆಯದಾಗಿ, ನಮ್ಮನ್ನು ಚಿಂತನೆಗೆ ಹಚ್ಚುವ ಒಂದು ಪ್ರಸಂಗದ ವಿವರಣೆ. ಅದೆಂದರೆ ಗೋಮಾತೆಯರ ಸ್ವರ್ಗಾರೋಹಣ! "ಜಗ

ತ್ರಿನ ಜೀವಕೋಟಿಗಳೆಲ್ಲ ನರರ ಸುಖ ಭೋಗಕ್ಕಾಗಿ" ಎಂದು ತಿಳಿವ ಜನರಿಗೆ ಕುರಿಯಾದರೇನು, ಹಸುವಾದರೇನು? ಹುಲುಸಾಗಿ ಬೆಳದ ಗೋವುಗಳ ಸಾಲು ಸಾಲುಗಳು ಕ್ಷಣಾರ್ಧದಲ್ಲಿ ರಕ್ತ, ಮಾಂಸ, ಮೂಳೆಗಳಾಗಿ ವಿಭಜನೆ ಹೊಂದಿ, ಟಿನ್ನು ಗಳಲ್ಲಿ ಭದ್ರಗೊಂಡು ಹೊರ ಸಾಗುವ ದೃಶ್ಯ! ಯಂತ್ರರಾಕ್ಷಸರ ಜತೆ ಪೈಪೋಟಿಗೆ 'ಲಾಥೂರಿ'ನ ಭೂಕಂಪವೂ ಸಾಟಿಯಾಗ ಲಾರದೆಂಬ ಕಠೋರ ಸತ್ಯ ಮನದಲ್ಲಿ ಮನೆ ಮಾಡಿ ಜುಗುಪ್ಸೆ ಹುಟ್ಟಿಸುತ್ತದೆ—ಮಾನವ ಜನ್ಮ ದೊಡ್ಡದೇ? ಹಸುವಾಗಿ, ಹಾಲಾಗಿ, ಹೊಲ ಗದ್ದೆಯ ಪೈರು ಪಚ್ಚೆಗಳಾಗಿ, ಹಸುವಿನ ಭೂತಕ್ಕೆ ಪಾರಣೆಯಾಗಿ, ಕೊನೆಗೆ ಕಾಲಿನ ಎಕ್ಕಡವಾಗಿ ಬಾಳುವುದು ದೊಡ್ಡದೇ? ಎಂದು ನಮ್ಮನ್ನು ನಾವೇ ಪ್ರಶ್ನಿಸಿಕೊಳ್ಳುವಲ್ಲಿ ಪ್ರಚೋದನೆ ನೀಡುತ್ತದೆ.

ಸರಸ್ವತಿ ಬಡೆಕ್ಕಿಲ
ಎಂ. ೪೭, ೩ನೇ ಹಂತ
ಜೆ.ಟಿ.ಕೆ. ಬಡಾವಣೆ, ಕುವೆಂಪು ನಗರ
ಮೈಸೂರು-೫೭೦ ೦೨೩



ಭಾರತದಲ್ಲಿ ಪ್ರತಿವರ್ಷವೂ ಹೆಚ್ಚುವ ೧೪ ದಶಲಕ್ಷ ಜನಸಂಖ್ಯೆಗೆ ಹೆಚ್ಚುವರಿಯಾಗಿ ಪ್ರತಿವರ್ಷಕ್ಕೆ ೧,೨೬,೫೦೦ ಶಾಲೆಗಳು, ೩,೭೨,೫೦೦ ಉಪಾಧ್ಯಾಯರು, ೨೫,೦೭,೦೦೦ ಮನೆಗಳು, ೧,೮೭,೪೪,೦೦೦ ಮೀಟರ್ ಬಟ್ಟೆ, ೧,೨೫,೪೫,೩೦೦ ಕ್ವಿಂಟಲ್ ಆಹಾರ ಹಾಗೂ ೪೦,೦೦,೦೦೦ ಉದ್ಯೋಗಾವಕಾಶಗಳು ಸೃಷ್ಟಿಯಾಗಬೇಕಾಗಿರುತ್ತವೆ.

—ಭಾರತ ಸರ್ಕಾರದ ಸಚಿವಾಲಯ ಪ್ರಕಟಣೆ

Reg. No. KRNN.29 / WPP 6

LICENCE No. 21
LICENCED TO POST WITH PAYMENT

ಜಿ. ಟಿ. ನಾರಾಯಣರಾವ್ ಅವರ

'ನಕ್ಷತ್ರ ವೀಕ್ಷಣೆ'

ಎರಡನೆಯ ಮುದ್ರಣದಲ್ಲಿ ಸಮಿತಿಯಿಂದ ಪ್ರಕಟವಾಗಿ ಮಾರಾಟಕ್ಕಿದೆ. ೧೨೦ ಪುಟಗಳ ಆಫ್‌ಸೆಟ್ ಮುದ್ರಣದ ಅಂದವಾದ ಈ ಕೃತಿಯ ಬೆಲೆ ಕೇವಲ ೨೦-೦೦ ರೂ.ಗಳು ಮಾತ್ರ.

"ಗಗನವನು ನೋಡು ಮೈ ನೀಲಿಗಟ್ಟುವವರೆಗೆ"
ಎಂದು ಉದ್ಗರಿಸಿದರು ಕವಿ ಕುವೆಂಪು.

ಗಗನವನು ನೋಡಬೇಕು ಏಕೆ?

"ಅದು ಅಲ್ಲಿ ಇರುವುದರಿಂದ! ಅದು ನಮಗೆ ಎಟಕದಿರುವುದರಿಂದ
ಇರುವುದೆಲ್ಲವಬಿಟ್ಟು ಇರದುದರೆಡೆಗೆ ತುಡಿವುದೆ ಜೀವನ"

ಆಕಾಶ ನಮ್ಮ ಅಹಮಿಕೆಗೆ ಬ್ರಹ್ಮಾಸ್ತ್ರ, ನಿಶಿತಮತಿಗೆ ಸವಾಲು, ಹೃದಯಕ್ಕೆ ಅಮೃತಕುಂಭ. ಸಕಲ ಜ್ಞಾನವಿಜ್ಞಾನಗಳ ಆಕರ. ಅಂತಿಮವಾಗಿ ವ್ಯೋಮವೇ ನಾಗರಿಕತೆಯ ಇತಿಹಾಸವೆಂದರೆ ಖಗೋಳ ವಿದ್ಯಮಾನಗಳಿಗೆ ಬರೆದ ವ್ಯಾಖ್ಯಾನ.

'ನಕ್ಷತ್ರ ವೀಕ್ಷಣೆ' ಇಂಥ ಒಂದು ಪ್ರಾಥಮಿಕ ವ್ಯಾಖ್ಯಾನ.

ಪ್ರತಿಗಳಿಗಾಗಿ ಸಂಪರ್ಕಿಸಿ:

ಪ್ರಧಾನ ಸಂಪಾದಕ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ನಂ. 5/1, ವಿನೋಬಾ ರಸ್ತೆ
ಮಾನಸಗಂಗೋತ್ರಿ, ಮೈಸೂರು-೫೭೦೦೦೬

Edited by Chandrashekhararadhya, Printed by Papanna
Printed & Published by Karnataka State Adult Education Council, 5/1, Vinoba Road, Manasa Gangothri, Mysore-570 006.

Phone: 512485